॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಲಿಂಗಾಯತ ದರ್ಶನ

ಮಾಸಿಕ

**ಸಂಪುಟ : ೭** **ಮಾರ್ಚ ೨೦೨೦** **ಸಂಚಿಕೆ : ೦೩**



ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**

**ಡಾ॥ ಎನ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ

ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ

ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ

ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ–೫೯೦೦೧೦



**ದೂ:೦೮೩೧–೨೪೦೭೧೫೭** ***email:basavaguru@rediffmail.com***

***Web: www.rudrakshimath.in***


**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರುವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್ ಮುಖಾಂತರ **"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**


* ಸಂಪಾದಕೀಯ ೨
* ಅಂತರಂಗ–ಬಹಿರಂಗ ಪೂಜೆ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ಬಸವಣ್ಣ ಮತ್ತು ನವನಿರ್ಮಾಣ ಧೋರಣೆಗಳು ೬
  - **ಡಾ. ಬಸವರಾಜ ಮಲಶೆಟ್ಟಿ**
* ಕವಿ ಚಾಮರಸ ಚಿತ್ರಿಸಿದ ಅಲ್ಲಮಪ್ರಭು ೧೨
  - **ಡಾ. ರಾಮಕೃಷ್ಣ ಮರಾಠೆ**
* ಡಾ. ಪುಟ್ಟರಾಜ ಗವಾಯಿಗಳು ೧೬
  - **ಡಾ. ಸಂಗಮೇಶ ಸವದತ್ತಿಮಠ**
* ಕೊಂಡುಗುಳಿ ಕೇಶಿರಾಜ ಮತ್ತು ಲಿಂಗಾಯತ ಧರ್ಮ ೨೦
  - **ಡಾ. ಎನ್. ಜಿ. ಮಹಾದೇವಪ್ಪ**
* ಬಸವಣ್ಣನವರ ಕುರಿತು ಫ. ಗು. ಹಳಕಟ್ಟಿಯವರ ಪ್ರಕಟಣೆಗಳು ಒಂದು ವಿವೇಚನೆ ೨೩
  - **ಮಲ್ಲಿಕಾರ್ಜುನ ಹುಲಗಬಾಳಿ**
* ವಚನ ಧರ್ಮ ಮತ್ತು ಅಕ್ಕನಾಗಮ್ಮ ೨೮
  - **ಶ್ರೀಧರ ಗೌಡರ**
* ಬಿಬ್ಬಿ ಬಾಚಯ್ಯನ ದಾಸೋಹದಲ್ಲಿ ಸಮಾನತೆ ೩೦
  - **ವೆಂಕಟೇಶ ಕೆ. ಜನಾದ್ರಿ**



ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

ಸಂಪಾದಕೀಯ

# ಡಂಬಳ–ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಪೀಠ–ಪರಂಪರೆ

ಸರ್ವಸಮಾನತೆಯನ್ನು ಸಾರಿದ, ಕಾಯಕ–ದಾಸೋಹದಂತಹ ವಿಶ್ವಮಾನ್ಯ ಮೌಲ್ಯಗಳನ್ನು ವಿಶ್ವಕ್ಕೆ ನೀಡಿದ ಮಹಾಮಾನವತಾವಾದಿ ಬಸವಣ್ಣನವರು ಶರಣ ಸಂಸ್ಕೃತಿಯ ಹರಿಕಾರರು. ಅವರ ನೇತೃತ್ವದಲ್ಲಿ ಜರುಗಿದ ಶರಣ ಚಳುವಳಿ ವಿಶ್ವದ ಪ್ರಥಮ ಸಮಾಜೋ–ಧಾರ್ಮಿಕ ಚಳುವಳಿ ಎಂದು ಇತಿಹಾಸದಲ್ಲಿ ದಾಖಲಿಸಲ್ಪಟ್ಟಿದೆ. ಈ ಚಳುವಳಿ ರೂಪುಗೊಂಡಿರುವುದೇ ಅನುಭವ ಮಂಟಪದಲ್ಲಿ. ಧರ್ಮಗುರು ಬಸವಣ್ಣನವರು ಸ್ಥಾಪಿಸಿದ ಈ ಅನುಭವ ಮಂಟಪದ ಶೂನ್ಯ ಸಿಂಹಾಸನದ ಮೊದಲ ಅಧ್ಯಕ್ಷರು ಮಹಾಮಹಿಮ, ವ್ಯೋಮ ಮೂರುತಿ ಅಲ್ಲಮ ಪ್ರಭುಗಳು. ಶೂನ್ಯ ಸಿಂಹಾಸನದ ನಿರಂಜನ ಪೀಠ ಪರಂಪರೆಯನ್ನು ಅವಿರಳಜ್ಞಾನಿ ಚನ್ನಬಸವಣ್ಣನವರು, ಶಿವಯೋಗಿ ಸಿದ್ಧರಾಮೇಶ್ವರರು ಮುಂದುವರೆಸಿದರು. ಆನಂತರ ವಿಭಿನ್ನ ಕಾರಣಗಳಿಂದಾಗಿ ಅಷ್ಟೊಂದು ಪ್ರಚಲಿತವಿರುವ ಈ ಶೂನ್ಯಸಿಂಹಾಸನವನ್ನು ಹತ್ತೊಂಭತ್ತನೆಯವರಾಗಿ ಆರೋಹಣ ಮಾಡಿದವರು ೧೬ನೆಯ ಶತಮಾನದ ತೋಂಟದ ಸಿದ್ಧಲಿಂಗ ಶಿವಯೋಗಿಗಳು.

೧೬ ನೆಯ ಶತಮಾನ ಶರಣ ಸಂಸ್ಕೃತಿಯ ಪುನರುತ್ಥಾನದ ಯುಗ. ಅಲ್ಲಮ ಪ್ರಭುಗಳ ನಂತರ ಹತ್ತೊಂಭತ್ತನೆಯ ಪೀಠಾಧಿಪತಿಗಳಾಗಿ ಶೂನ್ಯ ಸಿಂಹಾಸನ ಆರೋಹಣ ಗೈದ ಶ್ರೀ ತೋಂಟದ ಸಿದ್ಧಲಿಂಗ ಯತಿಗಳು ಶರಣ ಸಂಸ್ಕೃತಿಯನ್ನು ನಾಡಿನುದ್ದಗಲಕ್ಕೂ ಪ್ರಚಾರ ಮಾಡಿದರು. ಶರಣ ಸಾಹಿತ್ಯವನ್ನು ಸಂರಕ್ಷಿಸಲು, ಸಂಪಾದಿಸಲು ಏಳು ನೂರೊಂದು ಶಿಷ್ಯರ ಪಡೆಯನ್ನೇ ಅವರು ಸಿದ್ಧಗೊಳಿಸಿದರು. ಅವರ ಶಿಷ್ಯ–ಪ್ರಶಿಷ್ಯರು ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಶೋಧಿಸಿ, ಸಂಸ್ಕರಿಸಿ, ಸಂಪಾದಿಸಿ, ಟೀಕೆ–ವ್ಯಾಖ್ಯಾನ ಇತ್ಯಾದಿಗಳನ್ನು ಬರೆದು, ಅನಂತ ಸಂಖ್ಯೆಯಲ್ಲಿ ಪ್ರತಿಮಾಡಿ ಅದರ ಉಳಿವಿಗೆ ಕಾರಣಕರ್ತರಾಗಿರುವುದು ಐತಿಹಾಸಿಕ ಸತ್ಯ. ಸ್ವತಃ ತೋಂಟದ ಸಿದ್ಧಲಿಂಗ ಶಿವಯೋಗಿಗಳೇ ಏಳುನೂರಾ ಒಂದು ವಚನಗಳನ್ನು ಬರೆದು ಷಟ್‌ಸ್ಥಲ ತತ್ತ್ವವನ್ನು ಬೋಧಿಸಿದ್ದಾರೆ. ಆಮೂಲಕ ಜನಮನವನ್ನು ಬೆಳಗುತ್ತ ಧರ್ಮಜಾಗೃತಿ ಹಾಗು ಶರಣಧರ್ಮ–ಸಾಹಿತ್ಯ–ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಶ್ರಮಿಸಿದ್ದಾರೆ. ಹಾಗಾಗಿ ಲಿಂಗಾಯತ ಧರ್ಮದಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳಿಗೆ ತುಂಬ ಗೌರವದ ಸ್ಥಾನವನ್ನು ಕಲ್ಪಿಸಲಾಗಿದೆ. ಅಷ್ಟೇ ಅಲ್ಲ ಸಮಕಾಲೀನ ಹಾಗು ನಂತರದ ಕವಿ–ಸಾಹಿತಿ–ವಿದ್ವಾಂಸರು ಅವರನ್ನು 'ದ್ವಿತೀಯ ಅಲ್ಲಮ' ಎಂದು ಭಕ್ತಿ ಶ್ರದ್ಧೆ ಹಾಗು ಅಭಿಮಾನದಿಂದ ಕರೆದಿದ್ದಾರೆ. ಇಂತಹ ಮಹಾನ್ ಶಿವಯೋಗಿಗಳು ಪೀಠಾರೋಹಣ ಮಾಡಿದ ಪೀಠ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಮಠವೇ ಇಂದಿನ ಡಂಬಳ–ಗದಗ ನಗರದ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ಈ ಪರಂಪರೆಯಲ್ಲಿ ಈವರೆಗೆ ಇಪ್ಪತ್ತು ಪೀಠಾಧಿಪತಿಗಳು ಪೀಠಾರೋಹಣ ಮಾಡಿರುವುದಲ್ಲದೆ ಅವರಲ್ಲಿ ಅನೇಕರು ರಾಜ–ಮಹಾರಾಜರಿಂದ, ಜನಸ್ತೋಮದಿಂದ ಅಪಾರ ಮನ್ನಣೆ ಪಡೆದು ಸಾಮಾಜಿಕ–ಧಾರ್ಮಿಕ ಸೇವಾ ಕಾರ್ಯಗಳನ್ನು ಜರುಗಿಸುತ್ತ ಬಂದಿದ್ದಾರೆ. ಈ ಪೀಠದ ಒಂಭತ್ತನೆಯ ಪೀಠಾಧಿಪತಿಗಳಾದ ಶ್ರೀ ಮದರ್ಧನಾರೀಶ್ವರ ಶಿವಯೋಗಿಗಳು ಡಂಬಳ (ಧರ್ಮಪುರ) ಗ್ರಾಮದಲ್ಲಿ ನೆಲೆನಿಂತು ಅದುವರೆಗೂ ಸಂಚಾರಿಪೀಠವೆನಿಸಿದ್ದ ಇದನ್ನು ಸ್ಥಿರಗೊಳಿಸಿದರು. ತಮ್ಮ ಕರ್ತೃತ್ವಶಕ್ತಿಯಿಂದ ಪೀಠವನ್ನು ವಿಸ್ತಾರೋನ್ನತವಾಗಿ ಬೆಳೆಸಿದರು. ಮಹಿಮಾನ್ವಿತರಾದ ಅರ್ಧನಾರೀಶ್ವರರನ್ನು ಜನರು 'ದ್ವಿತೀಯ ಸಿದ್ಧಲಿಂಗೇಶ್ವರ'ರೆಂದು ಕರೆದು ಗೌರವಿಸಿದರು. ಕೆಳದಿ ಸಂಸ್ಥಾನದ ಅರಸನಾದ ವೀರಭದ್ರನಾಯಕ ಹಾಗು ಅವನ ಧರ್ಮಪತ್ನಿ ಮಲ್ಲಾಂಬೆಯವರು ಈ ಶಿವಯೋಗಿಗಳ ವಿಶೇಷ ಕೃಪೆಗೆ ಪಾತ್ರರಾಗಿದ್ದರು. ಅವರ ಆಜ್ಞೆಯಂತೆ ಅವರ ಸಹೋದರ ಸೋಮಶೇಖರ ನಾಯಕನು ಡಂಬಳ ಮಠಕ್ಕೆ ಸುವರ್ಣದ ಪಾದುಕೆ ಮತ್ತು ಪಲ್ಲಕ್ಕಿಯ ಅಲಂಕಾರಿಕ ವಸ್ತುಗಳಲ್ಲದೆ ಭೂ ದಾನವನ್ನು ಮಾಡಿದನು. ಹದಿನಾರನೆಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳೂ ಕೂಡ ಈ ಪೀಠಪರಂಪರೆಗೆ ವಿಶೇಷ ಘನತೆಯನ್ನು ತಂದುಕೊಟ್ಟರು.

ಆಧುನಿಕ ಕಾಲದಲ್ಲಿ ಈ ಮಠದ ಘನತೆ–ಗೌರವಗಳನ್ನು ಉತ್ತುಂಗಕ್ಕೇರಿಸಿದವರು ಹತ್ತೊಂಭತ್ತನೆಯ ಪೀಠಾಧಿಪತಿಗಳಾದ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು. ಅಲ್ಲಮಪ್ರಭುಗಳು ಆರೋಹಣಗೈದ ಶೂನ್ಯಪೀಠವನ್ನು ಹತ್ತೊಂಭತ್ತನೆಯವರಾಗಿ ಆರೋಹಣ ಮಾಡಿದವರು ನಿರ್ವಿಕಲ್ಪ ಸಮಾಧಿಸ್ಥರಾದ ಯಡೆಯೂರಿನ

ತೋಂಟದ ಸಿದ್ಧಲಿಂಗ ಶಿವಯೋಗಿಗಳು. ಯೋಗಾಯೋಗವೆಂಬಂತೆ ಯಡೆಯೂರು ಸಿದ್ಧಲಿಂಗೇಶ್ವರರ ನಂತರ ಹತ್ತೊಂಭತ್ತನೆಯವರಾಗಿ ಶೂನ್ಯಪೀಠವನ್ನೇರಿದವರು ಕೂಡ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು. ಅವರು ನಮ್ಮ ನಾಡು ಕಂಡ ಅಪರೂಪದ ಸ್ವಾಮಿಗಳು. ಜಗದ್ಗುರು ಪೀಠದ ಹಮ್ಮು-ಬಿಮ್ಮು, ಬಿರುದು-ಬಾವಲಿಗಳನ್ನು ತ್ಯಜಿಸಿ ಜನಸಾಮಾನ್ಯರೊಂದಿಗೆ ಅವರು ಒಂದಾಗಿ ಬಾಳಿದವರು. ಜನಸಾಮಾನ್ಯರ ಕಷ್ಟ-ಸುಖಗಳಲ್ಲಿ ಭಾಗಿಯಾದವರು. ಅಂತೆಯೇ ಜನಸಾಮಾನ್ಯರು ಅವರನ್ನು ಪ್ರೀತಿಯಿಂದ 'ಜನಸಾಮಾನ್ಯರ ಸ್ವಾಮೀಜಿ' ಎಂದೇ ಕರೆದರು. ಸಮಾಜಕಲ್ಯಾಣವು ಅವರಿಗೆ ಆತ್ಮಕಲ್ಯಾಣದಷ್ಟೇ ಮಹತ್ವದ ವಿಷಯವಾಗಿತ್ತು. ಸಮಾಜಕಲ್ಯಾಣದ ಭಾಗವಾಗಿ ಪ್ರಸಾದನಿಲಯ, ಶಾಲೆ-ಕಾಲೇಜು, ವೃತ್ತಿಪರ ಕೇಂದ್ರಗಳನ್ನು ಸ್ಥಾಪಿಸಿ ಬಡಮಕ್ಕಳಿಗೆ ಅನ್ನ-ಆಶ್ರಯ-ವಿದ್ಯೆಯನ್ನು ನೀಡಿ ಬಡಮಕ್ಕಳ ತಾಯಿ ಎನಿಸಿದರು. ಅವರೊಬ್ಬ ಅಪರೂಪದ ಪುಸ್ತಕ ಪ್ರೇಮಿಗಳು. ಶ್ರೀಮಠದಿಂದ ಮೌಲಿಕವಾದ ಆರುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ ಹಿರಿಮೆ ಅವರದು. ಆ ಕಾರಣಕ್ಕಾಗಿಯೇ ಅವರು 'ಪುಸ್ತಕ ಪ್ರೇಮಿ' ಎಂದೆನಿಸಿದರು. ನಮ್ಮ ನಾಡು-ನುಡಿ, ನೆಲ-ಜಲಗಳ ರಕ್ಷಣೆಯ ವಿಷಯದಲ್ಲಿ ಅವರಂತೆ ಬದ್ಧತೆಯನ್ನು ಪ್ರದರ್ಶಿಸಿದವರು ಅತೀ ವಿರಳ. ಕನ್ನಡ ಭಾಷೆ ಕರ್ನಾಟಕದಲ್ಲಿ ಗಟ್ಟಿಗೊಳ್ಳುವಲ್ಲಿ ಅವರ ಶ್ರಮ ಅನುಪಮ. ಕನ್ನಡಿಗರ ಸ್ವಾಮಿಯಾಗಿ ಇತರರಿಗೆ ಮಾದರಿಯಾದವರು ಅವರು.

ಬಸವಾದಿ ಶರಣರ ತತ್ತ್ವಾದರ್ಶಗಳನ್ನು ಅನುಷ್ಠಾನಗೊಳಿಸುವಲ್ಲಿ ಗಟ್ಟಿ ನಿಲುವು ತಾಳಿದ ಅವರು ಬಸವತತ್ತ್ವದ ಮಹಾದಂಡನಾಯಕರೆನಿಸಿದ್ದರು. ಈ ವಿಷಯದಲ್ಲಿ ಅವರು ಸಂಪ್ರದಾಯವಾದಿಗಳ ವಿರೋಧವನ್ನೂ ಎದುರಿಸಬೇಕಾಯಿತು. ಅದಕ್ಕೆಂದೂ ಅವರು ಸೊಪ್ಪು ಹಾಕಲಿಲ್ಲ. ತಮ್ಮ ನೇರ ನುಡಿಗಳಿಂದ ಸಂಪ್ರದಾಯ, ಅಂಧಶ್ರದ್ಧೆ-ಮೂಢನಂಬಿಕೆಗಳನ್ನು ಖಂಡಿಸಿ ವೈಚಾರಿಕತೆ ಹಾಗು ವೈಜ್ಞಾನಿಕ ಮನೋಭಾವದ ಅಪರೂಪದ ಸ್ವಾಮಿಗಳೆನಿಸಿದರು. ಜಾತಿ-ಮತ-ಪಂಥಗಳ ಭೇದವೆಣಿಸದೇ ಎಲ್ಲರೊಳಗೊಂದಾಗಿ ಬದುಕಿದರು; ಕೋಮು ಸೌಹಾರ್ದತೆಯ ಹರಿಕಾರರೆನಿಸಿದರು. ಹೀಗೆ ಎಲ್ಲಂದದಲ್ಲಿ ಮೇರು ಸದೃಶವಾದ ವ್ಯಕ್ತಿತ್ವವು ಅವರದಾಗಿತ್ತು. ಅವರು ದಿನಾಂಕ ೨೦-೧೦-೨೦೧೮ ರಂದು ಲಿಂಗೈಕ್ಯರಾದ ನಂತರ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಇಪ್ಪತ್ತನೆಯ ಪೀಠಾಧಿಪತಿಗಳಾಗಿ ಈ ಘನ ಪೀಠಪರಂಪರೆಯನ್ನು ಮುಂದುವರೆಸಿದ್ದಾರೆ.

| | | | |
|---|---|---|---|
| ೧) | ತೋಂಟದ ಸಿದ್ಧಲಿಂಗ ಶಿವಯೋಗಿಗಳು | ೧೪೭೯ | ಎಡೆಯೂರು (ನಿರ್ವಿಕಲ್ಪ ಸಮಾಧಿ) |
| ೨) | ತೋಂಟದ ಬೋಳಬಸವ ಸ್ವಾಮಿಗಳು | ೧೪೭೯-೧೪೭೧ | ಮದ್ದುಗಿರಿ |
| ೩) | ತೋಂಟದ ಗೂಳೂರು ಸಿದ್ಧವೀರ ಸ್ವಾಮಿಗಳು | ೧೪೭೧-೧೪೮೭ | ಗೂಳೂರು |
| ೪) | ತೋಂಟದ ಉದ್ದಾನಾರ್ಯ ಸ್ವಾಮಿಗಳು | ೧೪೮೭-೧೫೦೭ | ಭದ್ರರಾಜಪುರ |
| ೫) | ತೋಂಟದ ಹಿರೇಹಡಗಲಿ ಹರಿಹರ ಸ್ವಾಮಿಗಳು | ೧೫೦೭-೧೫೩೦ | ಹಿರೇಹಡಗಲಿ |
| ೬) | ತೋಂಟದ ಭಿಕ್ಷುಕದ ಹರಿಹರ ಸ್ವಾಮಿಗಳು | ೧೫೩೦-೧೫೬೦ | ರುದ್ರೂರ |
| ೭) | ತೋಂಟದ ಕಟಗಿಹಳ್ಳಿ ರಾಚೋಟಿ ಸ್ವಾಮಿಗಳು | ೧೫೬೦-೧೬೧೦ | ತಿಳುವಳ್ಳಿ |
| ೮) | ತೋಂಟದ ಕೌದಿ ಮಹಾಂತ ಸ್ವಾಮಿಗಳು | ೧೬೧೦-೧೬೭೫ | ಬಾಚಿಗೊಂಡನಹಳ್ಳಿ |
| ೯) | ತೋಂಟದ ಅರ್ಧನಾರೀಶ್ವರ ಸ್ವಾಮಿಗಳು | ೧೬೭೫-೧೭೨೫ | ಡಂಬಳ |
| ೧೦) | ತೋಂಟದ ಈಸೂರು ನಂದೀಶ್ವರ ಸ್ವಾಮಿಗಳು | ೧೭೨೫-೧೭೭೦ | ಅಣ್ಣಿಗೇರಿ |
| ೧೧) | ತೋಂಟದ ಉಗ್ಗದ ತೋಂಟದಾರ್ಯ ಸ್ವಾಮಿಗಳು | ೧೭೭೦-೧೭೭೬ | ಅಣ್ಣಿಗೇರಿ |
| ೧೨) | ತೋಂಟದ ಸದಾಶಿವ ಸ್ವಾಮಿಗಳು | ೧೭೭೬-೧೮೧೧ | ಕೊಪ್ಪಳ |
| ೧೩) | ತೋಂಟದ ಮಹಾಂತ ಸ್ವಾಮಿಗಳು | ೧೮೧೧-೧೮೩೮ | ಹಂಪಸಾಗರ |
| ೧೪) | ತೋಂಟದ ವೃದ್ಧ ತೋಂಟದಾರ್ಯ ಸ್ವಾಮಿಗಳು | ೧೮೩೮-೧೮೭೮ | ಗದಗ |
| ೧೫) | ತೋಂಟದ ಮೃತ್ಯುಂಜಯ ಸ್ವಾಮಿಗಳು | ೧೮೭೮-೧೮೮೧ | ಗದಗ |
| ೧೬) | ತೋಂಟದ ಸಿದ್ಧೇಶ್ವರ ಸ್ವಾಮಿಗಳು | ೧೮೮೧-೧೯೨೪ | ಗದಗ |
| ೧೭) | ತೋಂಟದ ಗುರುಬಸವ ಸ್ವಾಮಿಗಳು | ೧೯೨೪-೧೯೬೦ | ಗದಗ |
| ೧೮) | ತೋಂಟದ ಶಿವಕುಮಾರ ಸ್ವಾಮಿಗಳು | ೧೯೬೦-೧೯೭೪ | ಗದಗ |
| ೧೯) | ತೋಂಟದ ಸಿದ್ಧಲಿಂಗ ಸ್ವಾಮಿಗಳು | ೧೯೭೪-೨೦೧೮ | ಗದಗ |
| ೨೦) | ತೋಂಟದ ಸಿದ್ಧರಾಮ ಸ್ವಾಮಿಗಳು | ೨೦೧೮ | |

■■

# ಅಂತರಂಗ–ಬಹಿರಂಗ ಪೂಜೆ

● ಡಾ. ಸಿದ್ಧರಾಮ ಸ್ವಾಮಿಗಳು

ಆಧ್ಯಾತ್ಮಿಕ ಸಾಧನೆಯಲ್ಲಿ ಅರ್ಚನೆ, ಪೂಜೆ ಮತ್ತು ಉಪಾಸನೆಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಸರ್ವಶಕ್ತನಾದ ಭಗವಂತನಲ್ಲಿ ಅನನ್ಯ ಪ್ರೇಮವನ್ನು ಹೊಂದಿ ಸಮರ್ಪಣೆಯ ಭಾವದಿಂದ ಉಪಚಾರಗೈದು ಅವನನ್ನು ಪೂಜಿಸುವುದು ನಿಜವಾದ ಪೂಜೆ ಮತ್ತು ಅರ್ಚನೆ ಎನಿಸುವುದು. ಹಾಗಿಲ್ಲದೆ ಮಾಡುವ ಪೂಜೆ ನಿಷ್ಪ್ರಯೋಜಕವೆನಿಸುವುದು. ಇದೂ ಅಲ್ಲದೆ ಭಗವಂತನನ್ನು ಪೂಜಿಸಿ ಫಲಾಪೇಕ್ಷೆಯನ್ನು ವ್ಯಕ್ತಮಾಡುವುದೂ ಕೂಡ ಅರ್ಥಹೀನ ಪೂಜೆ ಎನಿಸುವುದು. ಎಲ್ಲವೂ ಭಗವಂತನ ಸೊಮ್ಮು, ಅವನದನ್ನು ಅವನಿಗರ್ಪಿಸಿ ಸಂತೋಷಪಡುವುದು ಬಹಳ ಮುಖ್ಯ. ಪೂಜೆಯು ಭಾವಪೂರ್ಣವಾಗಿರಬೇಕು. ಭಾವವಿಲ್ಲದ ಪೂಜೆಯು ಯಾವುದೇ ಪರಿಣಾಮವನ್ನುಂಟು ಮಾಡದು. ಆದ್ದರಿಂದ ಸತ್ಯ ಮತ್ತು ನಿಷ್ಠೆಗಳಿಂದ ಭಗವಂತನಿಗೆ ಪೂಜೆಯನ್ನು ಸಲ್ಲಿಸಬೇಕು.

ಅನೇಕರು ಭಗವಂತನನ್ನು ಅಷ್ಟವಿಧಾರ್ಚನೆ, ಷೋಡಶೋಪಚಾರಗಳಿಂದ ಪೂಜಿಸುತ್ತಾರೆ. ಆದರೆ ಅದರಲ್ಲಿ ಆಡಂಬರವೇ ಅಧಿಕ. ಅದು ಕೇವಲ ಔಪಚಾರಿಕವಾಗಿರುತ್ತದೆಯೇ ಹೊರತು ಅದರಲ್ಲಿ ಭಾವ ನೆಲೆಗೊಂಡಿರುವುದಿಲ್ಲ. ಇನ್ನು ಕೆಲವರು ಇತರರು ಮಾಡುವರೆಂದು ತಾವೂ ಅವರಂತೆ ಮಾಡುವರು. ಇದು ಕೇವಲ ಅನುಕರಣೆ ಎನಿಸುವುದು. ಅನುಕರಿಸಿ ಮಾಡುವ ಮತ್ತು ಬಾಹ್ಯಾಡಂಬರದ ಪೂಜೆಯನ್ನು ಭಗವಂತನು ಸ್ವೀಕರಿಸುವುದಿಲ್ಲ. 'ಅಗ್ಘವಣಿ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತಿದ್ದಾರೆ, ಏನೆಂದರಿಯರು ಎಂತೆಂದರಿಯರು, ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಎಲ್ಲರೂ ಪೂಜಿಸಿ ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು ಗುಹೇಶ್ವರಾ' ಎಂದು ಅಲ್ಲಮ ಪ್ರಭುಗಳು ಮನಶ್ಶುದ್ಧಿಯಿಂದ ಮತ್ತು ಅರಿವಿನಿಂದ ಭಾವಪೂರ್ಣವಾಗಿ ಮಾಡದ ಪೂಜೆಯನ್ನು ವಿಡಂಬಿಸಿದ್ದಾರೆ.

ಕಾಯ ಒಂದೆಸೆ ಜೀವ ಒಂದೆಸೆಯಾದರೆ ಭಗವಂತನೂ ತಾನೊಂದೆಸೆಯಾಗುವನು. ಕಾಯದಲ್ಲಿ ಸದಾಚಾರ ಮನಸ್ಸಿನಲ್ಲಿ ಲಿಂಗದ ನೆನಹು ತುಂಬಿಕೊಂಡು ಭಗವಂತನನ್ನು ಪೂಜಿಸಬೇಕು. ಅರ್ಚನೆಯ ಮಾಡುವಲ್ಲಿ ವೇಷವರತಿರಬೇಕು, ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು, ಕೊಳುಕೊಡೆಯಲ್ಲಿ ಭೂತಹಿತವಾಗಿರಬೇಕು ಎನ್ನುತ್ತಾರೆ ಶರಣರು. 'ಸಜ್ಜನಳಾಗಿ ಮಜ್ಜನಕ್ಕೆರೆವೆ, ಶಾಂತಳಾಗಿ ಪೂಜೆಯ ಮಾಡುವೆ, ಸಮರತಿಯಿಂದ ನಿಮ್ಮ ಹಾಡುವೆ' ಎನ್ನುವ ವೀರವಿರಾಗಿಣಿ ಅಕ್ಕನ ಮಾತುಗಳಲ್ಲಿ ನಾವು ಮಾಡುವ ಪೂಜೆ ಹೇಗಿರಬೇಕು ಎಂಬುದನ್ನು ಕಂಡುಕೊಳ್ಳಬಹುದು.

ಅಂತರಂಗ ಮತ್ತು ಬಹಿರಂಗದ ಪೂಜೆಗಳು ಜೊತೆ ಜೊತೆಯಾಗಿಯೇ ಸಾಗಬೇಕು. ಬಹಿರಂಗದ ಪೂಜೆಗೆ ಪ್ರಾಶಸ್ತ್ಯ ನೀಡಿ ಅಂತರಂಗದ ಪೂಜೆಯನ್ನು ಅಲಕ್ಷಿಸಬಾರದು. ಬಹಿರಂಗದ ಪೂಜೆ ಕೇವಲ ಸಾಂಕೇತಿಕ. ನಿಜವಾದ ಪೂಜೆ ನಡೆಯಬೇಕಾದುದು ಅಂತರಂಗದಲ್ಲಿ ಮಾತ್ರ. ಬಹಿರಂಗದಲ್ಲಿ ಜಲ, ಭಸ್ಮ, ಗಂಧ, ಅಕ್ಷತೆ, ಧೂಪ, ದೀಪ, ಕರ್ಪೂರ, ನೈವೇದ್ಯ ತಾಂಬೂಲಾದಿಗಳನ್ನು ಸಮರ್ಪಿಸಿ ಪೂಜೆ ಮಾಡುತ್ತೇವೆ. ಇದರ ಜೊತೆಗೆ ಅಂತರಂಗದ ಪೂಜೆಯೂ ನಡೆಯಬೇಕು. ಆ ಪೂಜೆಯನ್ನು ಕುರಿತು ಶರಣ ಆದಯ್ಯನವರು ಹೀಗೆ ಹೇಳುತ್ತಾರೆ– 'ಸತ್ಯವೆ ಜಲ, ಸಮತೆಯೆ ಗಂಧ, ಅರಿವೆ ಅಕ್ಷತೆ, ಭಾವ ಕುಸುಮ, ಸ್ವತಂತ್ರ ಧೂಪ, ನಿರಾಳ ದೀಪ, ಸ್ವಾನುಭಾವ ನೈವೇದ್ಯ, ಸಾಧನ ಸಾಧ್ಯ, ಕರ್ಪೂರ ವೀಳ್ಯೆ ಇವೆಲ್ಲವ ನಿಮ್ಮ ಪೂಜೆಗೆಂದು ಎನ್ನ ಕರಣಂಗಳು ಪಡೆದಿರಲು ಹೃದಯ ಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ.' ಇಂತಹ ಅಂತರಂಗದ ಪೂಜೆಯನ್ನು ಕೈಕೊಳ್ಳದೆ ಕೇವಲ ಬಹಿರಂಗದಲ್ಲಿ ಮಾಡುವ ಪೂಜೆಗೆ ಯಾವುದೇ ಅರ್ಥವಿಲ್ಲ ಎಂಬುದು ಆದಯ್ಯನವರ ಸ್ಪಷ್ಟ ಅಭಿಪ್ರಾಯ. ಆದ್ದರಿಂದ ಬಾಹ್ಯ ಪೂಜೆಯ ಜೊತೆಗೆ ತನು ಮನಾದಿಗಳನ್ನು ಶುಚಿಯಾಗಿಸಿಕೊಂಡು ಭಾವವನ್ನು ಬಯಲಾಗಿಸಿ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಅಂತರಂಗದ ಪೂಜೆಯನ್ನು ಕೈಕೊಳ್ಳಬೇಕು. ಭಾವದಲ್ಲಿರುವ ಕ್ಲೇಶಾದಿಗಳನ್ನು ದೂರ ಮಾಡಿಕೊಳ್ಳದೆ, ವಿಷಯ ವಾಸನೆಗಳನ್ನು ಸುಟ್ಟು ಭಸ್ಮವಾಗಿಸದೆ ಮಾಡುವ ಪೂಜೆ ನಿರರ್ಥಕವಾಗುವುದು. 'ಭಸ್ಮ ಹೂಸಿದಡೇನೋ ಕರಣಾದಿಗುಣಂಗಳ ಮೆಟ್ಟಿ ಸುಡದನ್ನಕ್ಕರ' ಎನ್ನುತ್ತಾರೆ ಶರಣರು. ಶರಣೆ ಅಕ್ಕಮಹಾದೇವಿಯು– ತನುಕರಗದವರ ಮಜ್ಜನ, ಮನಕರಗದವರ ಪುಷ್ಪ, ಹದುಳಿಗರಲ್ಲದವರ ಗಂಧಾಕ್ಷತೆ, ಅರಿವು ಕಣ್ದೆರೆಯದವರ ಆರತಿ, ಭಾವಶುದ್ಧವಿಲ್ಲದವರ ಧೂಪ, ಪರಿಣಾಮಿಗಳಲ್ಲದವರ ನೈವೇದ್ಯ, ತ್ರಿಕರಣ ಶುದ್ಧವಿಲ್ಲದವರ ತಾಂಬೂಲಗಳನ್ನು ಭಗವಂತನು ಸ್ವೀಕರಿಸುವುದಿಲ್ಲ ಎಂದು ಹೇಳುವುದಲ್ಲದೆ ಅಂತವರ ಹೃದಯಕಮಲದಲ್ಲಿ ಭಗವಂತನು ನೆಲೆನಿಲ್ಲಲಾರನೆಂದು ಹೇಳಿರುವುದರಿಂದ ಬಹಿರಂಗದ ಪೂಜೆಗಿಂತಲೂ ಅಂತರಂಗದ ಪೂಜೆ ಅತ್ಯವಶ್ಯವೆನ್ನುವುದನ್ನು ಅರಿಯಬೇಕು. ಅಂತರಂಗ ಪೂಜೆ ನಡೆಯದೆ ಬಹಿರಂಗದ ಪೂಜೆ ಮಾಡುವುದು ಕೇವಲ ಉಪಚಾರವಾಗುತ್ತದೆ.

* * *

**ಕಂಡುದ ಹಿಡಿಯಲೊಲ್ಲದೆ ಕಾಣದುದ ಹಿಡಿದಿಹೆನೆಂದಡೆ**
**ಸಿಕ್ಕದೆಂಬ ಬಳಲಿಕೆಯ ನೋಡಾ**
**ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ**
**ಕಾಣದುದ ಕಾಣಬಹುದು ಗುಹೇಶ್ವರಾ.**

ಜಗತ್ತಿನ ಇತರ ಧರ್ಮಗಳಂತೆ ಲಿಂಗಾಯತ ಧರ್ಮದಲ್ಲಿಯೂ ಗುರುವಿಗೆ ಅಗ್ರಸ್ಥಾನವಿದೆ. ಗುರುಕರುಣೆ ಇಲ್ಲದೆ ಯಾವ ವ್ಯಕ್ತಿಯೂ ತನ್ನ ಬದುಕನ್ನು ಹಸನಾಗಿಸಿಕೊಳ್ಳಲಾರ. ಅಧ್ಯಾತ್ಮ ಸಿದ್ಧಿಯನ್ನೂ ಪಡೆಯಲಾರ. ವ್ಯಕ್ತಿಯ ಲೌಕಿಕ ಹಾಗು ಪಾರಲೌಕಿಕ ಬದುಕಿಗೆ ಮಾರ್ಗದರ್ಶನ ಮಾಡುವವನೇ ಗುರು. ಅಂಥ ಗುರುವಿನ ಮಹತಿಯನ್ನು ಬಯಲುದೇಹಿಗಳಾದ ಅಲ್ಲಮಪ್ರಭುದೇವರು ಮೇಲಿನ ವಚನದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

ಜಗತ್ತಿನಲ್ಲಿ ಎಲ್ಲರೂ ಕಣ್ಣಿಗೆ ಕಾಣದ ವಸ್ತುವನ್ನು ಹುಡುಕುತ್ತಾರೆಯೆ ವಿನಾ ಕಾಣುವ ವಸ್ತುವನ್ನು ಯಾರೂ ಹುಡುಕುವುದಿಲ್ಲ. ಏಕೆಂದರೆ ಕಾಣುವ ವಸ್ತುವಿಗಿಂತ ಕಾಣದ ವಸ್ತುವಿಗೆ ಹೆಚ್ಚು ಬೆಲೆ. ಆದುದರಿಂದಲೇ ಕಾಣದ ವಸ್ತುವನ್ನು ಅರಸುವರು. ಆದರೆ ಕಣ್ಣಿಗೆ ಕಾಣುವ ವಸ್ತುವಿನ ಮೂಲಕ ಕಾಣದ ವಸ್ತುವನ್ನು ಕಂಡುಕೊಳ್ಳಬೇಕೆಂಬುದು ಅಲ್ಲಮಪ್ರಭುದೇವರ ಸ್ಪಷ್ಟ ಅಭಿಪ್ರಾಯ.

ಪರಮಾತ್ಮ ಕಣ್ಣಿಗೆ ಕಾಣಲಾರ. ಏಕೆಂದರೆ ಅವನು ಇಂದ್ರಿಯಾತೀತ, ನಿರ್ಗುಣ, ನಿರಾಕಾರ ಸ್ವರೂಪ. ಅವನು ಕೇವಲ ಅನುಭಾವ ವೇದ್ಯ. ಅನುಭಾವ ವೇದ್ಯವಾದುದನ್ನು ಅನುಭವಿಸಬೇಕು. ಅದಕ್ಕಾಗಿ ಗುರುವನ್ನು ಆಶ್ರಯಿಸಬೇಕು. ಶ್ರೀಗುರುವು ಕರುಣೆಯಿಂದ ನಮ್ಮ ಮೋಹವನ್ನು ನಾಶಗೊಳಿಸುತ್ತಾನೆ. ಅಗೋಚರನಾದ ಪರಮಾತ್ಮನನ್ನು ಇಷ್ಟಲಿಂಗ ರೂಪದಲ್ಲಿ ನಮ್ಮ ಕರಸ್ಥಲಕ್ಕೆ ತಂದು ಕೊಡುತ್ತಾನೆ. ಕಾಣದ ವಸ್ತುವೆ ಕರಸ್ಥಲಕ್ಕೆ ಬಂದಾಗ ಮತ್ತೇಕೆ ಹುಡುಕಬೇಕು? ಇಷ್ಟಲಿಂಗವನ್ನು ನಮ್ಮ ಕರಸ್ಥಲಕ್ಕೆ ಕರುಣಿಸುವ ಮೂಲಕ ಗುರು ನಮ್ಮನ್ನು ಲಿಂಗದ ಭಕ್ತರನ್ನಾಗಿಸುತ್ತಾನೆ. ಲಿಂಗದಭಕ್ತ ಗುರುವಿನ ಮಾರ್ಗದರ್ಶನದಲ್ಲಿ ತನ್ನ ಅಧ್ಯಾತ್ಮ ಸಾಧನೆಯನ್ನು ಮುಂದುವರೆಸಿ ಕೊನೆಯಲ್ಲಿ ಶಿವನಲ್ಲಿ ಸಮರಸಗೊಳ್ಳುತ್ತಾನೆ. ಶಿವನೇ ತಾನೆಂಬ, ಶಿವನಿಂದ ಅನ್ಯವಿಲ್ಲವೆಂಬ ಭಾವ ತಾಳುತ್ತಾನೆ. ಜೀವ ಶಿವನಾಗುವ ಪರಿಯನ್ನು ತಿಳಿಸುವವನೇ ಗುರು. ಅವನು ದೃಶ್ಯ ಪರಮಾತ್ಮ ಅಂದರೆ ಕಣ್ಣಿಗೆ ಕಾಣುವ ಪರಮಾತ್ಮ. ಅವನು ಜ್ಞಾನಪಥ ದರ್ಶಕ. ಅನುಭಾವ ವೇದ್ಯವಾದ, ಕಣ್ಣಿಗೆ ಕಾಣದ ಪರಮಾತ್ಮನ ಅನುಭೂತಿ ಗುರುವಿನಿಂದಲೇ ಸಾಧ್ಯವಾಗುತ್ತದೆ. ಗುರುವನ್ನಾಶ್ರಯಿಸದೆ, ಗುರು ಕರುಣೆಯನ್ನು ಪಡೆಯದೆ ಅಗೋಚರನಾದ ಶಿವನನ್ನು ಕಂಡೇ ತೀರುವೆನೆಂಬ ಅಥವಾ ಹಿಡಿದೇ ತೀರುವೆನೆಂಬ ಛಲ ನಿರರ್ಥಕ. ಅದು ಬರೀ ಬಳಲಿಕೆ. ಆದ್ದರಿಂದ ಅಧ್ಯಾತ್ಮ ಸಾಧಕನಿಗೆ ಗುರುಪಾದವೇ ಗತಿ. ಗುರುವಿನಿಂದ ಶಿವಜ್ಞಾನವುಂಟಾಗಿ ಜೀವ ಭಾವ ನಿವಾರಣೆಯಾಗುತ್ತದೆ; ಶಿವಭಾವ ಅಳವಟ್ಟು ಶಿವಾನುಭೂತಿ ಯುಂಟಾಗುತ್ತದೆ. ಹೀಗೆ ಕಣ್ಣಿಗೆ ಕಾಣುವ ಗುರುವನ್ನು ಆಶ್ರಯಿಸಿ ಕಾಣದ ಪರಮಾತ್ಮನನ್ನು ಕಾಣಬೇಕೆಂಬುದು ಈ ವಚನದ ಸ್ಪಷ್ಟ ಸಂದೇಶವಾಗಿದೆ.

# ಬಸವಣ್ಣ ಮತ್ತು ನವನಿರ್ಮಾಣ ಧೋರಣೆಗಳು

● ಡಾ. ಬಸವರಾಜ ಮಲಶೆಟ್ಟಿ

'ನವನಿರ್ಮಾಣ' ಎನ್ನುವ ಪದ ನಮಗೆ ಜೆ.ಪಿ. ಅವರ ಮೂಲಕ ಪರಿಚಯವಾದುದು ೧೯೭೬ ರಿಂದೀಚೆಗೆ. ಭ್ರಷ್ಟಾಚಾರ, ನಿರುದ್ಯೋಗ ಮತ್ತು ಹಲವು ವಿಧದ ಶೋಷಣೆಗಳಿಗೆ ಬಲಿಯಾಗಿ ನೋವನ್ನನುಭವಿಸುತ್ತಿದ್ದ ಭಾರತದ ಜನಸಮುದಾಯಕ್ಕೆ ನವಚೇತನ ತುಂಬಲು ಜೆ.ಪಿ. ಕೈಕೊಂಡ ಚಳುವಳಿ ನವನಿರ್ಮಾಣದ ಹೆಸರಿನಿಂದ ದೇಶವನ್ನೆಲ್ಲ ವ್ಯಾಪಿಸಿತು. ಕಾಲಕಾಲಕ್ಕೆ ಜಡವ್ಯವಸ್ಥೆಯನ್ನು ಅಲ್ಲಾಡಿಸಲು ಮೂಡಿ ಬರುವ ಅನೇಕ ಚಳುವಳಿಗಳಲ್ಲಿ ಈ ನವನಿರ್ಮಾಣವೂ ಒಂದಾಗಿ, ಇತಿಹಾಸಕ್ಕೆ ಸೇರಿಹೋಯಿತು. ಜೆ.ಪಿ. ಅವರ ನವನಿರ್ಮಾಣದ ಕಲ್ಪನೆ ಧೋರಣೆಗಳು ಸಮಕಾಲೀನ ಪರಿಸರದ ಹಿನ್ನೆಲೆಯಲ್ಲಿ ರೂಪಗೊಂಡಂಥವು. ಇದೇ ಮಾದರಿಯ ಚಳುವಳಿಯನ್ನು ಅಂದು ಬಸವಣ್ಣ ಕೈಕೊಂಡ. ಅದು ಜೆ.ಪಿ.ಯವರ ನವನಿರ್ಮಾಣಕ್ಕಿಂತ ಹಲವು ದೃಷ್ಟಿಗಳಲ್ಲಿ ಭಿನ್ನವಾದುದು ಮತ್ತು ಹೆಚ್ಚು ವ್ಯಾಪಕವಾದುದು.

ಬಸವಣ್ಣನ ನೇತೃತ್ವದಲ್ಲಿ ನಡೆದ ಅಂದಿನ ಚಳುವಳಿ ಮೂಲತಃ ಸಾಮಾಜಿಕ ಕ್ರಾಂತಿ. ವಚನಕಾರರು ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಹೆಚ್ಚು ಪ್ರಚಾರಕ್ಕೆ ತಂದು, ಶಿವಪಾರಮ್ಯವನ್ನು ಪ್ರತಿಪಾದಿಸಿರುವುದು ನಿಜ. ಆದರೆ ಇಷ್ಟರ ಮೇಲೆ ಅವರನ್ನು ಕೇವಲ ಧಾರ್ಮಿಕ ವ್ಯಕ್ತಿಗಳೆಂದು ಭಾವಿಸಲಾಗದು. ಧರ್ಮಪ್ರಚಾರವೊಂದೇ ಅವರ ಮುಖ್ಯ ಉದ್ದೇಶವಾಗಿದ್ದರೆ, ಅದರ ಸ್ವರೂಪ ಬೇರೆಯೇ ಆಗಿರುತ್ತಿತ್ತು. ಅದು ಎಂದಿಗೂ ಇಡೀ ಸಮಾಜವನ್ನು ತಬ್ಬಿಕೊಳ್ಳುವ ಗೊಡವೆಗೆ ಹೋಗುತ್ತಿರಲಿಲ್ಲ. ಈ ದೃಷ್ಟಿಯಿಂದ ಬಸವ ಪೂರ್ವದ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತ್ತು ಬಸವೋತ್ತರದ ಮಧ್ವಾಚಾರ್ಯರ ದ್ವೈತ ಪರಂಪರೆಗಳ ಪ್ರಾದುರ್ಭಾವ ಪ್ರಚಾರಗಳ ವೈಖರಿಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಈ ವೈಷ್ಣವಧರ್ಮ ಶಾಖೆಗಳು ತಾತ್ವಿಕ ಚರ್ಚೆ, ತರ್ಕ, ಗೋಷ್ಠಿಗಳಿಗೆ ಸೀಮಿತಗೊಂಡು ಬ್ರಾಹ್ಮಣ ಸಮುದಾಯದಲ್ಲಿ ಮಾತ್ರ ಹೆಸರು ಮಾಡಿದವು ಜನಸಾಮಾನ್ಯರ ಸಮೀಪ ಹೋಗಲಿಲ್ಲ. ಆದರೆ ವಚನಕಾರರ ಚಳುವಳಿ ಹುಟ್ಟಿದ್ದೇ ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿ. ಸಮಾಜದ ಬಹುಪಾಲು ಜನರ ಹಿತವನ್ನು ತನ್ನ ಗುರಿಯನ್ನಾಗಿಟ್ಟುಕೊಂಡದ್ದರಿಂದ ಈ ಚಳುವಳಿ ಸಹಜವಾಗಿಯೇ ಸಾಮಾಜಿಕ ಸ್ವರೂಪ ಪಡೆಯಿತು.

ಬಸವಣ್ಣ ಸಮಾಜ ಪರಿವರ್ತನೆಯ ವಿಧಾನಗಳನ್ನು ಯೋಚಿಸಿ ಯೋಜಿಸಿದ. ಸಮಾಜದ ಮೇಲೆ ಧರ್ಮದ ಹಿಡಿತ ಎಷ್ಟೊಂದು ಬಿಗಿಯಾದುದೆಂಬುದನ್ನು ಅರ್ಥೈಸಿಕೊಂಡ. ಆದ್ದರಿಂದಲೇ ತನ್ನ ಸಾಮಾಜಿಕ ಕ್ರಾಂತಿಯನ್ನು ಧರ್ಮದ ಮೂಲಕ ಪ್ರಚಾರಪಡಿಸಲು ನಿರ್ಧರಿಸಿದ; ಸಮಾಜ ಮತ್ತು ಧರ್ಮಗಳನ್ನು ಬೇರಿಲ್ಲದಂತೆ ಬೆರೆಸಿ ನವನಿರ್ಮಾಣಕ್ಕೆ ತೊಡಗಿದ. ಈ ದೃಷ್ಟಿಯಿಂದ ಧರ್ಮ ಅವನಿಗೆ ಅವಶ್ಯವಾಯಿತು. ಲಿಂಗಾಯತ ಧರ್ಮಕ್ಕೆ ಹೊಸ ಶಕ್ತಿ ಆಯಾಮಗಳನ್ನು ಕಲ್ಪಿಸಿ ಅದರ ಮೂಲಕ ಜನಸಾಮಾನ್ಯರನ್ನು ಸಮೀಪಿಸಿದ. ಆಗ ಆ ಲಿಂಗಾಯತ ಧರ್ಮ ಸಾಮಾಜಿಕ ಚಳುವಳಿಗೆ ಕೇಂದ್ರಸ್ಥಾನವಾಗಿ ವಿಭಿನ್ನ ಸ್ತರಗಳ ಜನತೆಗೆ ಒಂದುಗೂಡುವ ಸಮಾನ ವೇದಿಕೆಯಾಗಿ ಕಾರ್ಯನಿರ್ವಹಿಸಿತು. 'ಲಿಂಗದೀಕ್ಷೆ' ಒಂದು ಧಾರ್ಮಿಕ ವಿಧಿ ಮಾತ್ರವಾಗಿರದೆ ಮೇಲು-ಕೀಳುಗಳನ್ನು ಅಳಿಸುವ ಸಮಾನತೆಯ ಸಂಕೇತವಾಯಿತು.

ಹೊಸ ಸಮಾಜ ಕಟ್ಟಲು ಮುಂದಾದ ಬಸವನಿಗೆ ಎಷ್ಟೋ ಸಮಸ್ಯೆಗಳು ಎದುರಾದವು. ವಿವಿಧ ಸ್ವರೂಪದಲ್ಲಿ ನಡೆಯುತ್ತಿದ್ದ ಶೋಷಣೆಗಳಿಂದ ಸಮಾಜ ಮುಕ್ತವಾಗದ ಹೊರತು ಹೊಸತನದತ್ತ ಸಾಗುವುದಾದರೂ ಹೇಗೆ? ಆದ್ದರಿಂದ ಬಸವನು ಶೋಷಣೆಗಳ ಮೂಲ ಬೇರನ್ನೇ ಕತ್ತರಿಸುವ ಕೆಲಸಕ್ಕೆ ಕೈ ಹಾಕಿದ. ಮೊದಲು ವೈದಿಕ ಧರ್ಮವನ್ನು ಎದುರು ಹಾಕಿಕೊಂಡ. ತಾನೇ ಬೆಳೆಸಿ ತನ್ನನ್ನು ಸುತ್ತಿಕೊಂಡ ಅರ್ಥಹೀನ ಕರ್ಮಠ ಆಚರಣೆಗಳ ಹಿಡಿತಕ್ಕೆ ಸಿಕ್ಕು ನಿಸ್ಸತ್ವವಾಗಿದ್ದ ವೈದಿಕ ಧರ್ಮದ ಒಳಗುಟ್ಟನ್ನು

ಬಿಚ್ಚಿತೋರಿಸಿ, ಜನರನ್ನು ಅದರ ಪ್ರಭಾವ ವಲಯದಿಂದ ಮುಕ್ತರನ್ನಾಗಿಸಲು ಪ್ರಯತ್ನಿಸಿದ. ಬದುಕಿನ ವಾಸ್ತವತೆಗೆ ದೂರಾಗಿ ಕಂಡರಿಯದ ಆಸೆ–ಆಮಿಷಗಳನ್ನು ನಂಬುವಂತೆ ಮಾಡಿದ ವೈದಿಕ ಧರ್ಮವನ್ನು ನಂಬಿದ್ದ ಮುಗ್ಧ ಮನಸ್ಸುಗಳಿಗೆ ಬಸವನು ವಿಚಾರದ ವಿದ್ಯುತ್ ಸ್ಪರ್ಶ ನೀಡಿ ಎಚ್ಚರಿಸಿದ.

**ಶಾಸ್ತ್ರ ಘನವೆಂಬನೆ? ಕರ್ಮವ ಭಜಿಸುತ್ತಿದೆ.**
**ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ.**
**ಶ್ರುತಿ ಘನವೆಂಬೆನೆ? ಮುಂದಿಟ್ಟರಸುತ್ತಿದೆ**
**ಅಲ್ಲೆಲ್ಲಿಯೂ ನೀವಿಲ್ಲದ ಕಾರಣ**
**ತ್ರಿವಿಧದಾಸೋಹದಲ್ಲಲ್ಲದೆ ಕಾಣಬಾರದು**
**ಕೂಡಲಸಂಗಮದೇವನ.**

ವೇದಶಾಸ್ತ್ರಗಳು ಶಾಶ್ವತವಾದುದೇನನ್ನು ದೊರಕಿಸಿಕೊಡದೆ ಪುನಃ ಅಜ್ಞಾನದಲ್ಲಿ ನೂಕುತ್ತಿರುವುದನ್ನು ಮತ್ತು ಪಾಪಕಾರ್ಯಕ್ಕೆ ಪ್ರೇರೇಪಿಸುವುದನ್ನು ಬಸವಣ್ಣ ಇಲ್ಲಿ ದಿಟ್ಟವಾಗಿ ನಿರೂಪಿಸಿದ್ದಾನೆ.

**ಆದಿಪುರಾಣ ಅಸುರರಿಗೆ ಮಾರಿ**
**ವೇದ ಪುರಾಣ ಹೋತಿಂಗೆ ಮಾರಿ**
**ರಾಮ ಪುರಾಣ ರಕ್ಕಸರಿಗೆ ಮಾರಿ**
**ಭಾರತ ಪುರಾಣ ಗೋತ್ರಕ್ಕೆ ಮಾರಿ**
**ಎಲ್ಲಾ ಪುರಾಣ ಕರ್ಮಕ್ಕೆ ಮೊದಲು**
**ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ**
**ಕೂಡಲಸಂಗಮದೇವಾ.**

ಹೀಗೆ ವೇದಪುರಾಣಗಳ ಟೊಳ್ಳುತನವನ್ನು ಜನತೆಗೆ ಬಿಂಬಿಸಿ ಹೇಳಿದ. ಕೊಲೆ, ವಧೆಗಳ ಸಂಗತಿಗಳನ್ನು ತನ್ನ ಒಡಲೊಳಗಿಟ್ಟುಕೊಂಡಿರುವ ಈ ಗ್ರಂಥಗಳ ಸಮೂಹ ಮನುಷ್ಯನಿಗೆ ಕಥಾರಂಜನೆಯನ್ನಲ್ಲದೆ ಮತ್ತೇನನ್ನು ನೀಡಬಲ್ಲದು? ಇಂಥವುಗಳನ್ನು ಶಾಶ್ವತವೆಂದು ನಂಬಿರುವುದು ಎಂಥ ಆತ್ಮವಂಚನೆಯೆಂಬುದನ್ನು ತಿಳಿಸಿಕೊಟ್ಟಿದ್ದಾನೆ.

**ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು**
**ಎಲೆ ಹೋತೇ ಅಳು ಕಂಡಾ!**
**ವೇದವನೋದಿದವರ ಮುಂದೆ ಅಳು ಕಂಡಾ**
**ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ**
**ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.**

ಹೀಗೆ ಬಲಿಯಾಗಲಿರುವ ಹೋತಕ್ಕೆ ಸಮಾಧಾನ ಹೇಳುವ ಬಸವ ವೈದಿಕಧರ್ಮದ ಕ್ರೂರ ಸ್ವರೂಪವನ್ನು ವ್ಯಂಗ್ಯದ ಬಣ್ಣದಿಂದ ಚಿತ್ರಿಸಿದ್ದಾನೆ. ಮಾನವೀಯತೆಯಿಲ್ಲದ ಪಾಂಡಿತ್ಯದ ಹೊರೆಯಿಂದ ಬಾಗಿರುವ ಬುದ್ಧಿಜೀವಿಗಳನ್ನು ಪುರೋಹಿತರನ್ನು ಹೀಯಾಳಿಸಿದ್ದಾನೆ. ವೇದ ಶಾಸ್ತ್ರಗಳನ್ನು ತಮ್ಮ ಸ್ವಾರ್ಥಪರವಾಗಿ ವ್ಯಾಖ್ಯಾನಿಸುವವರನ್ನು ಕಂಡು 'ನಾನು ಕೊಲ್ಲೆ ನೇಣು ಕೊಂದಿತ್ತೆಂಬ ಸೂನೆಗಾರರನೇನೆಂಬೆ' (೫೭೧) ಎಂದು ಬೇಸರಪಟ್ಟುಕೊಂಡಿದ್ದಾನೆ. ತನ್ನ ಕೊಳಕನ್ನು ವರ್ಣವ್ಯವಸ್ಥೆಯ ರಕ್ಷಣೆಯ ಅಬ್ಬರದ ಪ್ರಚಾರದಡಿಯಲ್ಲಿ ಮರೆಮಾಚುತ್ತ ಕೃತಕ ಮಾನದಂಡಗಳಿಂದ ಜನತೆಯನ್ನು ಅಳೆದು ಗೋಳಾಡಿಸುತ್ತಿದ್ದ ವೈದಿಕ ವ್ಯವಸ್ಥೆಯ ಬಗ್ಗೆ ಬಸವಣ್ಣನಿಗೆ ಸಾತ್ವಿಕ ಕೋಪವಿದೆ. ಸ್ಪೃಶ್ಯ–ಅಸ್ಪೃಶ್ಯಗಳ ಗೊಂದಲ ಎಬ್ಬಿಸಿ ಅದನ್ನೇ ತನ್ನ ಬಂಡವಾಳವಾಗಿರಿಸಿಕೊಂಡ ಆ ಕ್ರೂರ ವ್ಯವಸ್ಥೆಯ ಬಗ್ಗೆ ಬಸವಣ್ಣ ನೊಂದಿದ್ದಾನೆ, ಕುದಿದಿದ್ದಾನೆ. ಆದ್ದರಿಂದಲೇ–

**ವೇದಕ್ಕೆ ಒರೆಯ ಕಟ್ಟುವೆ**
**ಶಾಸ್ತ್ರಕ್ಕೆ ನಿಗಳವನಿಕ್ಕುವೆ**
**ತರ್ಕದ ಬೆನ್ನಬಾರನೆತ್ತುವೆ**
**ಆಗಮದ ಮೂಗ ಕೊಯಿವೆ ನೋಡಯ್ಯಾ.**
**ಮಹಾದಾನಿ ಕೂಡಲಸಂಗಮದೇವಾ**
**ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ..**

ಎಂದು ತನ್ನೆಲ್ಲ ರೋಷವನ್ನು ಪ್ರಕಟಿಸಿದ್ದಾನೆ. ಬಸವಣ್ಣನದು ಒಳಿತಿನ ದೃಷ್ಟಿ. ಅವನ ವಿರೋಧ, ಕೋಪ–ತಾಪಗಳ ಹಿಂದೆ ಮತ್ಸರವಿಲ್ಲ. ಜನಹಿತದ ತೀವ್ರ ಹಂಬಲವಿದೆ. ತನ್ನ ಸಮಾಜ ಈ ವೈದಿಕ ಪುರೋಹಿತಶಾಹಿಯ ಹಿಡಿತದಿಂದ ಪಾರಾಗಬೇಕೆಂಬುದು ಅವನ ಉದ್ದೇಶ.

ಒಂದು ಕಡೆ ಮೇಲುವರ್ಗದವರ, ಮತ್ತೊಂದೆಡೆ ತಮ್ಮಲ್ಲಿಯೇ ಬೆಳೆದು ಬಂದ ಮೂಢನಂಬಿಕೆ, ತಾಮಸ ಆಚರಣೆಗಳು. ಇವೆರಡರ ತೆಕ್ಕೆಯಲ್ಲಿ ಸಿಕ್ಕು ನರಳುತ್ತಿದ್ದ ಜನಸಾಮಾನ್ಯರನ್ನು ಸಾತ್ವಿಕ ವಾತಾವರಣದಲ್ಲಿ ನೆಲೆಗೊಳಿಸಿ ನವ ಸಮಾಜ ನಿರ್ಮಿಸಲು ಬಸವಣ್ಣ ಪ್ರಯತ್ನಿಸಿದ. ಶತಶತಮಾನಗಳಿಂದ ಅಜ್ಞಾನ–ಮೂಢನಂಬಿಕೆಗಳ ಗರ್ಭದಲ್ಲಿ ಉಸಿರಾಡಿಸುತ್ತ ಬಂದ ಜನತೆಗೆ ಹೊಸ ಚೇತನ ನೀಡುವುದು ಅಷ್ಟೊಂದು ಸುಲಭ ಸಾಧ್ಯವಾದ ಕಾರ್ಯವಲ್ಲದಿದ್ದರೂ ಬಸವಣ್ಣನ ಕಾರ್ಯಕ್ಷಮತೆ ಅದನ್ನು ಸಾಧಿಸಿತು. ಸಮಾಜದ ಕೆಳಸ್ತರದ ಜನತೆಗೆ ಅವರನ್ನು ಸುತ್ತುವರಿದಿರುವ ವಿಷದ ಬಳ್ಳಿಯ ತಿಳಿವಳಿಕೆ ನೀಡಿ ಎಚ್ಚರಿಸಿದ. ಅವರು ಯಾರನ್ನು ದೇವರೆಂದು ನಂಬಿ ತಮ್ಮ ಸರ್ವಸ್ವವನ್ನು ಅರ್ಪಿಸಲು

ಸಿದ್ಧವಾಗಿದ್ದರೋ ಆ ದೇವರುಗಳು ನಿಜವಾದ ದೇವರುಗಳಲ್ಲ. ದೇವರ ಸ್ವರೂಪ, ಲಕ್ಷಣ ಬೇರೆ ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಟ್ಟ.

**ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ ಕೆರೆ ಬಾವಿ ಹೂ ಗಿಡು ಮರಂಗಳಲ್ಲಿ ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ ಹಿರಿಯಾಲದ ಮರದಲ್ಲಿ ಮನೆಯ ಮಾಡಿ ಕಱುವೆಮ್ಮೆ ಹಸುಗೂಸು ಬಸುಱಿ ಬಾಣತಿ ಕುಮಾರಿ ಕೂಡಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತಱ ಬೆಂತಱ ಕಾಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂಱು ಮಡಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದೆ ದಡಿ ಸಾಲದೆ?**

ಎಂದು ಕೀಳು ದೇವತೆಗಳನ್ನು ಅವಹೇಳನ ಮಾಡಿದ್ದಾನೆ. ಇಂಥವುಗಳನ್ನು ನಂಬಿ ಹಾಳಾಗುವವರನ್ನು ಕಂಡು ಬಸವಣ್ಣ ಮರುಗಿದ್ದಾನೆ. ದಯಾಮಯ ಶಾಶ್ವತ ಸರ್ವಾಂತರ್ಯಾಮಿ ನಿರಪೇಕ್ಷಿಯಾದ ದೇವರಿಗೂ ಈ ಕೀಳು ದೇವರುಗಳಿಗೂ ಎಷ್ಟೊಂದು ಅಂತರ? ಇವುಗಳ ಯೋಗ್ಯತೆಯಾದರೂ ಎಷ್ಟು?

**ಅರಗು ತಿಂದು ಕರಗುವ ದೈವವ ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ? ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ? ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ? ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ. (೫೫೬)**

ಈ ರೀತಿ ಕ್ಷುದ್ರ ದೇವತೆಗಳ ಅಯೋಗ್ಯತೆಯನ್ನು ಮನದಟ್ಟಾಗುವಂತೆ ತಿಳಿಸಿ ಜಾಗೃತಿ ಮೂಡುವಂತೆ ಮಾಡಿದ್ದಾನೆ. ಕ್ಷುದ್ರದೇವತೆಗಳ ಉಪಾಸಕರಿಗೆ ಭ್ರಮನಿರಸನವಾಗದೆ ಹೊಸ ವ್ಯವಸ್ಥೆಯಲ್ಲಿ ಹೇಗೆ ಒಂದಾದಾರು? ಈ ಅಸಂಖ್ಯಾತ ದೇವತೆಗಳ ಮೂಲಕ ಹರಿದು ಹಂಚಿಹೋಗಿರುವ ಸಮಾಜದಲ್ಲಿ ಸಮಾನತೆಯ ಸ್ಥಾಪನೆಯಾಗುವುದು ಹೇಗೆ ಸಾಧ್ಯ? ಆದ್ದರಿಂದ ಬಸವಣ್ಣ ಈ ಕ್ಷುದ್ರದೇವತೆಗಳನ್ನೆಲ್ಲ ಬದಿಗೆ ಸರಿಸಿ ಏಕದೇವೋಪಾಸನೆಯ ಮಂತ್ರ ಉಪದೇಶಿಸಿದ.

**ಮಡಕೆ ದೈವ ಮೊರದೈವ ಬೀದಿಯ ಕಲ್ಲು ದೈವ**
**ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೊ**
**ಕೊಳಗದೈವ ಗಿಣ್ಣಿಲು ದೈವ ಕಾಣಿರೊ**
**ದೈವದೈವವೆಂದು ಕಾಲಿಡಲಿಂಬಿಲ್ಲ**
**ದೇವನೊಬ್ಬನೆ ಕೂಡಲಸಂಗಮದೇವ. (೫೬೧)**

ಈ ವಚನದಲ್ಲಿ ಅವನ ಧೋರಣೆ ಸ್ಪಷ್ಟವಾಗಿದೆ. ಪ್ರಾಣಿಬಲಿಯನ್ನು ವೇದೋಕ್ತ ರೀತಿಯಲ್ಲಿ ನಡೆಸಿ ಯಜ್ಞಯಾಗ ಮಾಡುವ ಉಚ್ಚವರ್ಣದ ಬ್ರಾಹ್ಮಣ ಸಮುದಾಯ ಒಂದಾದರೆ ತಾವು ನಂಬಿದ ಕ್ಷುದ್ರ ದೇವತೆಗಳ ಸಂತೃಪ್ತಿಗೆ ಭಯಭಕ್ತಿಯಿಂದ ಪ್ರಾಣಿಬಲಿ ನೀಡುತ್ತಿದ್ದ ಕೆಳಸ್ತರದ ಶೂದ್ರರ ಸಮುದಾಯ ಇನ್ನೊಂದೆಡೆಗೆ. ವೈದಿಕರ ಅಹಂಕಾರ, ಅಜ್ಞಾನಗಳನ್ನು ಚುಚ್ಚಿ ಪ್ರತಿಭಟಿಸಿದ ಬಸವಣ್ಣನು ಶೂದ್ರರ ಮೂಢತನವನ್ನು ಅದೇ ಆವೇಶದಲ್ಲಿ ಅವಹೇಳನ ಮಾಡಿದ್ದಾನೆ. ಕ್ಷುದ್ರ ದೇವತೆಗಳ ತಾಮಸ ಆರಾಧನೆಯ ಗುಂಗಿನಲ್ಲಿ ಮುಳುಗಿದ ಜನತೆಗೆ ಅವರ ದೇವತೆಗಳ ನಿಜಸ್ವರೂಪ ತಿಳಿಸಿಕೊಟ್ಟು ಅವರನ್ನು ಹೊಸತನದತ್ತ ನಡೆಸುವುದೇ ಅವನ ಮುಖ್ಯ ಉದ್ದೇಶ. ಸಮಾಜದ ಬಹುಸಂಖ್ಯಾತ ಶೂದ್ರರ ಏಳ್ಗೆಯೆ ನಿಜವಾದ ನವ ನಿರ್ಮಾಣವೆಂದು ಬಸವ ಭಾವಿಸಿದ್ದಾನೆ. ಅದಕ್ಕಾಗಿಯೇ–

**ಮೊರನ ಗೋಟಿಗೆ ಬಪ್ಪ ಕಿಱುಕುಳ ದೈವಕ್ಕೆ**
**ಕುಱಿಯನಿಕ್ಕಿಹೆವೆಂದು ನಲಿನಲಿದಾಡುವರು**
**ಕುಱಿ ಸತ್ತು ಕಾವುದೆ ಹರ ಮುಳಿದವರ?**
**ಕುಱಿ ಬೇಡ ಮಱಿ ಬೇಡ**
**ಬಱಿಯ ಪತ್ರೆಯ ತಂದು ಮಱೆಯದೆ ಪೂಜಿಸು**
**ನಮ್ಮ ಕೂಡಲಸಂಗಮದೇವನ. (೫೬೫)**

ಹೀಗೆ ತಾಮಸ ಆಚರಣೆಗಳಿಂದ ಸಾತ್ವಿಕ ಆಚರಣೆಗಳತ್ತ ಸಾಗಲು ಶೂದ್ರ ಸಮುದಾಯಕ್ಕೆ ವಿನಂತಿಸಿಕೊಂಡಿದ್ದಾನೆ. ಇಷ್ಟಲಿಂಗ ಪೂಜೆಯನ್ನು ಪ್ರಚಾರಕ್ಕೆ ತಂದುದರಲ್ಲಿ ಬಹಳಷ್ಟು ಉದ್ದೇಶಗಳಿವೆ.

ಧಾರ್ಮಿಕವಾಗಿ ಅದು ವ್ಯಕ್ತಿಗೆ ತನ್ನತನದ ಅರಿವಿಗೆ ಕಾರಣವಾದುದು. ಸಾಮಾಜಿಕವಾಗಿ ಅದು ವ್ಯಕ್ತಿಗೆ ಅನಿರ್ಬಂಧಿತ ಸ್ವಾತಂತ್ರ್ಯ ತಂದುಕೊಡುತ್ತದೆ. ಸ್ಥಾವರ ಲಿಂಗದ ಅರ್ಚನೆ ದೇವಾಲಯಗಳನ್ನು ಪೋಷಿಸಿತು. ಆ ದೇವಾಲಯ ಭಾವುಕರನ್ನು ಶೋಷಿಸುವ ಸಂಸ್ಥೆಯಾಯಿತು. ಈ ಶೋಷಣೆಯ ಬೇರನ್ನೇ ಕತ್ತರಿಸುವ ಉದ್ದೇಶದಿಂದ ಬಸವ ಸ್ಥಾವರದ ಪೂಜೆಗೆ ಬದಲಾಗಿ ಇಷ್ಟಲಿಂಗ ಪೂಜೆಯನ್ನು ಪ್ರಚುರಪಡಿಸಿದ. ಇನ್ನೊಂದು ಅರ್ಥದಲ್ಲಿ ಈ ಇಷ್ಟಲಿಂಗ ಪೂಜೆ ವ್ಯಕ್ತಿ ಸ್ವಾತಂತ್ರ್ಯದ ಸಂಕೇತವಾಗಿದೆ. ವ್ಯಕ್ತಿ ಸ್ವಾತಂತ್ರ್ಯ

ಸಮಾನತೆಗಳಿರುವ ನವಸಮಾಜದ ನಿರ್ಮಾಣ ಬಸವಣ್ಣನ ಧ್ಯೇಯವಾಗಿತ್ತು.

ಈ ಹಿಂದಿನ ಯಾವ ಭಾರತೀಯ ದಾರ್ಶನಿಕನೂ ಎದುರಿಸಲಾರದ ಒಂದು ಭಾರೀ ಸವಾಲನ್ನು ಬಸವಣ್ಣ ಎದುರಿಸಿ ಪ್ರತಿಭಟಿಸಿದ. ಅದೇ ಜಾತೀಯತೆ. ವೈದಿಕ ಧರ್ಮ ಪೋಷಿಸಿಕೊಂಡು ಬಂದ ಈ ವರ್ಣವ್ಯವಸ್ಥೆಯ ಅಮಾನವೀಯತೆಯ ಹಿಡಿತದಲ್ಲಿ ಸಿಕ್ಕು ನರಳುತ್ತಿದ್ದ ಸಮಾಜವನ್ನು ಜಾತ್ಯಾತೀತತೆಯ ಮಟ್ಟಕ್ಕೇರಿಸಲು ಬಸವಣ್ಣ ನಡೆಸಿದ ಹೋರಾಟ ನಿಜವಾಗಿಯೂ ಅದ್ಭುತವಾದುದು. ಮನುಷ್ಯನ ಯೋಗ್ಯತೆ ಅವನ ಶೀಲಚಾರಿತ್ರ್ಯಗಳಿಂದ ನಿರ್ಣಯಿಸಲ್ಪಡಬೇಕಲ್ಲದೆ ಅವನು ಹುಟ್ಟಿದ ಜಾತಿಕುಲದ ಆಧಾರದಿಂದಲ್ಲ ಎಂಬುದನ್ನು ರೂಢಿಗೆ ತರಲು ಶಕ್ತಿಮೀರಿ ಪ್ರಯತ್ನಿಸಿದನು. ತಾನು ನಿರ್ಮಿಸಬಯಸಿದ ಸಮಾಜ ಜಾತೀಯತೆಯ ಕಲುಷಿತ ವಾತಾವರಣದಿಂದ ಮುಕ್ತವಾಗಿರಬೇಕೆಂಬುದು ಅವನ ಉದ್ದೇಶವಾಗಿತ್ತು. ಬಸವಣ್ಣನ ಈ ಪ್ರತಿಭಟನೆ ಹೋರಾಟಗಳಿಂದ ಸಹಸ್ರ ಸಹಸ್ರ ವರ್ಷಗಳಿಂದ ಬೇರೂರಿ ಬೆಳೆದುನಿಂತ ವರ್ಣವ್ಯವಸ್ಥೆಯ ವಿಷವೃಕ್ಷ ಬುಡ ಸಹಿತ ಉರುಳಿ ಬಿದ್ದಿತೆಂದು ಭಾವಿಸಲಿಕ್ಕಾಗದು. ಆದರೆ ಅದಕ್ಕಾದ ಸಿಡಿಲಿನ ಆಘಾತ ಚರಿತ್ರೆಯಲ್ಲಿ ತನ್ನ ಗುರುತು ಉಳಿಸಿದೆ.

ಮೂಲತಃ ವೇದಕಾಲದಲ್ಲಿ ವ್ಯಕ್ತಿಯ ಸ್ವಭಾವ ಆಸಕ್ತಿಗಳಿಗನುಗುಣವಾಗಿ ವೃತ್ತಿಗಳು ನಿರ್ಧರಿಸಲ್ಪಟ್ಟರೂ ಬರಬರುತ್ತ ಆ ವೃತ್ತಿಗಳು ವಂಶಾನುಗತವಾಗಿ ಕುಲ–ಜಾತಿಗಳಾದವು. ಮೇಲುವರ್ಗದವರು ವಿದ್ಯೆ–ಸಂಸ್ಕೃತಿ ಆಡಳಿತಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಉಳಿದವರನ್ನು ಕೆಳಕೆಳಗೇ ತುಳಿದರು. ಹೀಗೆ ತುಳಿಯಲ್ಪಟ್ಟ ಈ ದಲಿತ ಜನಾಂಗ ಯಾವ ನಾಗರೀಕತೆಯ ಸೋಂಕು ಇಲ್ಲದೆ ಪಶುಗಳೋಪಾದಿಯಲ್ಲಿ ಬದುಕುತ್ತ ಬಂದರು. ಇವರ ಅಜ್ಞಾನ ಮೇಲಿನವರ ಶೋಷಣೆಯ ಬಂಡವಾಳವಾಯಿತು. ಸ್ವತಃ ಮೇಲು ಜಾತಿಯಲ್ಲಿ ಹುಟ್ಟಿದ ಬಸವನು ಇಂಥ ವಿಷಮ ವಾತಾವರಣದಲ್ಲಿ ತನ್ನ ಜಾತಿಯ ಮೇಲರಿಮೆಯ ಪೊರೆಯಿಂದ ಹೊರಬಂದು ಕೆಳಗೆ ಬಿದ್ದವರನ್ನು ಮೇಲೆತ್ತಲು ದುಡಿದನು. ಜಾತಿಯನ್ನು ಕುರಿತಾದ ಮೇಲುವರ್ಗದವರ ಭ್ರಮೆಯನ್ನು ಹೋಗಲಾಡಿಸುತ್ತ ಕೆಳವರ್ಗದವರಿಗೆ ಧೈರ್ಯ ತುಂಬುತ್ತ ಅವನು ನವನಿರ್ಮಾಣದೆಡೆಗೆ ಸಾಗಿದ.

ಮನುಷ್ಯ ಹುಟ್ಟಿದ ಜಾತಿಗೆ ಮತ್ತು ಅವನ ಯೋಗ್ಯತೆಗೆ ಯಾವ ಸಂಬಂಧವೂ ಇಲ್ಲವೆಂಬುದನ್ನು ಉದಾಹರಣೆಗಳ ಮೂಲಕ ವಿವರಿಸುವ ಅವನ ವಚನವೊಂದು ಹೀಗಿದೆ....

**ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ ಮಂಡೋದರಿ ಕಪ್ಪೆಯಮಗಳು ಕುಲವನರಸದಿರಿಂ ಭೋ ಕುಲದಿಂದ ಮುನ್ನೇನಾದಿರಿಂ ಭೋ? ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ ಕಾಣೆ ಭೋ ನಮ್ಮ ಕೂಡಲಸಂಗನ ವಚನವಿಂತೆಂದುದು ಶ್ವಪಚೋಪಿಯಾದಡೇನು ಶಿವಭಕ್ತನೇ ಕುಲಜಂ ಭೋ. (೫೮೮)**

ವೈದಿಕ ಧರ್ಮವು ಪೂಜ್ಯ ಭಾವನೆಯಿಂದ ಕಾಣುತ್ತ ಬಂದ ಮಹಾಪುರುಷರು ಹುಟ್ಟಿದ ಜಾತಿಗೂ ಅವರ ಸಾಧನೆ ಸಿದ್ಧಿಗೂ ಸಂಬಂಧವಿಲ್ಲದುದನ್ನು ಮೇಲು ವರ್ಗದವರ ಮುಖಕ್ಕೆ ಹೊಡೆದಂತೆ ಎತ್ತಿ ತೋರಿಸಿದ್ದಾನೆ. ಮನುಷ್ಯ ತನ್ನುಪಜೀವನಕ್ಕೆ ಯಾವ ವೃತ್ತಿಯನ್ನಾದರೂ ಕೈಕೊಳ್ಳಬಹುದು. ವೃತ್ತಿಯಲ್ಲಿ ಮೇಲು–ಕೀಳು ಎಂಬುದಿಲ್ಲ. ಆದರೆ ಕುಟಿಲ ಬುದ್ಧಿಯ ಮೇಲುವರ್ಗದವರು ವೃತ್ತಿಗಳಲ್ಲಿ ಭಿನ್ನತೆಯನ್ನು ಹುಟ್ಟಿಸಿ ಶೂದ್ರರನ್ನು ಕಡೆಗಣಿಸುತ್ತ ತಿರಸ್ಕರಿಸುತ್ತ ಬಂದರು. ಅಂಥ ಮನೋಧರ್ಮದವರಿಗೆ ಬಸವ ಕೊಡುವ ವಿವರಣೆಯಿದು:

**ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ,**
**ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ**
**ಇದು ಕಾರಣ ಕೂಡಲಸಂಗಮದೇವಾ**
**ಲಿಂಗಸ್ಥಲವನರಿದವನೆ ಕುಲಜನು. (೫೮೯)**

ಸೃಷ್ಟಿಯಲ್ಲಿ ಮೇಲು–ಕೀಳು, ಹೆಚ್ಚು–ಕಡಿಮೆ ಎಂಬ ಅಂಶ ತಿಲಮಾತ್ರವೂ ಇಲ್ಲ. ಇವು ಮಾನವ ನಿರ್ಮಿತ ಕೃತಕ ಗೋಡೆಗಳು. ಈ ಮೂಲಭೂತ ವಿಚಾರವನ್ನು ಕೆಳಗಿನ ವಚನದಿಂದ ಬಸವಣ್ಣ ಸ್ಪಷ್ಟಪಡಿಸಿದ್ದಾನೆ:

**ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ**
**ಜಲವೊಂದೆ ಶೌಚಾಚಮನಕ್ಕೆ**
**ಕುಲವೊಂದೆ ತನ್ನ ತಾನರಿದವಂಗೆ**
**ಫಲವೊಂದೆ ಷಡುದರುಶನ ಮುಕ್ತಿಗೆ**
**ನಿಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ.**

**(೮೭೮)**

ಸೃಷ್ಟಿ ಸರ್ವ ಜೀವಿಗಳಿಗೆಲ್ಲ ಭೇದಭಾವವಿಲ್ಲದೆ ಸಮಾನ ಆಶ್ರಯನೀಡುವಂತೆ ತನ್ನ ಹೊಸ ಸಮಾಜವೂ ಸಮಾನತೆಯ ಆಧಾರದ ಮೇಲೆ ನಿರ್ಮಿತವಾಗಬೇಕೆಂಬುದು ಬಸವನ ಉದ್ದೇಶವಾಗಿತ್ತು. ಅಂದಿನ ವಿಷಮ ಸಾಮಾಜಿಕ ಪರಿಸ್ಥಿತಿ ಎಷ್ಟು ಪ್ರತಿಕೂಲವಾಗಿತ್ತೆಂದರೆ ಬಸವನ ಈ ಪ್ರಾಮಾಣಿಕ ಪ್ರಯತ್ನ ಸಂಶಯ ಮೂಡಿಸುವಂತಾಯಿತು. ಅವನು ಕೆಳಸ್ತರದ ಜನತೆಯ ಸಮೀಪಕ್ಕೆ ಹೋದಂತೆಲ್ಲ ಅವರು ದೂರಾದರು. ಶತಶತಮಾನಗಳಿಂದ ತಿರಸ್ಕರಿಸಲ್ಪಟ್ಟು ಕೀಳರಿಮೆಯ ವ್ಯಾಧಿಯಿಂದ ನವೆಯುತ್ತಿದ್ದ ಆ ಜನತೆಗೆ ಮೇಲು ಜಾತಿಯವನೊಬ್ಬ ಹೀಗೆ ಏಕಾಏಕಿ ತಮ್ಮತ್ತ ಬಂದುದು ಆಶ್ಚರ್ಯ ಆಘಾತದ ಸಂಗತಿಯಾಗಿರಲು ಸಾಧ್ಯ. ಅವರ ಈ ಭಾವನೆ ನಿವಾರಿಸಲು ಬಸವ ಪಟ್ಟಪಾಡು ಹೆಚ್ಚಿನದು.

**ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ**
**ಕಷ್ಟತನದ ಹೊಱೆಯ ಹೊಱೆಸದಿರಯ್ಯಾ**
**ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ**
**ದಾಸಯ್ಯ ಶಿವದಾನವನೆಱೆಯ ನೋಡಯ್ಯಾ**
**ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ**
**ಉನ್ನತ ಮಹಿಮ ಕೂಡಲಸಂಗಮದೇವಾ ಶಿವಧೋ**
**ಶಿವಧೋ! (೩೪೩)**

ತಾನು ಉತ್ತಮ ಕುಲದವನಾದುದೇ ತನ್ನ ಕ್ರಾಂತಿಗೆ ಅಡ್ಡವಾದುದನ್ನು ಬಸವ ಇಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಈ ಉತ್ತಮಿಕೆಯ ಅರ್ಥಹೀನ ಲೋಕದಿಂದ ಹೊರ ಬಂದಿರುವ ನಾನು ನಿಮ್ಮವನು, ನಿಮ್ಮಂಥವನು ಎಂದು ನಂಬಿಕೆಯನ್ನುಂಟು ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾನೆ. ತಾನು ಹುಟ್ಟಿದ ಕುಲ ತನ್ನ ಕಾರ್ಯ ಚಟುವಟಿಕೆಗಳಿಗೆ ಎದುರಾದಾಗ

**ಚೆನ್ನಯ್ಯನ ಮನೆಯ ದಾಸನ ಮಗನು**
**ಕಕ್ಕಯ್ಯನ ಮನೆಯ ದಾಸಿಯ ಮಗಳು**
**ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ**
**ಸಂಗವಮಾಡಿದರು**
**ಇವರಿಬ್ಬರಿಗೆ ಹುಟ್ಟಿದ ಮಗ ನಾನು**
**ಕೂಡಲಸಂಗಮದೇವ ಸಾಕ್ಷಿಯಾಗಿ. (೩೪೫)**

ಎಂದು ಹೇಳಿದ್ದಾನೆ. ಈ ಮಾತು ಕೇವಲ ಮೇಲುನೋಟದ ಸಮಾಧಾನಕ್ಕಾಗಿ ಮಾಡಿಕೊಂಡಿರುವ ಆತ್ಮನಿಂದನೆಯಲ್ಲ; ಮೇಲು-ಕೀಳುಗಳನ್ನು ಅಳಿಸಿ ಸಮಾನತೆಯ ಸಮಾಜ ನಿರ್ಮಿಸಲು ಹಂಬಲಿಸಿದ ಬಸವನ ಕಳಕಳಿಯ ಧ್ವನಿ ಇಲ್ಲಿದೆ.

ಸುಖೀ ಸಮಾಜ ನಿರ್ಮಾಣವಾಗಬೇಕಾದರೆ ದುಡಿಮೆ ಅತ್ಯಂತ ಮಹತ್ವವಾದುದು. ಕೆಲವರ ದುಡಿಮೆಯ ಪ್ರತಿಫಲವನ್ನು ಹಲವರು ಆರಾಮವಾಗಿ ಕುಳಿತು ಭೋಗಿಸುವುದನ್ನು ಬಸವಣ್ಣ ವಿರೋಧಿಸಿದ. ಶೋಷಣೆಯ ಒಂದು ಮುಖವಾದ ಈ ವಿಧಾನವನ್ನು ನಿಲ್ಲಿಸಲು ಕಾಯಕ ತತ್ವವನ್ನು ರೂಢಿಗೆ ತಂದನು. ಸಮಾಜದ ಪ್ರತಿಯೊಬ್ಬ ಜೀವಿಯು ದುಡಿಯಲೇ ಬೇಕು. ದುಡಿಯಲಾರದವನು ಸಮಾಜಕ್ಕೆ ಹೊರೆಯಾಗುತ್ತಾನೆ. ತಾನು ದುಡಿದು ಗಳಿಸಿದುದರಲ್ಲಿ ಗುರುಜಂಗಮರಿಗೆ ಸತ್ಪಾತ್ರ ದಾನ ಮಾಡಬೇಕು. ಪರಿಶುದ್ಧ ಕಾಯಕದಿಂದ ಬಂದುದನ್ನು ಲಿಂಗಕ್ಕರ್ಪಿಸಿ, ಭೋಗಿಸಿ ಸಂತೃಪ್ತಿಯಿಂದಿರಬೇಕೆಂಬುದು ಬಸವಣ್ಣನ ಸಂದೇಶವಾಗಿತ್ತು. ಎಲ್ಲರೂ ಕಾಯಕನಿರತರಾದರೆ ಒಬ್ಬರನ್ನೊಬ್ಬರು ಶೋಷಣೆ ಮಾಡುವ ಮಾತಂತೂ ದೂರೇ ಉಳಿಯಿತು ಮತ್ತು ಸಮಾಜದಲ್ಲಿ ತನ್ನಿಂದ ತಾನೇ ನೆಮ್ಮದಿ ನೆಲೆಸುವುದು. ಈ ರೀತಿಯ ನವನಿರ್ಮಾಣಕ್ಕೆ ಬಸವ ಮುಂದಾದ. ಕಾಯಕದ ಮಹತ್ವವನ್ನು –

**ಕಾಯವೆಂಬ ಘಟಕ್ಕೆ ಚೈತನ್ಯವೇ ಸಯದಾನ**
**ಸಮತೆಯೆಂಬ ಜಲ ಕರಣಾದಿಗಳೆ ಸ್ರವಣ**
**ಜ್ಞಾನವೆಂಬ ಅಗ್ನಿಯನಿಕ್ಕಿ**
**ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ ಪಾಕಕ್ಕೆ ತಂದು**
**ಭಾವದಲ್ಲಿ ಕುಳ್ಳಿರಿಸಿ ಪರಿಮಾಣದೋಗರವ ನೀಡಿದಡೆ**
**ಕೂಡಲಸಂಗಮದೇವಂಗೆ ಆರೋಗಣೆಯಾಯಿತ್ತು.**

**(೮೫೧)**

ಹೀಗೆ ಅಧ್ಯಾತ್ಮದ ಸಾಧನೆಯ ಮೊದಲ ಸೋಪಾನವನ್ನಾಗಿಸಿ ಅದಕ್ಕೆ ಪೂಜ್ಯ ಸ್ಥಾನ ನೀಡಿದ್ದಾನೆ. ಕಾಯಕದಲ್ಲಿ ಮೇಲು-ಕೀಳೆಂಬುದಿಲ್ಲ. ಅದು ದೇವೋಪಾಸನೆಯ ಒಂದು ವಿಧಾನ. ಈ ಮೂಲಕ ಬಸವ ವೃತ್ತಿ ಗೌರವವನ್ನು ತಿಳಿಸಿಕೊಟ್ಟನು. ಇದರ ಪರಿಣಾಮವಾಗಿ "ಕಾಯಕನಿರತನಾದೊಡೆ ಗುರುಲಿಂಗಜಂಗಮವನಾದರೂ ಮರೆಯಬೇಕು" ಎಂದು ನಿರ್ಧರಿಸುವವರೆಗೆ ಅಂದಿನವರ ಕಾಯಕ ನಿಷ್ಠೆ ಉಜ್ವಲವಾಗಿತ್ತು. ಕಾಯಕ ಜೀವಿಯಾದವನಿಗೆ ಮಾತ್ರ ಬಸವನ ಹೊಸ ಸಮಾಜದಲ್ಲಿ ಸ್ಥಾನವಿತ್ತು.

ಸಮಾಜ ಜೀವನದ ಜೀವನಾಡಿಯಾದ ಸಂಪತ್ತಿನ ಚಲಾವಣೆಯ ಬಗ್ಗೆ ಬಸವಣ್ಣನಿಗೆ ನಿಖರವಾದ ವಿಚಾರಗಳಿದ್ದವು. ಸಂಪತ್ತು ಕೆಲವೇ ಜನರಲ್ಲಿ ಸಂಗ್ರಹವಾಗಿದ್ದರೆ

ಇತರ ಬಹುಜನ ಅದರ ಕೊರತೆಯ ಯಾತನೆಯನ್ನು ಅನುಭವಿಸಬೇಕು. ಆದ್ದರಿಂದ ಸಂಪತ್ತನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಸಮಾಜ ವಿರೋಧಿ ಧೋರಣೆಯೆಂದು ಬಸವಣ್ಣ ತಿಳಿಸಿದ. ನಮ್ಮ ಅವಶ್ಯಕತೆಗಿಂತ ಹೆಚ್ಚಿನದನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದರ ಮೂಲಕ ನಾವು ಇತರರಿಗೆ ಕೊರತೆಯ ಝಳ ತಾಕಿಸುತ್ತೇವೆ. ಸಂಗ್ರಹ ಬುದ್ಧಿಯನ್ನು ಬಿಟ್ಟರೆ ಸಂಪತ್ತು ತನ್ನಷ್ಟಕ್ಕೆ ತಾನೇ ಸಮಾಜ ಸಂಚಾರಿಯಾಗಿ ನೆಮ್ಮದಿ ನೀಡುತ್ತದೆ. ಇದು ಬಸವಣ್ಣನ ನವ ನಿರ್ಮಾಣ ಧೋರಣೆಯಾಗಿತ್ತು.

**ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ**
**ಅನ್ನದೊಳಗೊಂದಗುಳ**
**ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ**
**ನಿಮ್ಮಾಣೆ ನಿಮ್ಮ ಪುರಾತನರಾಣೆ**
**ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ**
**ಕೂಡಲಸಂಗಮದೇವಾ. (೪೩೫)**

ಈ ವಚನದಲ್ಲಿ ಬಸವಣ್ಣನ ಆತ್ಮನಿರೀಕ್ಷಣೆ ಪ್ರತಿಜ್ಞೆಗಳು ವ್ಯಕ್ತವಾಗಿವೆ. ಸಂಪತ್ತನ್ನು ಸಂಗ್ರಹಿಸಿ ಇಟ್ಟುಕೊಳ್ಳದಿರುವುದು ಒಂದು ವ್ರತ. ಅದನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬರಲು ತನ್ನ ಅನುಯಾಯಿಗಳಿಗೆ ಹೇಳಿದ. ಈ ಮೂಲಕ ಆರ್ಥಿಕ ಸಮಾನತೆಯುಂಟಾಗಿ ಸಮಾಜದಲ್ಲಿ ಶೋಷಣೆ ನಿಲ್ಲುತ್ತದೆಂಬುದು ಅವನ ವಿಚಾರವಾಗಿತ್ತು.

ದಲಿತರನ್ನು ಶೋಷಿಸಲು ಜಾತಿ, ಅಧಿಕಾರ, ಸಂಪತ್ತುಗಳು ಕಾರಣವಾಗಿರುವಂತೆ ಭಾಷೆಯೂ ಒಂದು ಸಾಧನೆಯಾಗಿದೆ. ವಿದ್ಯೆ, ಜ್ಞಾನಗಳು ಜನಸಾಮಾನ್ಯರಿಗೆ ತಿಳಿಯದ ಕೆಲವೇ ಜನರ ಆಸ್ತಿಯಾಗಿದ್ದ ಸಂಸ್ಕೃತದಲ್ಲಿ ಸೆರೆಹಿಡಿಯಲ್ಪಟ್ಟಿದ್ದವು. ಸಂಸ್ಕೃತದ ಬಗೆಗಿನ ಅಜ್ಞಾನ ದಲಿತವರ್ಗವನ್ನು ಮೂಕಪಶುಗಳನ್ನಾಗಿಸಿತ್ತು. ಬಸವಣ್ಣ ಅವರಿಗೆ ದನಿ ತಂದುಕೊಟ್ಟ, ಅವರಿಗೆ ಅವರ ಭಾಷೆಯಲ್ಲಿಯೇ ಹೇಳಿದ. ಅವರಿಗೆ ತಿಳಿಯುವಂತೆ ಹಾಡಿದ ಮತ್ತು ಅವರಿಂದಲೂ ಬರೆಸಿ ಹಾಡಿಸಿದ. ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತವಾಗಿರುವ ಸಮಾಜ ನಿರ್ಮಿಸಲು ಹೊರಟ ಬಸವ ಭಾಷೆಯ ಮೂಲಕ ನಡೆಯುವ ಶೋಷಣೆಯನ್ನು ನಿಲ್ಲಿಸಲು ಮುಂದಾದುದು ಸಹಜವೇ! ಆಗ ದೇವರು, ಧರ್ಮಗಳು ಕನ್ನಡದಲ್ಲಿ ಒಡಮೂಡಿದವು. ಸಾಹಿತ್ಯವು ಸಭಾಭೂಷಣ ಮತ್ತು ಪಂಡಿತರ ಅಲಂಕಾರವಾದ ಚಂಪೂವಿನ ಸೆರೆಬಿಡಿಸಿಕೊಂಡು ಜನಸಾಮಾನ್ಯರಿಗೆ ಅರ್ಥವಾಗುವಂಥ ಸರಳ ಸ್ವರೂಪ ಪಡೆಯಿತು. ಈ ಮೂಲಕ ಬಸವಣ್ಣ "ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ" ಮಾಡಿದನು.

**ತಾಳಮಾನಸರಿಸವನರಿಯೆ**
**ಓಜೆಬಜಾವಣೆಯ ಲೆಕ್ಕವನರಿಯೆ**
**ಅಮೃತಗಣ ದೇವಗಣವನರಿಯೆ**
**ಕೂಡಲಸಂಗಮವೇದಾ**
**ನಿನಗೆ ಕೇಡಿಲ್ಲದಾಗಿ**
**ಅನು ಒಲಿದಂತೆ ಹಾಡುವೆ.**

ಎಂದು ಹೇಳಿದ ಬಸವ ಮುಕ್ತ ಅಭಿವ್ಯಕ್ತಿಯನ್ನು ತನ್ನ ಧ್ಯೇಯವಾಗಿಟ್ಟುಕೊಂಡನಲ್ಲದೆ ಇತರರಿಗೂ ದನಿ ನೀಡಿ ಭಾಷೆಯ ಮೂಲಕ ನಡೆಯುತ್ತಿದ್ದ ಶೋಷಣೆಗೆ ತಡೆ ಹಾಕಿದ.

ಜಡಸಂಪ್ರದಾಯ, ಮೂಢನಂಬಿಕೆ ಮೇಲಿನವರ ಕುಟಿಲೋಪಾಯಗಳಿಂದ ಮರಗಟ್ಟಿದ್ದ ಅಂದಿನ ಸಮಾಜಕ್ಕೆ ಕಾಯಕಲ್ಪ ನೀಡಲು ಬಸವಣ್ಣ ಹೀಗೆ ಪ್ರಯತ್ನಿಸಿದ. ಎಲ್ಲ ವಿಧದ ಶೋಷಣೆಗಳಿಂದ ಮುಕ್ತವಾದ ಸಮಾನತೆಯನ್ನು ಕಾಪಾಡಿಕೊಂಡ, ಸಾತ್ವಿಕ ಜೀವನ ವಿಧಾನವನ್ನು ರೂಪಿಸಿಕೊಂಡ, ಸ್ವಾಭಿಮಾನದಿಂದ ಬದುಕುವ ಆದರ್ಶ ಸಮಾಜವನ್ನು ಕಟ್ಟುವುದು ಬಸವನ ನವನಿರ್ಮಾಣ ಧೋರಣೆಗಳಾಗಿದ್ದವು.

■■

# ಕವಿ ಚಾಮರಸ ಚಿತ್ರಿಸಿದ
# ಅಲ್ಲಮಪ್ರಭು

● ಡಾ. ರಾಮಕೃಷ್ಣ ಮರಾಠೆ

*"ಚಾಮರಸ ೧೫ನೆಯ ಶತಮಾನದಲ್ಲಾಗಿ ಹೋದ ಶ್ರೇಷ್ಠ ವಿರಕ್ತಕವಿ. ಇವನ 'ಪ್ರಭುಲಿಂಗಲೀಲೆ' ಶ್ರೇಷ್ಠ ದರ್ಜೆಯ ರೂಪಕಕಾವ್ಯ. ಅಲ್ಲಮಪ್ರಭುಗಳು ಈ ಕಾವ್ಯದ ನಾಯಕರು. ಪ್ರಭುಗಳ ವಿರಕ್ತ ಬದುಕಿನ ಚಟುವಟಿಕೆಗಳು ಕವಿಗೆ ಲೀಲೆಗಳಾಗಿ ಕಂಡಿವೆ. ತರುಣನಾಗಿದ್ದ ಅಲ್ಲಮನು ಮಾಯೆಯ ಮೋಹಜಾಲವನ್ನು ಹರಿದು ಹಾಕುವ ಅದ್ಭುತ ದೃಶ್ಯವು ಕಾವ್ಯದ ಪೂರ್ವಾರ್ಧದಲ್ಲಿದೆ. ಅದರ ಒಂದು ಆಪ್ತನೋಟ ಪ್ರಸ್ತುತ ಲೇಖನ. ಇದು ಅಲ್ಲಮಪ್ರಭುವಿನ ಜಯಂತಿಯನ್ನು ಆಚರಿಸುವ ತಿಂಗಳು. ಆದ್ದರಿಂದ ಈ ಸ್ಮರಣೆ."*

ಅಧ್ಯಾತ್ಮ-ಚರಿತ್ರೆ-ಕಾವ್ಯ, ಈ ಮೂರು ಸಂಗತಿಗಳು ಕವಿಯೊಬ್ಬನ ಪ್ರತಿಭಾವಿಲಾಸದಲ್ಲಿ ಎರಕಗೊಂಡು ವಿಶಿಷ್ಟ ವಿನ್ಯಾಸದ ಕಲಾಕೃತಿಯಾಗಿ ಹೊರಹೊಮ್ಮಿದ ಹಿರಿಮೆ ಚಾಮರಸನ 'ಪ್ರಭುಲಿಂಗಲೀಲೆ' ಕಾವ್ಯಕ್ಕಿದೆ. ಲಿಂಗಾಯತ ದರ್ಶನದ ವಿರಕ್ತ ಬದುಕಿಗೆ ಭಾಷ್ಯ ಬರೆದಂತಿರುವ ಈ ಕಾವ್ಯವು ಕನ್ನಡ ಕಾವ್ಯ ಪರಂಪರೆಯಲ್ಲಿಯೇ ಎತ್ತರದ ಸ್ಥಾನದಲ್ಲಿದೆ. ತತ್ತ್ವಜ್ಞಾನ, ಚರಿತ್ರೆಯ ಸಂಗತಿಗಳು ಕಲಾಕೃತಿಯೊಂದರಲ್ಲಿ ಮಿಳಿತವಾಗುವಾಗ ತತ್ತ್ವ ಮುಂದಾಗಿ ಕಾವ್ಯ ಹಿಂದಕ್ಕೆ ಸರಿಯುವ, ಕಾವ್ಯ ಮುಂದಾಗಿ ತತ್ತ್ವ ಹಿಂದಕ್ಕೆ ಸರಿಯುವ ಸಂಭವ ಹೆಚ್ಚು. ಇದರಿಂದ ಕಲಾಕೃತಿ ಸಹೃದಯರಿಗೆ ರುಚಿಸದೇ ಹೋಗುವ ಸಾಧ್ಯತೆ ಹೆಚ್ಚು. ಆದರೆ ಈ ಮಾತಿಗೆ ಅಪವಾದವೆನ್ನುವಂತಿದೆ ಚಾಮರಸನ 'ಪ್ರಭುಲಿಂಗಲೀಲೆ'. ಮಾಯಾತತ್ತ್ವ, ಪ್ರಭುತತ್ತ್ವಗಳನ್ನು ಅಲ್ಲಮಪ್ರಭುವಿನ ಚರಿತ್ರೆಯೊಂದಿಗೆ ನಿರೂಪಿಸುವ ಈ ಕಾವ್ಯವು ಕಥನ ಕ್ರಿಯೆಯಿಂದ, ಪಾತ್ರವಿವರದಿಂದ, ಭಾಷೆ-ಸಂಭಾಷಣೆ-ಗೇಯ ಗುಣಗಳಿಂದ ಅದ್ಭುತ ರೂಪಕಕಾವ್ಯವಾಗಿ ಪರಿಣಮಿಸಿದೆ. ಸೃಜನಶೀಲತೆಯ ಚಮತ್ಕಾರ ನೋಡುವಂತಿದೆ. ತತ್ತ್ವ ಪಾತ್ರವಾಗುವ, ಪಾತ್ರವು ಕಥನವಾಗುವ ಕೌಶಲ್ಯವನ್ನು, ಅದರ ಸುಂದರವಾದ ದರ್ಶನವನ್ನು ಈ ಕಾವ್ಯವನ್ನು ಓದಿಯೇ ಅನುಭವಿಸಬೇಕು. ತತ್ತ್ವಸೌಂದರ್ಯ, ಕಾವ್ಯಸೌಂದರ್ಯದ ಸಾಮರಸ್ಯವನ್ನು ಇದರಂತೆ ಸಾಧಿಸಿದ ಪ್ರಾಸಾದಿಕ ಕೃತಿಯು ಕನ್ನಡದ ಸಂದರ್ಭದಲ್ಲಿಯೇ ಮತ್ತೊಂದು ಇಲ್ಲವೆಂದು ಹೇಳಬೇಕು.

**ಭೋಗಭೂಮಿಯ ಭೋಗತನುವಿನ।**
**ಲಾಗದನುಪಮ ಸಿದ್ಧಿ ಕರ್ಮೋ।**
**ದ್ಯೋಗ ಭೂಮಿಯ ಕರ್ಮತನುವಿನಲಿ ಅಲ್ಲದೆ... ॥**

ಕಾವ್ಯದ ಆರಂಭದಲ್ಲಿ ಶಿವನು ಪಾರ್ವತಿಗೆ ಹೇಳುವ ಮಾತಿನಲ್ಲಿ ಈ ಕಾವ್ಯದ ಮನುಷ್ಯಪರ ಧೋರಣೆ ಮಾರ್ಮಿಕವಾಗಿ ವ್ಯಕ್ತವಾಗಿದೆ. ಭೋಗಭೂಮಿ ಎಂದರೆ ಸ್ವರ್ಗಲೋಕ, ಭೋಗತನು ಎಂದರೆ ದೇವತೆಗಳು. ಇವರಿಗೆ ಸಾಧ್ಯವಾಗದ ಕಾಯಕ-ದಾಸೋಹ ಚಟುವಟಿಕೆಗಳು ಕರ್ಮಭೂಮಿಯಲ್ಲಿರುವ ಅಂದರೆ ಭೂಮಿಯ ಮೇಲಿರುವ ಮನುಷ್ಯರಿಂದ, ಶ್ರಮಜೀವಿಗಳಿಂದ ಸಾಧ್ಯವೆಂಬ ಸಂಗತಿಯನ್ನು ಕವಿ ಹೇಳುತ್ತಾನೆ. ದೇಹವಿಲ್ಲದ ದೇವಲೋಕದ ದೇವತೆಗಳಿಗಿಂತಲೂ ನಾವು ನಡೆದಾಡುವ ಈ ಭೂಮಿಯ ಮೇಲಿನ ಜನರಿಗೆ, ದುಡಿಯುವ ಜನರ ಬದುಕಿಗೆ ಘನತೆ-ಗೌರವ ತಂದುಕೊಡುವ ಕಾರ್ಯವು ಈ ಕಾವ್ಯದ ಅಂತರಂಗದಲ್ಲಿ ಇರುವುದನ್ನು ನಾವು ಗಮನಿಸಬೇಕು.

'ಪ್ರಭುಲಿಂಗಲೀಲೆ'ಯ ಪಾತ್ರಗಳು ಸಾಧನೆಗಾಗಿ ಸಂತೋಷದಿಂದ ದೇವಲೋಕದಿಂದ ಈ ಭೂಲೋಕಕ್ಕೆ ಇಳಿದು ಬರುತ್ತವೆ. ಆದರೆ ಹರಿಹರ ಕವಿಯ ಪಾತ್ರಗಳು ಮಾಡಿದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುವುದಕ್ಕಾಗಿ ಒಲ್ಲದ ಮನಸ್ಸಿನಿಂದ ಭೂಲೋಕಕ್ಕೆ ಬರುತ್ತವೆ.

ಕಾವ್ಯದ ನಾಯಕ ಅಲ್ಲಮಪ್ರಭು. ಕಾವ್ಯದ ಪೂರ್ವಾರ್ಧದಲ್ಲಿ ಮಾಯೆಯನ್ನು ಕೋಲಾಹಲಗೈದ ಕಥೆ ಬಂದರೆ, ಕಾವ್ಯದ ಉತ್ತರಾರ್ಧದಲ್ಲಿ ಲೋಕಕಲ್ಯಾಣಕ್ಕಾಗಿ

'ಶ್ರೀಕಲ್ಪ' ಶಾಂತಿನಿಕೇತನ ಟೀಚರ್ಸ್ ಕಾಲೋನಿ, ಹಿಂಡಲಗ ಗಣಪತಿ ಗುಡಿ ಹತ್ತಿರ ಬೆಳಗಾವಿ-591108 ಮೊ-9448863818

ನಡೆಯುವ ಅಲ್ಲಮಪ್ರಭುವಿನ ಜಂಗಮಯಾತ್ರೆಯ ಕಥೆ ಇದೆ. ಇಡೀ ಕಾವ್ಯ ಅಲ್ಲಮಪ್ರಭುವಿನ ಸಂಕಥನವಾಗಿ ವಿರಕ್ತ ವ್ಯಕ್ತಿತ್ವದ ಮಹಾದರ್ಶನ ಮಾಡಿಸುತ್ತದೆ. ಹಾಗೆ ನೋಡಿದರೆ ಅಲ್ಲಮನ ವ್ಯಕ್ತಿತ್ವ ತುಂಬ ಸಂಕೀರ್ಣವಾದುದು. ಅವನ ಮೇಲೆ ಸೂಫಿಸಂಪ್ರದಾಯದ, ಬೌದ್ಧ ತತ್ತ್ವಜ್ಞಾನದ ಗಾಢ ಪ್ರಭಾವವಿರುವುದನ್ನು ಕೆಲವು ಅಧ್ಯಯನಗಳು ಗುರುತಿಸಿವೆ. ಆದರೆ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಣಿಸಿಕೊಳ್ಳುವ ಅಲ್ಲಮನು ಇದ್ದು ಇಲ್ಲದಂತಿರುವ ಬೆಡಗಿನ ವ್ಯಕ್ತಿತ್ವವುಳ್ಳವನು. ಅವನು ಮದ್ದಳಿಗನಾಗಿ ಕಾಣಿಸಿಕೊಂಡರೂ ಮದ್ದಳಿಗನಲ್ಲ. ಮಾಯೆಯ ಪ್ರಿಯಕರನಂತೆ ವರ್ತಿಸಿದರೂ ಪ್ರೇಮಿಯಲ್ಲ. ಅವನು ಭೂಲೋಕದ ಮೇಲಿನ ಲೀಲೆಗಾಗಿಯೇ ದೇಹಧರಿಸಿದ ಶಿವಶರಣನು, ಸಾಕ್ಷಾತ್ 'ಗುಹೇಶ್ವರಲಿಂಗ'ನೆಂದು ಕವಿ ಶರಣಾರ್ಥಿ ಪದ್ಯಗಳಲ್ಲಿ ಬಣ್ಣಿಸಿದ್ದಾನೆ.

### ಮಾಯಾ ಕೋಲಾಹಲ

ತನಗೆ ಅನುರೂಪನಾದ ಗಂಡನು ದೊರೆಯಲಿ ಎಂದು ಹರಕೆ ಹೊತ್ತ ಮಾಯಾದೇವಿ, ಬನವಾಸಿಯ ಮಧುಕೇಶ್ವರನನ್ನು ಪೂಜಿಸುತ್ತಿರುತ್ತಾಳೆ. ಆಗ ಕಾಮಿನಿಗೆ ಕಾಮಿತಾರ್ಥವನು ಕೊಡಬಹುದು ಎಂದು ಮದ್ದಳಿಗನ ರೂಪದಲ್ಲಿ ಅಲ್ಲಮಪ್ರಭು ಪ್ರತ್ಯಕ್ಷನಾಗುತ್ತಾನೆ. ಅಲ್ಲಮ ನಟುವಂಶದ ನಟನಲ್ಲವೆ? ಮಾಯಾಕೋಲಾಹಲವೆಂಬ ನಾಟಕದ ನಾಯಕನಟನಾಗಿ ಅಲ್ಲಮ ಮಧುಕೇಶ್ವರ ಗುಡಿಯ ಬಾಗಿಲಲ್ಲಿ ಮದ್ದಳೆ ಬಾರಿಸುತ್ತ ನಿಂತಿರುತ್ತಾನೆ. ಕಂಠಹಾರ, ತೋಳುಬಂದಿ, ಬೆರಳಿನಲ್ಲಿ ಉಂಗುರ, ಚಾಮರಸ ಹೇಳುತ್ತಾನೆ. ಇವನು ಸಾಮಾನ್ಯ ಮದ್ದಳಿಗನಲ್ಲ. 'ಚೆಲುವಿಂಗೆ ತಾನೇ ಬಿರುದು ಕಟ್ಟುವ' ಮೋಹಕ ರೂಪದ ಮದ್ದಳಿಗ ! ಇಂಥ ಚೆಲುವ ಚೆನ್ನಿಗನಾಗಿರುವುದರಿಂದಲೇ 'ದೇವ-ದಾನವ-ಮಾನವರನ್ನು ದಾವಣಿಯ ದನ ಮಾಡಿ ಕಟ್ಟುವ ಮಾಯಾದೇವಿಯನ್ನು ತನ್ನ ಮೋಹಪಾಶದಿಂದ ಕಟ್ಟಿಹಾಕಲು ಈ ಅಲ್ಲಮನಿಂದ ಮಾತ್ರ ಸಾಧ್ಯ ಎಂಬ ಧ್ವನಿ ಇಲ್ಲಿದೆ.

ಅಲ್ಲಮಪ್ರಭುವಿನ ಮದ್ದಳೆಯ ನಾದಕ್ಕೆ ಮನಸೋಲುತ್ತಾಳೆ. ಮಾಯೆ ಮೇಘಗರ್ಜನೆ ಕೇಳಿದ ನವಿಲಿನಂತಾಗುತ್ತಾಳೆ. ಮದ್ದಳಿಗನ ಮೋಹಕ ರೂಪಕ್ಕೂ ಮರುಳಾಗುತ್ತಾಳೆ. ಅಂಥ ಮದ್ದಳಿಗನನ್ನು ಒಲಿಸಿಕೊಳ್ಳುವ ತವಕ ಅವಳಿಗೆ. ಅವಳಿಗೆ ನಿಲುಕದ ವ್ಯಕ್ತಿತ್ವ ಆತನದು. ಒಲಿದಂತೆ ನಟಿಸುತ್ತಾನೆ ಆದರೆ ಒಲಿಯುವುದಿಲ್ಲ. ಮಾಯಾತತ್ತ್ವ, ಪ್ರಭುತತ್ವಗಳ ಸಂಘರ್ಷವು ಈ ಲೋಕ ಬದುಕಿನ ರೂಪಕದಂತೆ ಈ ಕಾವ್ಯದಲ್ಲಿ ಘಟಿಸುತ್ತದೆ.

ಮಾಯೆ-ಅಲ್ಲಮರನ್ನು ಕೂಡಿಸಲು ಮಾಯೆಯ ಸಖಿಯರು ಪ್ರಯತ್ನಿಸುತ್ತಾರೆ. ಸಖಿಯರಿಗೂ-ಅಲ್ಲಮನಿಗೂ ನಡೆಯುವ ಸಂವಾದದ ಸ್ವಾರಸ್ಯ ಹೇಗಿದೆ ನೋಡಿ:

**ಸಖಿಯರು** : ನೀನು ಯಾವ ದೇಶದ ಪುರುಷ?
ನಿನ್ನ ಹೆಸರೇನು?
ನಿನ್ನ ಠಾವು ಯಾವುದು?

**ಅಲ್ಲಮ** : ನಮ್ಮದು ಪರದೇಶ. ಭವರೋಗವನು ಅಲ್ಲವೆನಿಸುವ ಅಲ್ಲಮನೆಂಬುದು ನನ್ನ ಹೆಸರು. ಸಾತ್ವಿಕ ಮನದವರಲ್ಲಿಯೇ ನಾವು ಇರುವುದು.

ಭಾವಿಸಿದರೆ ಲೌಕಿಕ, ಅನುಭಾವಿಸಿದರೆ ತಾತ್ವಿಕ ಅರ್ಥಗಳನ್ನು ಕೊಡುವ ಇಲ್ಲಿಯ ಮಾತಿನ ಕಲೆ ಶ್ಲೇಷೆಯಿಂದ ಧ್ವನಿಪೂರ್ಣವಾಗಿದೆ. ಅಲ್ಲಮನು ಮದ್ದಳಿಗನಾಗಿ ನಟಿಸುತ್ತಿದ್ದಾನೆ. ನಟನ ಭಾಷೆ ಹೇಗಿರಬೇಕೋ ಹಾಗಿದೆ ಅವನ ಭಾಷೆ. ಇನ್ನು ಮಾಯೆಯ ಸಖಿಯರಾದರೂ ಅಷ್ಟೇ ಜಾಣರು. 'ನಮ್ಮ ಗೆಳತಿ ಮಾಯಾದೇವಿ ರಾಜಕುಮಾರಿ, ಅವರ ಜೊತೆಗೆ ಅರಮನೆಯಲ್ಲಿದ್ದು ಸುಖಿಯಾಗು' ಎಂದು ಹೇಳುತ್ತಾರೆ. ಅದಕ್ಕೆ ಅಲ್ಲಮನ ಉತ್ತರ :

**'ನಾವು ಪರದೇಶಿಗಳು ಬಡವರು**
**ನೀವು ದೊರೆಗಳು ಮೇಲೆ ನಿಮ್ಮಯ**
**ದೇವಿ ರಾಜಕುಮಾರಿ...........'**

ಅಲ್ಲಮನ ಮಾತಿನ ನೆಲೆ ಸಖಿಯರಿಗೆ ಅರ್ಥವಾಗುವುದಿಲ್ಲ. ಅವರು 'ಮಾಯಾದೇವಿ ನಿನ್ನನ್ನು ಪ್ರೀತಿಸುತ್ತಿದ್ದಾಳೆ' ಎಂದು ನೇರವಾಗಿಯೇ ಹೇಳುತ್ತಾರೆ. ಅದನ್ನು ಕೇಳಿದ ಅಲ್ಲಮನು 'ರಾಜಕುಮಾರಿಯಾದವಳು ಸೇವಕನನ್ನು ಪ್ರೀತಿಸುವುದರಲ್ಲಿ ತಪ್ಪೇನಿದೆ? ಅವರಿಗೆ ಅದು ಸಹಜ' ಎನ್ನುತ್ತಾನೆ.

ಸಖಿಯರಿಗೆ ಅಲ್ಲಮನ ಮಾತು ಅರ್ಥವಾಗುವುದಿಲ್ಲ. ಅರ್ಥವಾಗುವುದಾದರೂ ಹೇಗೆ? ಅವರದು ಸಾಮಾನ್ಯ ಭೋಗದ ಪರಿಭಾಷೆ. ಅಲ್ಲಮನದು ಆಧ್ಯಾತ್ಮಿಕ ಯೋಗದ ಪರಿಭಾಷೆ. ಸಖಿಯರು 'ನರ ದಿವಿಜ, ದನುಜರನ್ನು ಲೆಕ್ಕಿಸದಾಕೆ ನಿನಗೆ ಸೋತಿರುವಳು. ರೂಪಸಿಯಾದ ರಾಜಕುಮಾರಿ ನಿನಗೆ ಸೋತಿರುವಳೆದಂರೆ ಅದು ನಿನ್ನ ಭಾಗ್ಯ. ನೀನು ಕೃಪೆ ಮಾಡು' ಎಂದು ಒತ್ತಾಯಿಸುತ್ತಾರೆ. ಆಗ ಅಲ್ಲಮಪ್ರಭು 'ನೀವೆ ಬಲ್ಲಿರಿ ನಿಮ್ಮ ಮಾಯಾದೇವಿಯ ಅಂತಸ್ಥವನ್ನು, ನಾವು ಹೊಸಬರು, ನಮಗೇನು ಗೊತ್ತು....' ಎಂದು ನಿಮ್ಮ ಮನಸಿನಂತೆ ಆಗಲಿ ಎಂದು ನುಡಿಯುತ್ತಾನೆ. ಅಲ್ಲಮನ ಇಲ್ಲಿಯ ಮಾತಿನಲ್ಲಿ ಕಲಂಕರಹಿತ ಮಗುವಿನ ಮುಗ್ಧತೆ ಇದೆ. ಪ್ರೇಮಿಯ ರಸಿಕತೆ

ಇದೆ ಮತ್ತು ಸಂತನ ಅನುಭಾವಿಕ ಧ್ವನಿಯೂ ಇದೆ. ಮದ್ದಳೆಗನಾಗಿ ನಟಿಸುವ ಅವನ ಅಭಿನಯದಲ್ಲಿ ಅಭಿಜಾತ ಕಲಾವಿದನ ಕೌಶಲ್ಯವೂ ಇದೆ. ಒಬ್ಬ ಪ್ರಿಯಕರನಂತೆ ನಟಿಸುವ ಅಲ್ಲಮನ ಅಭಿನಯವೂ ಇಡೀ ಕಾವ್ಯದ ತುಂಬ ಧ್ವನಿಪೂರ್ಣ ಅಭಿವ್ಯಕ್ತಿ ಪಡೆದಿರುವುದನ್ನು ಗಮನಿಸಬೇಕು. 'ಬೆಳಕು-ಕತ್ತಲೆ ಒಂದು ಮಾಡುವೆವು' ಎಂಬ ಭ್ರಮೆಯಲ್ಲಿ ಸಖಿಯರು ಅಲ್ಲಮನನ್ನು, ಮಾಯಾದೇವಿಯನ್ನು ಸಜ್ಜೆ ಮನೆಯಲ್ಲಿ ಕೂಡಿಸುವರು. ಮಾಯಾದೇವಿಯ ಫಜೀತಿ ಕವಿಯ ನುಡಿಯಲ್ಲಿಯೇ ಕೇಳಬೇಕು.

**ಬಯಲ ಚಪ್ಪರಿಪಂತೆ ಚುಂಬನ**
**ಬಯಲನಪ್ಪುವವೊಲು ಸಮುಷ್ಟಿಕೆ**
**ಬಯಲನೀಕ್ಷಿಸುವಂತೆ ನೋಟದ ಕೂಟದ ಅನುಭವಣೆ**

ಅಲ್ಲಮನ ಬಯಲ ವ್ಯಕ್ತಿತ್ವವನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಆಗ ಮಾಯಾದೇವಿಗೆ ಬಯಲನ್ನೇ ಚುಂಬಿಸಿದ, ಬಯಲನ್ನೇ ಅಪ್ಪಿದ, ಬಯಲನ್ನೇ ನೋಡಿದ ಅನುಭವವಾಗುತ್ತದೆ. 'ಮಳೆಗೆ ನೆನೆವುದೆ? ಗಾಳಿ ಬೀಸಿದೊಡೆ ಅಲೆಯುವುದೆ...... ನಭವು?' ಎಂದು ಅಲ್ಲಮನ ವಿರಕ್ತ ವ್ಯಕ್ತಿತ್ವದ ಮಹತಿಯನ್ನು ಆಕಾಶಕ್ಕೆ, ಶುಭ್ರವಾದ ಆಕಾಶಕ್ಕೆ ಹೋಲಿಸಿದ್ದಾನೆ ಕವಿ ಚಾಮರಸ.

ಮಾಯಾದೇವಿಯು ಸರ್ವಾಲಂಕಾರಭೂಷಿತಳಾಗಿ ಒಮ್ಮೆ ಸಮೀಪ ಸುಳಿದರೆ ಸಾಕು ಋಷಿ ಮುನಿಗಳು ಸೋತು ಶರಣಾಗುತ್ತಿದ್ದರು. ಅವಳ ಸೌಂದರ್ಯಕ್ಕೆ ಬ್ರಹ್ಮ ವಿಷ್ಣು ಮರುಳಾಗಿ ಹೋಗುತ್ತಿದ್ದರು. ಅಂತಹ ಮಾಯಾದೇವಿಯನ್ನೇ ಮರುಳುಗೊಳಿಸುವ ಮಾಯಾವಿಗನಾಗುತ್ತಾನೆ ಅಲ್ಲಮಪ್ರಭು. ವಿಮಳೆ ಎಂಬ ಪಾತ್ರವು ಅಲ್ಲಮನ ನಿಜರೂಪವನ್ನು ತೋರಿಸಿ ಎಚ್ಚರಿಸಿದರೂ ಮಾಯಾದೇವಿ ಎಚ್ಚೆತ್ತುಕೊಳ್ಳುವದಿಲ್ಲ. ಆಗ ಅಲ್ಲಮನು ಅಹಂಕಾರಿಗೆ, ಅಜ್ಞಾನಿಗೆ ಜ್ಞಾನೋದಯವಾಗುವದಿಲ್ಲವೆಂದು ಹೇಳಿ 'ನಟ್ಟುಗತನವನು ನೂಕುತಲಿ, ಮದ್ದಳೆಯನು ಒಡೆದು' ಅಲ್ಲಿಂದ ಹೋಗುವನು. ಅಲ್ಲಮ ಹೊರಟು ಹೋದರೂ ಮಾಯಾದೇವಿ ಅವನನ್ನು ಹಿಂಬಾಲಿಸಿ ಹೋಗುತ್ತಾಳೆ. ಕಾಡಿನಲ್ಲಿ ಅವಳು ಅನುಭವಿಸುತ್ತಿದ್ದ ಕಷ್ಟವನ್ನು ನೋಡಿ ಅಲ್ಲಮ ಕರಗುತ್ತಾನೆ. ಅವಳಿಗೆ ಸಮಾಧಾನ ಹೇಳಬೇಕು ಅವಳ ಕಷ್ಟ ಪರಿಹರಿಸಬೇಕೆಂದು ಮತ್ತೆ ಕಾಣಿಸಿಕೊಳ್ಳುತ್ತಾನೆ. ಇಬ್ಬರ ನಡುವೆ ಮತ್ತೆ ಮಾತಿನ ಚಕಮಕಿ. ಮಾಯೆಯ ಅಹಂಕಾರ, ಅಜ್ಞಾನ, ಇಂದ್ರಿಯಗಳ ಚಪಲ ಚಂಚಲತೆಯನ್ನು ಅಲ್ಲಮ ಖಂಡಿಸುತ್ತಾನೆ. 'ಕಾಮವೆತ್ತಲು? ಪರಮತತ್ತ್ವದ ಸೀಮೆಯೆತ್ತಲು? ತಿಮಿರವೆತ್ತ? ತಾಮರಸಖನೆತ್ತ? ಭ್ರಾಮಕದ ನುಡಿ ಸಾಕು ನೀನೆತ್ತ? ಆ ಘನವೆತ್ತ? ! ಮರುಳೇ ಕ್ಷೇಮದಲಿ ನೀ ಬಂದ ಬಟ್ಟೆಯಲಿ ಹೋಗು' ಎಂದು ನಿಷ್ಠುರವಾಗಿಯೇ ನುಡಿಯುತ್ತಾನೆ. ಹೀಗೆ ಚಾಮರಸ ಕವಿಯು ವೈರಾಗ್ಯಮೂರ್ತಿಯಾದ ಅಲ್ಲಮಪ್ರಭುವಿನ ಲೀಲಾವಿಲಾಸವನ್ನು ಅತ್ಯಂತ ಹೃದ್ಯವಾಗಿ ನಿರೂಪಿಸಿದ್ದಾನೆ. ವಿಮಳೆಯಿಂದ ಅಲ್ಲಮನ ಜನನದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿಸಿದ್ದಾನೆ.

## ತತ್ತ್ವದರ್ಶನ

ಸುಜ್ಞಾನಿ (ಸುಜ್ಞಾನ) ಎಂಬುವಳು ಅಲ್ಲಮನ ತಾಯಿ. ನಿರಹಂಕಾರ ಎಂಬುವವನು ತಂದೆ. ಇವರ ಶಿವಭಕ್ತಿಗೆ ಮೆಚ್ಚಿ ಅಲ್ಲಮ ಇವರ ಮಗನಾಗಿ ಹುಟ್ಟುವನು. ನೋಡು ನೋಡುತ್ತಿದ್ದಂತೆ ನುಡಿ ಕಲಿತು, ನಡೆ ಕಲಿತು ಅಲ್ಲಮ ಬೆಳೆಯುವನು. ಜಗದ ಜಾಡ್ಯಗಳನ್ನು, ಜಂಜಡಗಳನ್ನು 'ಅಲ್ಲ'ವೆನಿಸುವವನೆಂದು ಅವನಿಗೆ 'ಅಲ್ಲಮ'ನೆಂದು ಹೆಸರಿಟ್ಟು ಕರೆಯುವರು. ಶಿಶುರೂಪದ ಅಲ್ಲಮನು 'ಸದಾ ಸಾಕ್ಷಾತ್ ಅವನಿ ಜಲ ಅನಲ ಅನಿಲ ಭೂತತತ್ತ್ವವಿದೂರನು ಪರಮಾನಂದ ರಸಭರಿತನು. ವಿಚಾರಿಸಿದರೆ ಜಾತನೂ ಅಲ್ಲ; ಅಜಾತನೂ ಅಲ್ಲ' ಎಂದು ಕವಿ ಅವನ ಬಾಲ್ಯವನ್ನು ಬಣ್ಣಿಸಿದ್ದಾನೆ.

ಪರದೈವವನ್ನೇ, ಪರಮಾತ್ಮನನ್ನೇ ಪ್ರತ್ಯಕ್ಷ ಮಗನಾಗಿ ಪಡೆದ ತಂದೆ ತಾಯಿ ಅಲ್ಲಮನನ್ನು ಬಿಟ್ಟಿರುವುದು ಹೇಗೆ ಎಂದು ಚಿಂತಿಸುತ್ತಿರುವಾಗ ಅಲ್ಲಮನು ಹೇಳುವ ಮಾತು:

**ಬಗೆಯ ನಿರಹಂಕಾರ ಸುಜ್ಞಾ,**
**ನಿಗಳ ಮೇಳವನು ಒಲ್ಲದಾ ಪ್ರಭು**
**ವಗಲಿ ತಾನಿರಬಲ್ಲನೇ......?**

ಅಲ್ಲಮನ ಮಾತಿನಲ್ಲಿ ತತ್ತ್ವ ಅಡಗಿದೆ. ತತ್ತ್ವಜ್ಞಾನ ತುಂಬಿದೆ. ನಿರಹಂಕಾರ ಮತ್ತು ಸುಜ್ಞಾನಗಳ ಸಹವಾಸ ಇಲ್ಲದಿದ್ದರೆ ಶಿವತತ್ತ್ವಕ್ಕೆ ಅಸ್ತಿತ್ವವೇ ಇಲ್ಲ. ಅವುಗಳನ್ನು ಬಿಟ್ಟು ಅಲ್ಲಮನು ಇರಲು ಸಾಧ್ಯವೇ ಇಲ್ಲ ಎಂದು ತಂದೆ ತಾಯಿಗಳಿಗೆ ಮನವರಿಕೆ ಮಾಡುತ್ತಾನೆ. ಕಾವ್ಯದಲ್ಲಿ ಮಾನವಿಕ ನೆಲೆ ಮತ್ತು ತಾತ್ವಿಕ ನೆಲೆಗಳು ಎರಕಗೊಂಡುದರ ಪ್ರತ್ಯಕ್ಷ ಪ್ರಮಾಣವಾಗಿ ಅಲ್ಲಮನ ವ್ಯಕ್ತಿತ್ವ ವ್ಯಕ್ತಿ ಚಿತ್ರ ಮೈದಾಳಿದೆ.

ಮಾಯೆಯ ಪಾತ್ರದಲ್ಲಿಯೂ ಅದೇ ತಾತ್ವಿಕ ದರ್ಶನವಿದೆ. ಪಾರ್ವತಿಯ ಸೂಕ್ಷ್ಮತನುವಿನ ಅಹಂಕಾರ, ಅಜ್ಞಾನ, ಮದಗಳಿಂದ ಮೈದಾಳಿ ಬಂದವಳು ಮಾಯಾದೇವಿ. ಬನವಾಸಿಯ ರಾಜದಂಪತಿಗಳಾದ ಮೋಹಿನಿ ಮಮಕಾರರು ಇವಳ ತಂದೆ ತಾಯಿಗಳು. ಅಹಂಕಾರಾಚಾರ್ಯ ಇವಳ ಗುರು. ಹೀಗೆ ತಾಮಸ ಪರಿಸರದ ಸೃಷ್ಟಿಯಾಗಿ ಮಾಯಾದೇವಿ

ರೂಪಗೊಂಡಿದ್ದಾಳೆ. ಮಾಯೆಯಿಂದ ಪ್ರಕೃತಿಯಲ್ಲಿ ವಿಚಿತ್ರ ಬದಲಾವಣೆಗಳಾಗುತ್ತವೆ. ಹುತ್ತ ಬೆಳೆದ ಸಮಾಧಿವಂತರ ಚಿತ್ತಗಳು ಪಲ್ಲಟಿಸುತ್ತವೆ. ಮುನಿಗಳ ಕೈಯೊಳಗಿನ ಜಪಮಾಲೆಗಳು ಕಳಚಿ ಬೀಳುತ್ತವೆ. ಅವಳ ಮೋಹಕರೂಪ ನೋಡಿದ ಕಣ್ಣುಗಳಿಗೆ ಮಾಯೆ ಮುಸುಕುವುದು. ಅದಕ್ಕಾಗಿಯೇ ತಂದೆ ತಾಯಿಗಳು ಅವಳಿಗೆ 'ಮಾಯೆ' ಎಂದು ಹೆಸರಿಡುವರು.

ಚಾಮರಸಕವಿಯ ಭಾಮಿನಿ ಷಟ್ಪದಿಗೆ ಗೇಯ ಗುಣವಿದೆ. ಶೈಲಿ ಕನ್ನಡ ಸಾಹಿತ್ಯದಲ್ಲಿಯೇ ಮಾದರಿಯೆನಿಸಿದೆ. ಕವಿಯ ಶೈಲಿಯ ಮುಖ್ಯ ಗುಣವೆಂದರೆ ಸರಳತೆ ಹಾಗು ಶ್ರಾವ್ಯತೆ. ಕವಿ ಪಾಂಡಿತ್ಯದ ಪ್ರದರ್ಶನಕ್ಕೆ ಹೋಗಿ ಕಾವ್ಯವನ್ನು ಎಲ್ಲಿಯೂ ಜಡಗೊಳಿಸಿಲ್ಲ. ಪಂಡಿತರು ಮೆಚ್ಚುವಂತಹ ಶ್ಲೇಷೆ, ವಿರೋಧಾಭಾಸ, ಶಬ್ದಾಲಂಕಾರಗಳ ಆಡಂಬರಕ್ಕೆ ಮಣಿದಿಲ್ಲ. ಸಹೃದಯರಿಗೆ ಸುಲಭ ಗ್ರಾಹ್ಯವಾಗುವಂತಹ ಉಪಮೆ, ರೂಪಕ, ದೃಷ್ಟಾಂತ ಅಲಂಕಾರಗಳ ಔಚಿತ್ಯಪೂರ್ಣ ಬಳಕೆಯು ಚಾಮರಸನ ವಿಶೇಷತೆಯಾಗಿದೆ. ಗುರುದೀಕ್ಷೆ ಇಲ್ಲದ ಪೂಜೆಯು 'ಕಣ್ಣು ಕಾಣದ ಕುರುಡ ಕನ್ನಡಿಯ ಹಿಡಿದಂತೆ' ಮನಶುದ್ಧಿ ಇಲ್ಲದ ಭಕ್ತರು ಎಂದರೆ, 'ಹರಗಿ ಹಸನಾದ ಹೊಲದಲ್ಲಿ ಹುಳುಕು ಬೀಜಗಳನು ಬಿತ್ತುವವರು' ಇಂಥ ಸರಳ ಸುಂದರ ಉಪಮೆ, ದೃಷ್ಟಾಂತಗಳ ಬಳಕೆಯಿಂದ ಪ್ರಭುಲಿಂಗಲೀಲೆಯ ಆಕರ್ಷಣೆ ಹೆಚ್ಚಿದೆ.

ಅಂತರಂಗದ ಅನುಭವವನ್ನು ಕಾವ್ಯದಲ್ಲಿ ಧಾರೆ ಎರೆಯುವ ಕವಿಯ ಭಾಷೆಗೆ ರೂಪಕ ಶಕ್ತಿ ಒದಗುವ ರೀತಿಯೂ ಅನನ್ಯವಾಗಿದೆ. ನಿರಹಂಕಾರ, ಸುಜ್ಞಾನಿ, ಅಲ್ಲಮ, ಮಮಕಾರ, ಮೋಹಿನಿ, ಮಾಯೆ ಮುಂತಾದ ಹೆಸರುಗಳು ಸಾಂಕೇತಿಕವೂ, ಧ್ವನಿಪೂರ್ಣವೂ ಆಗಿವೆ. ಇಂಥ ತತ್ತ್ವರೂಪದ ಪಾತ್ರಗಳಿಂದ ಕಾವ್ಯದಲ್ಲಿ ರೂಪಕ ಲೋಕವೊಂದು ನಿರ್ಮಾಣವಾಗಿ ಅರ್ಥವಲಯ ವಿಸ್ತಾರಗೊಳ್ಳುವುದು ಈ ಕಾವ್ಯದ ವಿಶೇಷ. ಕನ್ನಡ ಭಾಷೆಗಿರುವ ನಾದಶಕ್ತಿಯನ್ನು ಅನುಭವಿಸಬೇಕಾದರೆ 'ಪ್ರಭುಲಿಂಗಲೀಲೆ'ಯನ್ನು ಓದಬೇಕು.

ಕಾವ್ಯದ ಉತ್ತರಾರ್ಧದಲ್ಲಿ ಅಲ್ಲಮಪ್ರಭುವಿನ ಲೋಕಕಲ್ಯಾಣದ ಕಥನವಿದೆ. ಅದೊಂದು ತತ್ತ್ವ ಚಿಂತನೆಗಳ ರಸಘಟ್ಟಿ. ಅದನ್ನು ಪ್ರತ್ಯೇಕವಾಗಿಯೇ ನೋಡಬೇಕು. ಕಾವ್ಯದ ಪೂರ್ವಾರ್ಧದಲ್ಲಿ ಬರುವ ಅಲ್ಲಮನ ಚಿತ್ರ ಮಾತ್ರ ಅಚ್ಚಳಿಯದ ಅನುಭಾವಿಕ ಚಿತ್ರ. ತಪಸ್ಸಿನಲ್ಲಿ ನಿರತನಾಗಿದ್ದ ವಿಶ್ವಾಮಿತ್ರ ಮುನಿಯು ಒಂದು ಸಲ ಮೇನಕೆಯ ಮೋಹಕ ರೂಪಕ್ಕೆ ಅವಳ ಸುಂದರ ನೃತ್ಯಕ್ಕೆ ಮನಸೋತದ್ದು, ತಪಸ್ಸು ಬಿಟ್ಟು ಮೇನಕೆಯ ಜೊತೆಗೆ ಅನುರಕ್ತನಾದದ್ದು ಪುರಾಣದಲ್ಲಿ ಬರುತ್ತದೆ. ಆ ಪ್ರಸಂಗಕ್ಕಿಂತ ಭಿನ್ನವಾದ ಮತ್ತು ಜಿತೇಂದ್ರಿಯತ್ವಕ್ಕೆ ಪ್ರತೀಕವಾದ ಅಲ್ಲಮಪ್ರಭುವಿನ ಮಾಯಾಕೋಲಾಹಲದ ಕಥೆಯು ವಿರಕ್ತವಿಲಾಸಕ್ಕೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಭಾರತೀಯ ಸಾಹಿತ್ಯದಲ್ಲಿಯೇ ಅಪರೂಪವೆನಿಸುವ ಇಂಥ ರೂಪಕಚಿತ್ರಗಳಿಂದ ಕನ್ನಡ ಕಾವ್ಯಪರಂಪರೆ ಶ್ರೀಮಂತವಾಗಿದೆ.

■■

*ಕರ್ಮದ ಗಡಣ ಹಿಂಗಿದುವಿಂದು,*
*ಪಾಪದ ಬಲೆ ಬಳಸಿ ಹೋದವು.*
*ಬಲ್ಲೆನು ಈ ಸಂಸಾರದಲ್ಲಿ ನೊಂದು ಬೆಂದೆನಾಗಿ*
*ಮಾಯೆಯ ತಲೆಯ ಮೆಟ್ಟಿ ಹೋದೆನು.*
*ಇನ್ನು ಮರಳಿ ಬಾರೆನು ಗುಹೇಶ್ವರಾ ನಿಮ್ಮಾಣೆ.*

# ಡಾ. ಪುಟ್ಟರಾಜ ಗವಾಯಿಗಳು

● ಡಾ. ಸಂಗಮೇಶ ಸವದತ್ತಿಮಠ

ಕ್ರಿ. ಶ. ೧೯೧೪ ನೇ ಮಾರ್ಚ ೩ನೇ ದಿನಾಂಕದಂದು ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ದೇವರ ಹೊಸಪೇಟ ಗ್ರಾಮದ ರೇವಣಯ್ಯ ಸಿದ್ದಮ್ಮ ಅವರ ಪುಟ್ಟ ಮಗುವಾಗಿ ಪುಟ್ಟಯ್ಯ ತಾಯಿಯ ತವರೂರು ದೇವಗಿರಿಯಲ್ಲಿ ಜನಿಸಿದ. ಪುಟ್ಟಯ್ಯನ ಪೂರ್ವಜರು ಹಾನಗಲ್ಲ ತಾಲೂಕಿನ ವೆಂಕಟಾಪುರ ಹಿರೇಮಠದ ವಂಶಸ್ಥರು. ನಂತರ ಅದೇ ತಾಲೂಕಿನ ಹೊಸಪೇಟೆಗೆ ಮನೆತನ ಸ್ಥಳಾಂತರವಾದಾಗ ವೆಂಕಟಾಪುರ ಮಠದವರು ಎಂಬ ಅಭಿದಾನ ರೂಢಿಯಾಯಿತು. ಪುಟ್ಟಯ್ಯ ರೇವಣಯ್ಯ ವೆಂಕಟಾಪುರಮಠ ಮುಂದೆ ಪುಟ್ಟರಾಜ ಗವಾಯಿ ಎಂದೇ ಜಗತ್ತಿನಾದ್ಯಂತ ಸುಪ್ರಸಿದ್ಧಿಯನ್ನು ಪಡೆದ ಭಾಗ್ಯವಂತ. ಸಾದುಗಪ್ಪಾದ ಮಿಂಚಿನ ಕಣ್ಣ ನೋಟದ ಮುದ್ದಾದ ಮಗು ಮುಂದೆ ಆರೇ ತಿಂಗಳಲ್ಲಿ ಲೋಕದ ಜಂಜಾಟವನ್ನು ಕಣ್ಣಿಂದ ನೋಡುವುದೇ ಬೇಡವೆಂದು ಶಾಶ್ವತವಾಗಿ ದೃಷ್ಟಿ ಕಳೆದುಕೊಂಡ ದಿನ ಪುಟ್ಟಯ್ಯನ ಬದುಕಿನ ಕರಾಳ ದಿನವಾಗಿತ್ತು. ಕಣ್ಣು ನೋವಿಗೆ ನಾಟಿವೈದ್ಯನ ಮೂಢ ಸಲಹೆಯಂತೆ ತಾಯಿ ಸಿದ್ದಮ್ಮ ಕಣ್ಣಿಗೆ ತೊನಸಿ ಹುಳ ಹಾಕಿ ಮಗನ ಭವಿಷ್ಯವನ್ನೇ ಅಂಧಕಾರ ಮಾಡಿದ್ದಳು. ಆದರೆ ಶಿವನಿಚ್ಛೆಯೇ ಬೇರೆಯಾಗಿತ್ತು. ಅಂಗವೈಕಲ್ಯ ಮನುಷ್ಯನ ಸಾಧನೆಗೆ ಎಂದೂ ತೊಡಕಲ್ಲ ಎಂಬುದಕ್ಕೆ ಪುಟ್ಟಯ್ಯನನ್ನು ಸಾಕ್ಷಿ ಮಾಡಿ ಲೋಕದ ಜನರಿಗೆ ತೋರಿಸಬೇಕಾಗಿದ್ದಂತೆ ಕಾಣುತ್ತದೆ. ಯಾಕೆಂದರೆ ಯಾವ ತಾಯಿಯೂ ತನ್ನ ಕರುಳಕುಡಿ ಶಾಶ್ವತವಾಗಿ ಕುರುಡನಾಗಿರಲಿ ಎಂದು ಬಯಸಲಾರಳು. ಮುಂದೆ ಶಿವನಿಚ್ಛೆಯಂತೆಯೆ ಪುಟ್ಟನು ಪುಟ್ಟರಾಜನಾದ, ಪುಟ್ಟರಾಜ, ಪುಟ್ಟರಾಜ ಗವಾಯಿಯಾದ, ಪುಟ್ಟರಾಜ ಗವಾಯಿ ಸಂಗೀತ ವಿದ್ವಾನ್, ಬಹುಭಾಷಾ ಪಂಡಿತ ಡಾ. ಪುಟ್ಟರಾಜ, ಪದ್ಮಭೂಷಣ ಡಾ. ಪುಟ್ಟರಾಜ ಗವಾಯಿಯಾದ. ನಾಡೋಜನಾದ, ಮಹಾಮಹೋಪಾಧ್ಯಾಯನಾದ, ಪ್ರಾಯಶಃ ಮನುಷ್ಯ ದೇಹಧಾರಿಯೊಬ್ಬ ಕಣ್ಣಿಲ್ಲದಿದ್ದರೂ ಸಾಹಿತ್ಯ ಸಂಗೀತ ಸಾಮ್ರಾಟನಾಗುವುದು ಹೇಗೆ ಎಂಬುದನ್ನು ಲೋಕಕ್ಕೆ ತೋರಿಸಿಕೊಟ್ಟ. ಅವರು ಮಾತ್ರ ಮಾನವ ಲೋಕದ ಅದ್ಭುತ ಶಕ್ತಿಯಂತೂ ಆಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅವರು ಕುರುಡತನವನ್ನು ಒಂದು ಕೊರತೆ ಎಂದು ಯಾವತ್ತೂ ಭಾವಿಸಲಿಲ್ಲ. ಕಣ್ಣಿದ್ದೂ ಕುರುಡರಾಗಿರುವಂಥ ಎಷ್ಟು ಜನ ನಮ್ಮ ಮಧ್ಯದಲ್ಲಿ ಇಲ್ಲ? ಪುಟ್ಟರಾಜರಿಗೆ ಹೊರಗಣ್ಣು ಇಲ್ಲದಿದ್ದರೂ ಜ್ಞಾನಶಕ್ತಿಯ ಒಳಗಣ್ಣು ಅತಿ ಹೆಚ್ಚು ಪ್ರಬಲವಾಗಿತ್ತು. ಹೊರ ಜಗತ್ತಿನ ಹಿಂಸೆ, ಕ್ರೌರ್ಯ, ಮೋಸ, ವಂಚನೆ, ಸುಳ್ಳುಗಳಂತಹ ಕೆಟ್ಟ ಗುಣಗಳ ಮನುಷ್ಯರ ಸಂಪರ್ಕ ಇವರಿಗಾಗಲಿಲ್ಲ. ಅಂತೆಯೆ ಇವರ ಸಾಧನಾ ಮಾರ್ಗ ಸುಗಮವಾಯಿತು ನೇರವಾಯಿತು.

ಪುಟ್ಟರಾಜರು ತಮ್ಮ 'ಶ್ರೀಕುಮಾರ ವಿಲಾಸ ಕಾವ್ಯಂ' ಎಂಬ ಸಂಸ್ಕೃತ ಮಹಾಕಾವ್ಯದಲ್ಲಿ ಕುರುಡರ ಬಗ್ಗೆ ಕೆಲ ಸ್ವಾರಸ್ಯಕರ ಮಾತುಗಳನ್ನು ಹೇಳಿದ್ದಾರೆ. ಕುರುಡನು ದಿವ್ಯ ರತ್ನವನ್ನು ಹುಡುಕುವುದು ತಿಳಿಗೇಡಿತನ ಎನಿಸಬಹುದಾದರೂ, ಕುರುಡನ ಕೈಯಲ್ಲಿ ಇರುವ ದೀಪ ಉಳಿದವರಿಗೆ ದಾರಿ ದೀಪವಾಗುವುದಿಲ್ಲವೆ? ಕಣ್ಣು ಇದ್ದವರು ಸಜ್ಜನರನ್ನು ಕಂಡೂ ಕಾಣದಂತೆ ಇರುತ್ತಾರೆ. ಆದರೆ ಕುರುಡರು ದುರ್ಜನರನ್ನೂ ಸಜ್ಜನರನ್ನೂ ಯಾವ ಭೇದವಿಲ್ಲದೆ ಒಂದೇ ರೀತಿಯಾಗಿ ಕಾಣುತ್ತಾರೆ. ಎಂಥ ಮುತ್ತಿನಂಥ ನುಡಿ!

ಪುಟ್ಟರಾಜರು ಒಂದು ವಾದ್ಯವನ್ನಲ್ಲ, ಎಲ್ಲ ವಾದ್ಯಗಳನ್ನು ಶಾಸ್ತ್ರೀಯವಾಗಿ, ಲೀಲಾಜಾಲವಾಗಿ ನುಡಿಸುತ್ತಿದ್ದರು. ಆದರೆ ಈ ವಾದ್ಯಗಳನ್ನು ಸಮಾರಂಭಗಳಲ್ಲಿ ನುಡಿಸುತ್ತಿದ್ದರೂ ಅವರಿಗೆ ಇನ್ನೂ ಕೆಲವು ವಾದ್ಯಗಳನ್ನು ಸರಾಗವಾಗಿ ನುಡಿಸಲು ಬರುತ್ತಿತ್ತು. ಸಾರಂಗಿ, ವೀಣೆ, ತಂಬೂರಿ, ಹಾರ್ಮೋನಿಯಂ, ವಾಯೊಲಿನ್, ತಬಲಾ, ಸರೋದ, ಜಲತರಂಗ ಇಷ್ಟು ವಾದ್ಯ ನುಡಿಸುತ್ತಿದ್ದರು. ಇದರಲ್ಲಿ ಸಮಾರಂಭದೊಳಗೆ ಐದು ವಾದ್ಯಗಳನ್ನು ತಮ್ಮ ಹತ್ತಿರ ಇಟ್ಟುಕೊಂಡು ಸಮರಸವಾಗಿ ಎಲ್ಲವನ್ನೂ

ವಿಶ್ರಾಂತ ಪ್ರಾಧ್ಯಾಪಕರು, ಕುಮಾರೇಶ್ವರ ನಗರ, ಧಾರವಾಡ

ನುಡಿಸುತ್ತಿದ್ದರು. ಇಂಥ ಸಂಕೀರ್ಣ ಕಲೆಯ ಸಾಧನೆ ಬಹುಶಃ ಜಗತ್ತಿನಲ್ಲಿಯೇ ಅಪರೂಪದ ಸಾಧನೆ. ವಾಯೊಲಿನ್ ಅವರ ಪ್ರೀತಿಯ ವಾದ್ಯ ಆಗಿತ್ತು.

ಸಂಗೀತ ಶಾಸ್ತ್ರಕ್ಕೆ ಅವರ ಕೊಡುಗೆ ಅಪಾರ. ೬೬ ರಾಗಗಳನ್ನು ಪರಿಚಯ ಮಾಡಿಕೊಂಡು ಹೊಸ ಹೊಸ ರಚನೆಗಳನ್ನು ತಾವೇ ಖುದ್ದಾಗಿ ರಚಿಸಿ ತಮ್ಮದೇ ವಿಶಿಷ್ಟ ಆದಂಥ ಸ್ವರಪದ್ಧತಿ ಹೇಳಿದ್ದಾರೆಂದರೆ ಅವರೊಬ್ಬ 'ಸಂಗೀತಶಿವ' ಆಗಿದ್ದರೆಂಬುದು ಮನವರಿಕೆ ಆಗುತ್ತದೆ. ತಮ್ಮದೇ ಆದ ಆ ಹೊಸ ಪದ್ಧತಿಗೆ ಅವರು 'ಪಂಚಾಕ್ಷರಿ ಲಿಪಿಪದ್ಧತಿ' ಎಂದು ಕರೆದಿದ್ದಾರೆ. ಅವರು ಈ ವಿಷಯವನ್ನು ತಮ್ಮ 'ಹಿಂದೂಸ್ತಾನಿ ಗಾನ ಸುಧಾ' ಎಂಬ ಪುಸ್ತಕದಲ್ಲಿ ನಮೂದಿಸಿದ್ದಾರೆ. ಅವರ ಒಂದು ವಿಶೇಷತೆ ಎಂದರೆ ಅವರು ಯಾವತ್ತೂ ಬರೆದುಕೊಂಡು ಹಾಡುತ್ತಿದ್ದಿಲ್ಲ. ಹಾಡಿ ಬರೆಯುತ್ತಿದ್ದರು. ಸಂಗೀತ ಅಂದರೆ ಅವರಿಗೆ ಒಂದು ಯೋಗ ಸಾಧನೆ, ಒಂದು ತಪಸ್ಸು ಆಗಿತ್ತು. ೮ ವರ್ಷ ವಯಸ್ಸಿನ ಬಾಲಕನಿದ್ದಾಗಲೇ ಅವರು ಸಂಗೀತ ಅಭ್ಯಾಸವನ್ನು ಶುರುಮಾಡಿದ್ದರು. ಸಂಗೀತವನ್ನು ಕಲಿಯಲು ಅವರಿಗೆ ಮೂಲ ಪ್ರೇರಣೆ ಅಂದರೆ ಗುರು ಹಾನಗಲ್ ಕುಮಾರಸ್ವಾಮಿಗಳು. ಪಂಚಾಕ್ಷರಿ ಗವಾಯಿಗಳು ಅವರ ಗುರುಗಳು. ಕರ್ನಾಟಕಿ ಸಂಗೀತವನ್ನು ಅವರು ಕಲಿತರು, ನಂತರ ಹಿಂದೂಸ್ತಾನಿ ಸಂಗೀತದೊಳಗೆ ಅದ್ಭುತ ಸಾಧನೆ ಮಾಡಿದರು. ಅದರಲ್ಲಿ ಹೊಸ ಚೀಜ ಮಾಡಲು ಅಪ್ಪಣೆ ಕೊಡಿಸಿದ್ದೂ ಕುಮಾರಸ್ವಾಮಿಗಳೇ.

ಗುರುಗಳ ಅಪ್ಪಣೆಯನ್ನು ಶಿರಸಾವಹಿಸಿ ಪುಟ್ಟರಾಜರು ಮೊಟ್ಟಮೊದಲು ಚತರಂಗ ಎನ್ನುವ ಚೀಜ ಮಾಡಿ ತೋರಿಸಿದರು. ನಂತರ ಅನೇಕ ಚೀಜಗಳನ್ನು ಕಂಡು ಹಿಡಿದದ್ದು ದೊಡ್ಡ ಸಮಾಚಾರವಾಯಿತು. ಎಂತಹ ಸಭೆಯೇ ಇರಲಿ ಅವರು ಒಂದಾದರೂ ಚೀಜ ಅನ್ನು ಹಾಡಿಯೇ ಹಾಡುತ್ತಿದ್ದರು. ಅವರಲ್ಲಿನ ಅದ್ಭುತ ತಾರಕಶಕ್ತಿ ಬಹು ಬೇಗ ಯಾವುದನ್ನೂ ತಟ್ಟನೆ ಗ್ರಹಿಸಿಕೊಳ್ಳುವಂತೆ ಮಾಡಿ ಹೊಸ ಬಗೆಯಲ್ಲಿ ಅದನ್ನು ಅಭಿವ್ಯಕ್ತಿಸುವಂತೆ ಮಾಡುತ್ತಿತ್ತು. ಇದು ಅವರಿಗೆ ದೈವದತ್ತವಾಗಿ ಬಂದ ಗುಣವಾಗಿತ್ತು, ಹಾಗೆ ನೋಡಿದರೆ ಅವರು ಸಂಗೀತದಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿದ್ದು ಸ್ವಾಧ್ಯಾಯ ಮತ್ತು ಸ್ವಂತ ಸಂಶೋಧನ ಬಲದಿಂದಲೇ.

ಪುಟ್ಟರಾಜ ಗವಾಯಿಗಳು ಕೇವಲ ಸಂಗೀತ ಒಂದೇ ಅಲ್ಲ, ಅವರು ಹಲವು ಕಲೆಗಳ ಸಂಗಮವಾಗಿದ್ದರು, ಪ್ರವಚನ ಮತ್ತು ರಂಗಭೂಮಿ. ಅದರಲ್ಲೂ ಕಂಪನಿ ನಾಟಕ ಕ್ಷೇತ್ರದೊಳಗೆ ಸಾಕಷ್ಟು ಹೆಸರು ಮಾಡಿದ್ದರು. 'ಸಿದ್ರಾಮೇಶ್ವರ ಚರಿತ್ರೆ' ಎಂಬ ನಾಟಕವನ್ನು ಬರೆದು, ಅದನ್ನು ವೀರೇಶ್ವರ ಪುಣ್ಯಾಶ್ರಮದ ಸಂಗೀತ ಕಲಿಯುವ ಹುಡುಗರೊಳಗೆ ಅಭಿನಯ ಮಾಡಬಲ್ಲ ಹುಡುಗರಿಂದ ರಂಗದ ಮೇಲೆ ತಂದರು. ಅದು ಯಶಸ್ವಿಯೂ ಆಯಿತು. ನಂತರ ತಾವೇ ಪೌರಾಣಿಕ, ಭಕ್ತಿಪ್ರಧಾನ ನಾಟಕಗಳನ್ನು ರಚಿಸಲು ತೊಡಗಿದರು. ನರಗುಂದದೊಳಗೆ ಮೊದಲನೆಯ ರಂಗಪ್ರಯೋಗವೂ ಆಯಿತು. 'ಭಗವಾನ್ ಬಸವೇಶ್ವರ' ಮುಂತಾದ ಶರಣರಿಗೆ ಸಂಬಂಧಿಸಿದ ನಾಟಕಗಳನ್ನಲ್ಲದೆ, 'ಸತಿಸುಕನ್ಯಾ' ಮುಂತಾದ ಪೌರಾಣಿಕ ನಾಟಕಗಳನ್ನು ರಚಿಸಿದರು. 'ಸಿರಸಂಗಿ ಲಿಂಗರಾಜ' ಮುಂತಾದ ಚರಿತ್ರಾತ್ಮಕ ನಾಟಕಗಳನ್ನೂ, ಸಾಮಾಜಿಕ ನಾಟಕಗಳನ್ನೂ ಬರೆದರು. ನಂತರ 'ಹಾನಗಲ್ಲ ಕುಮಾರೇಶ್ವರ ಕೃಪಾಪೋಷಿತ ನಾಟ್ಯ ಸಂಘ' ಎನ್ನುವ ನಾಟಕ ಕಂಪನಿ ಶುರು ಮಾಡಿ, ತಮ್ಮ ಸ್ವಂತ ನಾಟಕಗಳನ್ನಲ್ಲದೆ ಬೇರೆಯವರ ನಾಟಕಗಳನ್ನೂ ರಂಗದ ಮೇಲೆ ತಂದರು. 'ಹೇಮರೆಡ್ಡಿ ಮಲ್ಲಮ್ಮ' ಎಂಬ ರಂಗ ನಾಟಕ ೩೭೫ ಪ್ರಯೋಗ ಕಂಡದ್ದು ಒಂದು ದಾಖಲೆಯೇ ಆಗಿತ್ತು.

ರಂಗಭೂಮಿಯ ಮೇಲೆ ಪ್ರಯೋಗ ಆಗುವ ಸಾಮಾಜಿಕ ನಾಟಕವನ್ನೇ ಬರೆಯಲಿ ಅಥವಾ ಚರಿತ್ರೆಗೆ ಸಂಬಂಧಿಸಿದ ನಾಟಕಗಳನ್ನೇ ಬರೆಯಲಿ, ಅವರ ನಾಟಕಗಳಲ್ಲಿ ನೀತಿ, ಧರ್ಮ, ಭಕ್ತಿ, ಸಾಮಾಜಿಕತೆ ಇವು ಇದ್ದೇ ಇರುತ್ತಿದ್ದವು. ಅಷ್ಟೇ ಅಲ್ಲ, ಅವು ಸಮಕಾಲೀನ ಸಮುದಾಯಗಳಿಗೆ ನೈತಿಕ ಮೌಲ್ಯಗಳನ್ನು ಬಿಂಬಿಸುವಂಥ. ಪರಿಣಾಮಕಾರಿಯಾಗುವಂಥ ನಾಟಕಗಳಾಗಿರುತ್ತಿದ್ದವು. ಚರಿತ್ರೆಯ ಕೊರತೆ ಇರುವ ವಸ್ತುಗಳಿದ್ದರೂ ಅವರು ಚರಿತ್ರೆಗೆ ಆಭಾಸ ಆಗದಹಾಗೆ ತೂಗಿಸಿಕೊಂಡು ಹೋಗುವ ನಾಟಕ ರಚನಾ ಕೌಶಲ ಅವರದ್ದಾಗಿತ್ತು. ಕದಿರೆ ರೇಮಮ್ಮನಂತಹ ಅಲಕ್ಷಿತ ಅಪ್ರಸಿದ್ಧ ಶರಣರ ಕುರಿತೂ ಅವರು ನಾಟಕವನ್ನು ರಚಿಸಿದ್ದು ಮಹತ್ವದ್ದಾಗಿದೆ. ಇವರ ಪ್ರೇರಣೆಯಿಂದ ಹೊಸ ನಾಟಕ ಕಂಪನಿಗಳು ಹುಟ್ಟಿಕೊಂಡದ್ದು ಸಣ್ಣ ಮಾತಲ್ಲ. ಚಿತ್ತರಗಿ, ಹೊಸಳ್ಳಿ, ಗದಗ ಬೆಟಗೇರಿ, ನರೇಗಲ್, ಜಾಲಿಹಾಳ ಕಂಪನಿಗಳು ಇಂಥ ಕೆಲವು ಉದಾಹರಣೆಗಳು ಮಾತ್ರ.

ನಾಟಕದಂತೆ ಇನ್ನೊಂದು ಪ್ರಭಾವಿ ಮಾಧ್ಯಮ ಅಂದರೆ ಕೀರ್ತನ, ಪ್ರವಚನ. ಈ ಎರಡೂ ಮಾಧ್ಯಮದಲ್ಲೂ ಪುಟ್ಟರಾಜ ಗವಾಯಿಗಳು ಒಳ್ಳೆಯ ಸಾಧನೆಯನ್ನೇ ಮಾಡಿ

ತೋರಿಸಿದರು. ಕೀರ್ತನ ಮತ್ತು ಪ್ರವಚನ ಮಾಡುವುದೂ ಒಂದು ಕಲೆ. ಅದಕ್ಕೆ ಸಂಪೂರ್ಣ ವಿಷಯ ಪರಿಜ್ಞಾನ, ಸಂಗೀತ, ಹಾಸ್ಯ, ಕಥೆಗಾರಿಕೆಗಳ ಜ್ಞಾನ ಚೆನ್ನಾಗಿ ಇರಬೇಕಾಗುತ್ತದೆ. ಈ ಎಲ್ಲ ಕಲೆಗಳನ್ನೂ ಪುಟ್ಟರಾಜ ಗವಾಯಿಗಳು ಪಡೆದುಕೊಂಡಿದ್ದರು. ಶರಣಬಸವೇಶ್ವರ ಪುರಾಣ ಪ್ರವಚನವನ್ನು ಸತತ ೨೫ ವರ್ಷ ನಡೆಸಿಕೊಟ್ಟ ವಿಶ್ವ ದಾಖಲೆ ಇವರದು. ಇವರಿಂದ ಪ್ರೇರಣೆ ಪಡೆದ ಇವರ ಶಿಷ್ಯರು ಈಗಲೂ ಪುರಾಣ ಪ್ರವಚನ ಮಾಡುತ್ತಲಿದ್ದಾರೆ.

ಶಿವಶರಣರ ಚರಿತ್ರೆಗಳನ್ನು ಲೆಕ್ಕವಿಲ್ಲದಷ್ಟು ಸಲ ಕೀರ್ತನೆಗಳ ಮೂಲಕ ಪ್ರಸಾರ ಮಾಡಿದ್ದಾರೆ. ಪುಟ್ಟರಾಜ ಗವಾಯಿಗಳು ಶಿವಶರಣರಂತೆ ವಚನಕಾರರೂ ಹೌದು. ಅವರು ೧೯೯೧ ರಲ್ಲಿ 'ಶ್ರೀ ಗುರುವಚನ ಪ್ರಭು' ಎಂಬ ವಚನ ಸಂಕಲನ ಗ್ರಂಥವೊಂದನ್ನು ಪ್ರಕಟಿಸಿದ್ದರು. 'ಗುರು ಕುಮಾರ ಪಂಚಾಕ್ಷರಿ' ಎನ್ನುವುದು ಅವರ ವಚನಾಂಕಿತ. ಸಾವಿರಾರು ವಚನಗಳನ್ನು ಅವರು ಬರೆದಿದ್ದು, ಸುಮಾರು ೭೫೦ ವಚನಗಳು ಪ್ರಕಟವಾಗಿವೆ. ಶಿವಶರಣರ ಮತ್ತು ತಮ್ಮ ಸ್ವರಚಿತ ವಚನಗಳನ್ನು ರಾಗಬದ್ಧವಾಗಿ ಹಾಡುತ್ತಿದ್ದರು. ತಮ್ಮ ಶಿಷ್ಯಬಳಗಕ್ಕೂ ಅವುಗಳನ್ನು ಹಾಡಲು ಕಲಿಸಿದರು.

**ನನ್ನ ಶರೀರವು ವೀಣಾದಂಡವಾಗಬೇಕು,**
**ಮಸ್ತಕವು ಕಾಯವಾಗಬೇಕು,**
**ನರಗಳು ತಂತಿಯಾಗಬೇಕು**
**ಇದರಲ್ಲಿ ವ್ಯಾಪಿಸಿದ ಪರಮಾತ್ಮನಾದ**
**ನೀನು ಉದರದಲೊತ್ತಿ ಬಾರಿಸಿ ಮೂವತ್ತೆರಡು ರಾಗಗಳ**
**ಹಾಡಬೇಕಯ್ಯಾ ಗುರುಕುಮಾರ ಪಂಚಾಕ್ಷರೇಶ್ವರ॥**

ಎಂಬ ವಚನವನ್ನು ಬಹು ಸುಂದರವಾಗಿ ಹಾಡುತ್ತಿದ್ದರು. ಹೀಗೆ ವಚನ ರಚನೆ ಮಾಡಿ ಹಾಡಿದ್ದಲ್ಲದೆ ವಚನಗಳ ಜೊತೆಗೆ ಭಾವಗೀತೆಗಳನ್ನೂ ಅವರು ಸ್ವಾರಸ್ಯಕರವಾಗಿ ರಚಿಸಿ ಹಾಡುತ್ತಿದ್ದರು.

**ಚಲುವೆ ನೀ ನಗು ಚಲುವೆ**
**ನೀ ನಕ್ಕರೆ ಬೆಳದಿಂಗಳೇತಕೆ**
**ನಿನ್ನ ಮುಖನೋಡಿ ನಾಚಿ ಚಂದ್ರನು**
**ಮೇಘ ಮಧ್ಯದೊಳಗಡಗಿದನು**
**ನಗುತಾರೆ ನೀ ಇನ್ನೊಮ್ಮೆ ನಗು ನೀನು**
**ನಿನ್ನ ನಗೆಯಲ್ಲಿ ವಿಹರಿಪೆ ನಾನು**

ಇಂಥ ಭಾವಗೀತೆಗಳನ್ನು 'ಭಾವಮಂದಾಕಿನಿ' ಎಂಬ ಕವನ ಸಂಕಲನದಲ್ಲಿ ಅವರು ಪ್ರಕಟಿಸಿದ್ದಾರೆ.

ಕನ್ನಡ ಭಾಷೆಯಲ್ಲಿ ನಾಟಕ, ಪುರಾಣ, ಭಾವಗೀತೆ, ವಚನ, ಕೀರ್ತನ, ಸಂಗೀತಶಾಸ್ತ್ರ, ಜೀವನ ಚರಿತ್ರೆ ಇವೇ ಮುಂತಾದವನ್ನು ಅವರು ರಚಿಸಿದರು. ಅವರ ಇನ್ನೊಂದು ವಿಶೇಷ ಎಂದರೆ ಬೇರೆ ಭಾಷೆಗಳಲ್ಲಿಯೂ ಅವರು ಕೃತಿ ರಚನೆ ಮಾಡಿದ್ದು. ಉದಾಹರಣೆಗೆ ಸಂಸ್ಕೃತದಲ್ಲಿ 'ಶ್ರೀಮತ್ ಕುಮಾರಗೀತ', 'ಶ್ರೀ ರುದ್ರ ತಾತ್ಪರ್ಯ', 'ಶ್ರೀಲಿಂಗ ಸೂಕ್ತಂ' ಎಂಬ ಕೃತಿಗಳನ್ನಲ್ಲದೆ 'ಶ್ರೀ ಕುಮಾರ ವಿಲಾಸ ಕಾವ್ಯಂ' ಎಂಬುದು ಅವರ ಮಹಾಕಾವ್ಯ. ಸಂಸ್ಕೃತದಲ್ಲಿ ಮಹಾಕಾವ್ಯ ರಚಿಸುವಷ್ಟು ಪ್ರಾವಿಣ್ಯವನ್ನು ಪುಟ್ಟರಾಜರು ಪಡೆದಿದ್ದರು ಎಂದರೆ ಅವರ ಪ್ರತಿಭೆ ಎಂಥದು ಎನ್ನುವುದನ್ನು ಊಹಿಸಿಕೊಳ್ಳಬಹುದು. ಕನ್ನಡ ಸಂಸ್ಕೃತ ಅಷ್ಟೇ ಅಲ್ಲ, ಹಿಂದಿ ಭಾಷೆಯಲ್ಲಿಯೂ ಅವರು ಬರೆದಿದ್ದಾರೆ. 'ಸಿದ್ಧಾಂತ ಶಿಖಾಮಣಿ', 'ಶ್ರೀಬಸವೇಶ್ವರ ಪುರಾಣ', 'ಶ್ರೀ ಕಾರಣಿಕ ಕುಮಾರ ಶಿವಯೋಗಿ', 'ಶ್ರೀ ಸಿದ್ಧಲಿಂಗ ವಿಜಯ ಪುರಾಣ' ಇವು ಅವರ ಹಿಂದಿ ಕೃತಿಗಳು. ಪುಟ್ಟರಾಜ ಗವಾಯಿಗಳು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ 'ರಾಷ್ಟ್ರಭಾಷಾ' ಪರೀಕ್ಷೆ ಪಾಸಾಗಿದ್ರು. ವ್ಯಾಕರಣದ ಬಗ್ಗೆ ಅವರಿಗೆ ಹೆಚ್ಚು ಗಮನವಿತ್ತು. 'ವ್ಯಾಕರಣ ಕಲ್ತರ ಭಾಷೆ ಸರಿಯಾಗಿ ಬರ್ತದ. ಇಂದಿನ ಹುಡುಗರಿಗೆ ವ್ಯಾಕರಣನ ಬರೂದಿಲ್ಲ' ಎಂದು ಅವರು ಹೇಳುತ್ತಿದ್ದರು. ಅವರು ಹಿಂದಿ ಕಲಿತಿದ್ದು ಹಿಂದೂಸ್ತಾನಿ ಸಂಗೀತ ಸಾಧನೆಗೆ ಹೆಚ್ಚು ಅನುಕೂಲವಾಯಿತು. ಚೀಜ ರಚನೆಗೆ ಹಿಂದಿ ಭಾಷೆ ಬೇಕಾಯಿತು. ಹಿಂದಿ ಕಲಿತು ಅನೇಕ ಹೊಸ ಚೀಜ ಮಾಡಿದರು, ಹಿಂದಿಯಲ್ಲಿ ಗ್ರಂಥ ರಚನೆ ಮಾಡಿದರು. ಭಾರತದ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ ಅವರನ್ನು ಕಾಣಲಿಕ್ಕೆ ಹೋದಾಗ, ಹಿಂದಿಯಲ್ಲಿ ಬರೆದ 'ಬಸವೇಶ್ವರ ಪುರಾಣ'ವನ್ನು ಅವರಿಗೆ ಕೊಟ್ಟರು. ರಾಷ್ಟ್ರಪತಿಗಳು ಪುರಾಣವನ್ನು ನೋಡಿ ಸಂತೋಷಪಟ್ಟು ಅವರಿಗೆ ಪ್ರಶಸ್ತಿ ಕೊಟ್ಟು ಗೌರವಿಸಿದರು. ರಾಷ್ಟ್ರಪತಿಗಳನ್ನು ಭೆಟ್ಟಿಯಾಗಲು ಪುಟ್ಟರಾಜರು ದೆಹಲಿಯ ರಾಷ್ಟ್ರಪತಿ ಭವನಕ್ಕೆ ಹೋಗುವಾಗ ಅವರ ಜೊತೆಗೆ ಕರ್ನಾಟಕದ ಶ್ರೀ ಅಗಡಿ ಸಂಗಣ್ಣನವರನ್ನು ಒಳಗೊಂಡ ಹಲವಾರು ಲೋಕಸಭಾ ಸದಸ್ಯರ ಒಂದು ತಂಡವೇ ಇದ್ದದ್ದು, ರಾಷ್ಟ್ರಪತಿಯವರು ಬಸವ ಪುರಾಣವನ್ನು ತಲೆಯ ಮೇಲೆ ಇಟ್ಟುಕೊಂಡು ಪುಟ್ಟರಾಜರನ್ನ ಪ್ರಶಂಸಿಸಿದ್ದು ಅಪೂರ್ವ ಸಂಗತಿಯಾಗಿದೆ. ಆ ಸನ್ನಿವೇಶದ ಚಿತ್ರಣವನ್ನು ಅವರ ಬಾಯಿಂದಲೇ ನಾನು ಆಕಾಶವಾಣಿ ಸಂದರ್ಶನದಲ್ಲಿ ಕೇಳಿದ್ದೇನೆ.

ಇಂಥ ಅನೇಕ ಸ್ಮರಣೀಯ ಘಟನೆಗಳು ಪುಟ್ಟರಾಜರ ಬದುಕಿನಲ್ಲಿ ಆಗಿಹೋಗಿವೆ. ಪಂಚಾಕ್ಷರಿ ಗವಾಯಿಗಳ ಗುರುಗಳಾಗಿದ್ದ ಕಂಚಗಲ್ಲು ಬಿದರಿ ಹಿರೇಮಠದ ಪಟ್ಟಾಧ್ಯಕ್ಷರಾದ ಶ್ರೀ ಪ್ರಭುಕುಮಾರಸ್ವಾಮಿಗಳಿಂದ ಪುಟ್ಟರಾಜರಿಗೆ ಇಷ್ಟಲಿಂಗದೀಕ್ಷೆ ಆದ ದಿನ ಅವರು ಮಂತ್ರೋಪದೇಶ ಮಾಡುವುದರೊಡನೆ "ಕುರುಡನೆಂದು ಕೀಳರಿಮೆ ಹೊಂದಬೇಡ. ಧೈರ್ಯದಿಂದ ಸಾಧನೆ ಮಾಡು" ಎಂದು ಹರಸಿದ್ದು ಮುಂದೆ ಅದೇ ಬಾಲಕ ಅದ್ಭುತವಾಗಿ ಸಾಧನೆ ಮಾಡಿದ್ದು ಸ್ಮರಣೀಯ ಘಟನೆ ಆಗಿತ್ತು. ಗುರುಗಳಿಂದ ಮದುವೆಯ ಪ್ರಸ್ತಾಪ ಬಂದಾಗ ಅದನ್ನು ಖಡಾಖಂಡಿತವಾಗಿ ಅಲ್ಲಗಳೆದು ಆಜನ್ಮ ಬ್ರಹ್ಮಚಾರಿಯಾಗುವ ನಿರ್ಧಾರ ಕೈಕೊಂಡಿದ್ದು, ಧಾರವಾಡ ಮುರುಘಾಮಠದಲ್ಲಿ ಮೊದಲನೇ ತುಲಾಭಾರ, ನಂತರ ದಾವಣಗೆರೆಯಲ್ಲಿ ೧೫೦ ತುಲಾಭಾರಗಳು, ಆಮೇಲೆ ಒಂದೇ ಸವನೆ ತುಲಾಭಾರಗಳಾಗಿ ಸುಮಾರು ೨೧೦೪ ಕ್ಕೂ ಹೆಚ್ಚು ತುಲಾಭಾರಗಳು ನಡೆದದ್ದು ಅಚ್ಚರಿ ಮತ್ತು ಸ್ಮರಣೀಯ ಸಂಗತಿಯಾಗಿದೆ. ಇವು ಒಂದೊಂದೂ ವಿಶ್ವ ದಾಖಲೆಗಳೇ ಸರಿ. 'ಸಂಚಾರಿ ಸಂಗೀತ ಪಾಠಶಾಲೆ' ಎಂಬ ಒಂದು ಅಪೂರ್ವ ಪರಿಕಲ್ಪನೆಯನ್ನು ಜಾರಿಗೊಳಿಸಿದ್ದು ಇವರ ಅತ್ಯಂತ ನವೀನ ಸ್ಮರಣೀಯ ಕಾರ್ಯ. ನೂರಾರು ಅಂಧ ಮಕ್ಕಳ ಭವಿಷ್ಯ ರೂಪಿಸುವ ಶಾಲೆಗಾಗಿ ಸಾಲ ಮಾಡಿ ಸಾಲ ತೀರಿಸಲು ನಾಟಕ ಕಂಪನಿ ಸ್ಥಾಪಿಸಿ, ಅದರಲ್ಲೂ ಆರ್ಥಿಕ ಹಿಂಜರಿತ ಅನುಭವಿಸಿ ಭಿಕ್ಷಾಟನೆಯೆ ಜಂಗಮರ ಕಾರ್ಯವೆಂದು ಪುಣ್ಯಾಶ್ರಮದ ಅಂಧ ಮಕ್ಕಳಿಗಾಗಿ ಸರಕಾರದಿಂದ ಸಹಾಯ ಪಡೆಯದೆ ಭಿಕ್ಷಾಟನೆಯಿಂದ ಆಶ್ರಮವನ್ನು ನಡೆಸಿದ್ದು ಸಣ್ಣ ಸಾಧನೆಯಲ್ಲ. ಹಿಂದೂಸ್ತಾನಿ ಸಂಗೀತದಲ್ಲಿ ಪಂಚಾಕ್ಷರಿ ಸ್ವರಲಿಪಿ ಪದ್ಧತಿ ಎಂಬ ಹೊಸ ಸ್ವರಪದ್ಧತಿಯನ್ನು, ಹೊಸ ಹೊಸ ಚೀಜಗಳನ್ನು ಶೋಧಿಸಿದರು. ಸ್ತ್ರೀಪಾತ್ರಧಾರಿಗಳನ್ನು ಪುರುಷಪಾತ್ರಧಾರಿಗಳು ಮತ್ತು ಕಂಪನಿ ಮಾಲಕರು ದುರುಪಯೋಗ ಪಡಿಸಿಕೊಳ್ಳುತ್ತಿದ್ದುದರಿಂದ ನಾಟಕ ಕಂಪನಿಯ ನೈತಿಕ ಶುದ್ಧತೆಯನ್ನು ಕಾಪಾಡಿಕೊಂಡು ಬರುವುದು ಕಷ್ಟ ಎಂಬುದನ್ನು ಅರಿತ ಪುಟ್ಟರಾಜರು ಪುರುಷರನ್ನೇ ಸ್ತ್ರೀ ಪಾತ್ರಗಳಿಗೆ ಬಳಸಿಕೊಂಡು ಬಂದದ್ದು ಕಂಪನಿಗಳ ಪರಿಶುದ್ಧತೆಯನ್ನು ಕಾಪಾಡಲು ಅವರ ಚಿಂತನೆ ಎಂಥ ಪವಿತ್ರವಾಗಿತ್ತು ಎಂಬುದು ತಿಳಿದುಬರುತ್ತದೆ. ಸಂಸ್ಕೃತ, ಹಿಂದಿ, ಕನ್ನಡ ಭಾಷೆಗಳಲ್ಲಿ ಒಟ್ಟು ೭೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಸಾಹಿತ್ಯಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ್ದೂ ಸ್ಮರಣೀಯ ಅಂಶವೇ. ಹೀಗೆ ಅವರ ಸ್ಮರಣೀಯ ಘಟನೆಗಳಿಗೆ ಲೆಕ್ಕವಿಲ್ಲ. ಅವರ ಬದುಕಿನ ಒಂದೊಂದು ಕ್ಷಣವೂ ಸ್ಮರಣೀಯವೇ. ಮುಕ್ಕಣ್ಣುಳ್ಳ ಶಿವ ನಮಗೆ ಕಾಣಿಸನು. ಆದರೆ ಕಣ್ಣಿಲ್ಲದ ಈ ಶಿವರೂಪಿ ಪುಟ್ಟರಾಜರು ನಮ್ಮೆದುರೇ ಅದ್ಭುತ ರೀತಿಯಲ್ಲಿ ಬದುಕಿ ಯಾರೂ ಸಾಧಿಸಲು ಅಸಾಧ್ಯವೆನಿಸಿದ ಲೋಕ ಕಲ್ಯಾಣ ಕಾರ್ಯ ಮಾಡಿದರು. ೨೦೧೦ ರ ಸಪ್ಟಂಬರ ೧೭ನೇ ತಾರೀಖನಂದು ಅವರು ಲಿಂಗೈಕ್ಯರಾದಾಗ ಸಾಗರೋಪಾದಿಯಲ್ಲಿ ಅಭಿಮಾನಿಗಳ ಪ್ರವಾಹವೇ ಗದುಗಿಗೆ ಹರಿದು ಬಂದಿತ್ತು. ಕಣ್ಣೀರು ಕೋಡಿ ಹರಿಯಿತು.

**ಥೋಟೊಂ ಮೇ ಥೋಟಾ ಹೂಂ ಕ್ಯಾ ಹೈ**
**ಆಂಖ್ ಭೀ ಮುಝೆ ನಹಿ**
**ಪುಟ್ಟರಾಜ ನಾಮ ಸಾರ್ಥಕ ಮೇರಾ**
**ಮೈ ಚಾಹತಾ ಹೂಂ ಗುರುಬಲ ಹಿ**

ಎಂದು ಗುರುಬಲವನ್ನೇ ಪಡೆದು ಸಾರ್ಥಕ ಬದುಕಿಗೆ ಮಂಗಳ ಹಾಡಿದರು. ಅವರಿಗೆ ಭಕ್ತರು ಅರ್ಪಿಸಿದ್ದ ಬಂಗಾರದ ಕಿರೀಟವೂ ಕೂಡ ಅಂದು ಕಣ್ಣೀರಿಟ್ಟಿರಬೇಕು. ಅವರ ಭೌತಿಕ ಶರೀರ ಇಲ್ಲವಾದರೂ ಅವರು ಸ್ಥಾಪಿಸಿ ಜೀವವನ್ನೇ ತೇಯ್ದು ಬಡ ಮತ್ತು ಅಂಧ ಮಕ್ಕಳ ಕಲ್ಯಾಣಕ್ಕಾಗಿ ಬೆಳೆಸಿದ ಶಾಲೆ ಕಾಲೇಜುಗಳು ಅವರ ಯಶೋಗಾಥೆಯನ್ನು ಶಾಶ್ವತವಾಗಿ ರಿಂಗಣಗೊಳಿಸುತ್ತಿವೆ.

ಅವರ ಹಾಡಿನಲ್ಲಿ, ಮಾತಿನಲ್ಲಿ, ಗ್ರಂಥಗಳಲ್ಲಿ ದಾಖಲಾದ ಅವರ ಸಂದೇಶ, ಸಂಸ್ಕೃತಿಯ ಸೌಗಂಧ ಎಲ್ಲ ಕಾಲಕ್ಕೂ ಸೂಸುತ್ತಿದೆ. ಇದುವೆ ಮನುಷ್ಯ ಬದುಕಿನ ಸಾರ್ಥಕತೆ. ಅಲ್ಲವೇ?

■■

# ಕೊಂಡುಗುಳಿ ಕೇಶಿರಾಜ ಮತ್ತು ಲಿಂಗಾಯತ ಧರ್ಮ

● ಡಾ. ಎನ್. ಜಿ. ಮಹಾದೇವಪ್ಪ

ಕಲ್ಯಾಣವನ್ನು ಆಳಿದವರಲ್ಲಿ ಆರನೆಯ ವಿಕ್ರಮಾದಿತ್ಯ ಅಥವಾ ಪೆರ್ಮಾಡಿಗೆ (೧೦೭೬–೧೧೨೬) ಕೊಂಡುಗುಳಿ ಕೇಶಿರಾಜ ಎಂಬ ಮಂತ್ರಿ, ಲಕ್ಷ್ಮೀದೇವಿ ಎಂಬ ಹೆಂಡತಿ, ತೆಲುಗು ಜೊಮ್ಮಯ್ಯ ಎಂಬ ಸೇವಕ ಇದ್ದರು. ಇದಕ್ಕೆ ಶಾಸನಗಳೂ ಹರಿಹರ ಮತ್ತು ಭೀಮಕವಿಯ ಸಾಹಿತ್ಯವೂ ಸಾಕ್ಷಿಯಾಗಿವೆ.

ಕೊಂಡುಗುಳಿ ಕೇಶಿರಾಜ ಬಸವಪೂರ್ವದವನು ಎಂಬ ನಂಬಿಕೆ ಇದೆ. ಬಸವಾದಿ ಶರಣರು ತಮ್ಮ ವಿಚಾರಗಳನ್ನು ವಚನ ರೂಪದಲ್ಲಿ ಬರೆದಿಟ್ಟರೆ, ಕೇಶಿರಾಜ ಕೆಲವು ಅಂಥಹವೆ ವಿಚಾರಗಳನ್ನು ಕಂದ ರೂಪದಲ್ಲಿ ಬರೆದಿಟ್ಟಿದ್ದಾನೆ. ಪ್ರತಿದಿನ ಎಂಟು ಪದ್ಯಗಳನ್ನು ಬರೆದು ಅವುಗಳನ್ನು ತನ್ನ ಆರಾಧ್ಯ ದೈವಕ್ಕೆ ಅರ್ಪಿಸುವುದು ಅವನ ವ್ರತವಾಗಿತ್ತು, ಎಂದು ಹರಿಹರ ತನ್ನ ಕೇಶಿರಾಜನ ರಗಳೆಯಲ್ಲಿ ತಿಳಿಸುತ್ತಾನೆ.

ಕೇಶಿರಾಜ ೧. 'ಮಂತ್ರಮಹತ್ವದ ಕಂದ', ೨. 'ಲಿಂಗಸ್ತೋತ್ರದ ಕಂದ–೧', ೩. 'ಲಿಂಗಸ್ತೋತ್ರದ ಕಂದ–೨', ೪. 'ಶೀಲಮಹತ್ವದ ಕಂದ', ೫. 'ಕೇಶಿರಾಜ ಡಣ್ಣಾಯಕರ ಕಂದ', ೬. 'ನವರತ್ನಮಾಲಾ' ಮತ್ತು ೭. 'ಅಳಲಾಷ್ಟಕ' ಎಂಬ ಕೃತಿಗಳನ್ನು ರಚಿಸಿದ್ದಾನೆ೧. ಇವುಗಳಲ್ಲಿ ಕೇಶಿರಾಜ 'ಶೀಲಮಹತ್ವದ ಕಂದ'ದ ಕಂದ ೧ ರಲ್ಲಿ 'ವೀರಶೈವ' ಪದವನ್ನೂ, ಕಂದ ೩೩ ರಲ್ಲಿ 'ಲಿಂಗಾಯತವಂತ' ಪದವನ್ನೂ ಬಳಸಿದ್ದಾನೆ. ಕಂದ ೩೯ ರಲ್ಲಿ ಅವನು ಬಳಸಿರುವ ಪದ 'ಲಿಂಗಯೇತ'ವೊ 'ಲಿಂಗಾಯತ'ವೊ ಸ್ಪಷ್ಟವಾಗಿಲ್ಲ. 'ವೀರಶೈವ', 'ಲಿಂಗಾಯತವಂತ' ಪದಗಳನ್ನೂ ಅಲ್ಲದೆ ಆತ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ 'ಕರಸ್ಥಲ', 'ಗುರುಸೇವೆ', 'ಜಂಗಮದಾಸೋಹ', 'ಪ್ರಸಾದಸಿದ್ಧಿ', 'ಕಾಯಕನಿಷ್ಠೆ' ಮುಂತಾದ ಪದಗಳನ್ನೂ ಬಳಸಿದ್ದಾನೆ. ಈ ಆಧಾರಗಳ ಮೇಲೆ ಕೆಲವು ವಿದ್ವಾಂಸರು ೧. ಬಸವಪೂರ್ವದಲ್ಲಿಯೇ ಲಿಂಗಾಯತಧರ್ಮ ಇತ್ತು ಮತ್ತು ೨. ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ ಅಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಅವರ ಈ ತೀರ್ಮಾನ ವಿಶ್ವಾಸಾರ್ಹವೆ ಎಂಬುದು ಈ ಲೇಖನದ ಪ್ರಶ್ನೆ.

'ಶೀಲಮಹತ್ವದ ಕಂದ'ದಲ್ಲಿ ಬಸವಣ್ಣ ಮತ್ತು ಅವರ ಸಮಕಾಲೀನ ವಚನಕಾರರು ಬಳಸಿದ ಕೆಲವು ಪದಗಳು ಸಿಕ್ಕುತ್ತವೆ ಎಂಬುದು ನಿರ್ವಿವಾದ. ಅವುಗಳಲ್ಲಿ ಮುಖ್ಯವಾದುವೆಂದರೆ: ಭಕ್ತಿಗಳು ಆರು ವಿಧ (ಅವುಗಳ ಹೆಸರು ಹೇಳಿಲ್ಲ) (ಕಂದ ೭); ಮಹೇಶನಾದವನು ಪರಧನ, ಪರವಧು, ಪರದೈವಗಳನ್ನು ತೊರೆಯಬೇಕು (ಕಂ.೩, ೧೯); ಗುರು ಅಥವಾ ಜಂಗಮ ಭೂರುದ್ರ (ಕಂ. ೯); ಲಿಂಗಪ್ರಸಾದವಲ್ಲದ ಆಹಾರ ಕಿಲ್ಬಿಷ (ಕಂ. ೧೩); ಭವಿಪಾಕ ನೈವೇದ್ಯ ನರಕಕ್ಕೆ ದಾರಿ (ಕಂ. ೧೪); ಗಂಡ–ಹೆಂಡತಿಗೆ ಸಮಶೀಲ ಇರಬೇಕು (ಕಂ. ೨೩); ಸೂತಕಗಳನ್ನು ಪಾಲಿಸಬಾರದು (ಕಂ.೨೪, ೪೮); ಗರ್ಭಕ್ಕೆ ಲಿಂಗಧಾರಣೆ ಮಾಡಬೇಕು (ಕಂ.೨೭); ಪಾದೋದದಕವನ್ನು ಲಿಂಗಮಜ್ಜನಕ್ಕೆ ಬಳಸಬೇಕು (ಕಂ. ೨೮); ಗುರುಲಿಂಗಜಂಗಮ ಹರನೆಂದು ತಿಳಿಯಬೇಕು (ಕಂ.೪೪); ವಾರ, ತಿಥಿ, ಶಕುನ ನೋಡಬಾರದು (ಕಂ.೫೬); ಶಿವಪಥಕ್ಕೆ ಸಲ್ಲದ ಶಿವರಾತ್ರಿ, ಸಂಕ್ರಾಂತಿ, ಉಪವಾಸ ಮಾಡಬಾರದು (ಕಂ.೫೮); ತೀರ್ಥಯಾತ್ರೆ ಮಾಡಬಾರದು; ಕಾಮಿಸಿದುದು ಕಾಯುಭೋಗ, ಕಾಮಿಸದುದು ಲಿಂಗಭೋಗ (ಕಂ.೫೨); ಇತ್ಯಾದಿ.

ಇವೆಲ್ಲವನ್ನೂ ನೋಡಿದರೆ ಮೇಲ್ನೋಟಕ್ಕೇ ವೀರಶೈವ ಧರ್ಮ ಬಸವಪೂರ್ವದಲ್ಲೇ ಇತ್ತು, ಅದು ಬಸವಾದಿ ಶರಣರಿಂದ ಸ್ಥಾಪಿತವಾದುದೆಂದು ನಂಬಲಾಗಿರುವ ಲಿಂಗಾಯತಧರ್ಮಕ್ಕಿಂತ ಭಿನ್ನವಲ್ಲ ಎಂಬಂತೆ ಕಾಣುತ್ತದೆ.

ಆದರೆ ಡಾ. ಬಿ. ವಿ. ಮಲ್ಲಾಪೂರ ಇಡೀ 'ಶೀಲಮಹತ್ವದ ಕಂದ'ವೇ ಪ್ರಕ್ಷಿಪ್ತ ಎನ್ನುತ್ತಾರೆ. ಅವರು ಕೊಡುವ ಕಾರಣಗಳು ಮೂರು: ೧. ತಾಳೆಗರಿ ಪ್ರತಿಯ 'ಶೀಲಮಹತ್ವದ ಕಂದ'ದ ಆದಿಯಲ್ಲಿ "ಶ್ರೀ ಗುರು ಬಸವಲಿಂಗಾಯನಮಃ" ಎಂದಿದೆ. ಲಿಂಗಾಯತ ಲೇಖಕರು ತಮ್ಮ ಕೃತಿಯನ್ನು 'ಶ್ರೀಗುರು ಬಸವಲಿಂಗಾಯನಮಃ' ಎಂದು ಪ್ರಾರಂಭಿಸುವುದು ಬಸವೋತ್ತರ ಪದ್ಧತಿಯಾದುದರಿಂದ, ಬಸವೋತ್ತರ ಕವಿಯೊಬ್ಬ 'ಶೀಲಮಹತ್ವದ ಕಂದ'ವನ್ನು ಬರೆದು

'ಚೈತನ್ಯ' ಐದನೆಯ ಅಡ್ಡರಸ್ತೆ, ಕಲ್ಯಾಣನಗರ ಧಾರವಾಡ–೫೮೦೦೦೭

ಅದನ್ನು ಕೊಂಡುಗುಳಿಕೇಶಿರಾಜನ ತಲೆಗೆ ಕಟ್ಟಿರಬೇಕು. ೨. 'ಮಂತ್ರಮಹತ್ವದ ಕಂದ', 'ಲಿಂಗಸ್ತೋತ್ರದ ಕಂದ'ಗಳ ಅಂತ್ಯದಲ್ಲಿ ಆಯಾ ಕಂದಗಳ ಸಮಾಪ್ತಿ ಎಂದಿದೆ. ಆದರೆ 'ಶೀಲಮಹತ್ವದ ಕಂದ'ದ ಕೊನೆಯಲ್ಲಿ 'ಕೇಶಿರಾಜ ಡಣಾಯಕರು ನಿರೂಪಿಸಿದ ಕಂದ ಸಮಾಪ್ತಿ' ಎಂದಿದೆ. ಯಾವ ಕಂದ ಎಂಬುದನ್ನು ತಿಳಿಸಿಲ್ಲ. ೩. ಒಂದು ವೇಳೆ ಕೇಶಿರಾಜ ಬಸವ ಪೂರ್ವದವನಾಗಿದ್ದರೆ, ಅವನ ಹೆಸರು ಬಸವಣ್ಣನವರ ಯಾವ ವಚನದಲ್ಲಿಯೂ ಕಂಡು ಬರುವುದಿಲ್ಲ ೨. ತಮಗಿಂತ ಕೆಳಸ್ತರದ ಜಾತಿಯವರಾದ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ ಮುಂತಾದವರನ್ನೂ ಸಿಂಧು ಬಲ್ಲಾಳ, ಸಿರಿಯಾಳ–ಚೆಂಗಳೆಯರನ್ನೂ ಮನಸಾರೆ ಹೊಗಳುವ ಬಸವಣ್ಣ ನವರು ತಮ್ಮ ವಚನಗಳಲ್ಲಿ ಕೇಶಿರಾಜನನ್ನೇಕೆ ಒಮ್ಮೆಯೂ ನೆನೆಯುವುದಿಲ್ಲ? ಲಿಂಗಾಯತ ಧರ್ಮ ಬಸವಪೂರ್ವದಲ್ಲೇ ಇತ್ತು ಎಂಬ ದುರುದ್ದೇಶದಿಂದ ಇದ್ದ ವಚನಗಳನ್ನು ತಿದ್ದುವುದು, ಚೆನ್ನಬಸವಣ್ಣ, ಅಲ್ಲಮ ಪ್ರಭು, ಮುಂತಾದವರ ಹೆಸರಿನಲ್ಲಿ ಬಸವಣ್ಣನವರ ಸಿದ್ಧಾಂತಗಳಿಗೆ ವಿರುದ್ಧವಾದ ವಚನಗಳನ್ನು ಬರೆಯುವುದು, 'ಲಿಂಗಧಾರಣ ಚಂದ್ರಿಕಾ', 'ಶ್ರೀಕರಭಾಷ್ಯ' ಮುಂತಾದ ಗ್ರಂಥಗಳನ್ನು ರಚಿಸಿರುವುದು ಬಲ್ಲವರಿಗೆ ಹೊಸ ಸುದ್ದಿಯೇನಲ್ಲ. ಆದುದರಿಂದ ಡಾ. ಮಲ್ಲಾಪೂರ ಅವರ ಆಕ್ಷೇಪಣೆಯಲ್ಲಿ ಹುರುಳಿದೆ.

ಮೇಲಿನ ಆಕ್ಷೇಪಣೆಗಳ ಜೊತೆಗೆ ಪ್ರೊ. ವಿ.ವಿ.ಸಂಗಮದ ಅವರು ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಎರಡು: ಕ್ರಿ.ಶ. ೧೧೩೨ರ ಶಾಸನದಲ್ಲಿ ಕೊಂಡಗುಳಿ ಕೇಶಿರಾಜ ೧. ಸೂತ್ರ ಸಂಹಿತೆ, ಯಾಜ್ಞವಲ್ಕ್ಯಸಂಹಿತೆ ಮುಂತಾದುವುಗಳನ್ನು ಬೋಧಿಸುವ ಉಪಾಧ್ಯಾಯರಿಗೆ ಮಾಸಾಶನ ನೀಡುವ ಮತ್ತು ೨. ತನ್ನ ಆರಾಧ್ಯ ದೈವ ಸೋಮೇಶ್ವರನ ದೇವಾಲಯವನ್ನು ನಿರ್ಮಿಸಿ, ಅದಕ್ಕೆ ದತ್ತಿ ನೀಡುವ ಪ್ರಸ್ತಾಪವಿದೆ೨. ಮೊದಲನೆಯದು ಅವೈದಿಕ ಎನಿಸುವ ಲಿಂಗಾಯತಕ್ಕೆ ವಿರುದ್ಧವಾದುದು. ಎರಡನೆಯದನ್ನು ಬಸವಣ್ಣನವರು ಖಂಡಿಸುತ್ತಾರೆ. ಕೇಶಿರಾಜನ ದತ್ತಿಪದ್ಧತಿ ವೈದಿಕ–ಆಗಮಿಕ ಪದ್ಧತಿಗೆ ಪೂರಕವಾದುದು. ಆದುದರಿಂದ ಕೇಶಿರಾಜ ಶೈವನಿರಬಹುದೇ ಹೊರತು ಲಿಂಗಾಯತನಲ್ಲ. ಪ್ರಾಯಶಃ ೧೧೩೨ ರನಂತರ ಅವನು ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಲಿಂಗಾಯತನಾಗಿರಬೇಕು.

ಮೇಲಿನ ಆಕ್ಷೇಪಣೆಗಳ ಜೊತೆಗೆ ಈ ಲೇಖಕನೂ ಕೆಲವು ಆಕ್ಷೇಪಣೆಗಳನ್ನು ಮಾಡುತ್ತಾನೆ. ೧. 'ಮಂತ್ರಮಹತ್ವದ ಕಂದ'ದ ೧೧೦ ಕಂದಗಳಲ್ಲಾಗಲಿ, ಅದರಲ್ಲೆ ಇರುವ ಅನುಬಂಧದ ಐದು ಕಂದಗಳಲ್ಲೇ ಆಗಲಿ 'ಲಿಂಗಾಯತ', 'ವೀರಶೈವ' ಪದಗಳೂ ಬಳಕೆಯಾಗಿಲ್ಲ, ಆ ಧರ್ಮದ ಗುರುಲಿಂಗಜಂಗಮಪ್ರಸಾದಕ್ಕೆ ಸಂಬಂಧಿಸಿದ ಪ್ರಸ್ತಾಪವಾಗಲಿ ಇಲ್ಲ. ಲಿಂಗಾಯತ ವಿಭೂತಿಧಾರಣೆ ಮಾಡಬೇಕು; ಆದರೆ ವಿಭೂತಿಧಾರಣೆ ಮಾಡಿದವರೆಲ್ಲ ಲಿಂಗಾಯತರೆನಿಸಿಕೊಳ್ಳುವುದಿಲ್ಲ; ಹಾಗೆಯೇ ಲಿಂಗಾಯತರು ಓಂ ನಮಃ ಶಿವಾಯ ಎಂಬ ಮಂತ್ರವನ್ನು ಪಠಿಸಬೇಕು; ಆದರೆ ಓಂ ನಮಃಶಿವಾಯ ಎನ್ನುವವರೆಲ್ಲಾ ಲಿಂಗಾಯತೆನಿಸಿಕೊಳ್ಳುವುದಿಲ್ಲ. ಏಕೆಂದರೆ ಇದೇ ಮಂತ್ರದ ಮಹಿಮೆಯನ್ನು ಇತರ ಶೈವರೂ ಸ್ತುತಿಸಬಹುದು. ಆದುದರಿಂದ ಇದು ಹೇಗೆ ಲಿಂಗಾಯತ/ವೀರಶೈವ ಕೃತಿಯಾಗುತ್ತದೆ? ೨. ಶರಣನಿಗೆ ಶರಣಸಂಗ, ಕರಸ್ಥಲದ ಪೂಜೆಗಳ ಅಗತ್ಯವಿದೆ ಎನ್ನುವುದೇನೋ ಸರಿ. ಶರಣಸಂಗ, ಕರಸ್ಥಲದ ಪೂಜೆ ಎಲ್ಲ ಸಾಧಕರಿಗೂ ಅಗತ್ಯವಾದರೂ ಅವು ಲಿಂಗಾಯತ ಧರ್ಮದ ಮುಖ್ಯ, ಅನಿವಾರ್ಯ ಲಕ್ಷಣಗಳೇನಲ್ಲ. ಸಾಧಕನು ಇತರ ಸಾಧಕರೊಡನೆ ಅಥವಾ ಗುರು ಮಾಡುವ ಪ್ರವಚನಗಳಲ್ಲಿ ಭಾಗಿಯಾಗಿರಬೇಕು ಎಂಬ ನಿಯಮ ಇತರ ಧರ್ಮಗಳಲ್ಲಿಯೂ ಉದಾಹರಣೆಗೆ, ಇತರ ಶೈವ ಪ್ರಭೇದಗಳಲ್ಲಿಯೂ, ಜೈನ ಬೌದ್ಧರಲ್ಲಿಯೂ ಇದೆ. ಆದುದರಿಂದ ಇದನ್ನು ವಿಧಿಸುವ ಕೇಶಿರಾಜ ಲಿಂಗಾಯತನೇ ಆಗಿರಬೇಕು ಎನ್ನುವುದು ತಪ್ಪು. ಅದೇ ರೀತಿ, ಕರಸ್ಥಲದ ಪೂಜೆ ಲಿಂಗಾಯತರಿಗೆ ವಿಶಿಷ್ಟವಾದುದೇನಲ್ಲ. ಕೇಶಿರಾಜನಿಗೂ ಪೂರ್ವದಲ್ಲಿ ಚಿಕ್ಕ ಚಿಕ್ಕ ಲಿಂಗಗಳನ್ನು ಇವುಗಳನ್ನು ಚಲಲಿಂಗ ಅಥವಾ ಚರಲಿಂಗ ಎಂದು ಕರೆಯಲಾಗುತ್ತಿತ್ತು – ಕೆಲವರು ಕರಸ್ಥಲದಲ್ಲಿಯೂ ಕೆಲವರು ಪೀಠದ ಮೇಲೆಯೂ ಇಟ್ಟು ಪೂಜಿಸುವ ಪದ್ಧತಿ ಇತ್ತು. ಹರಿಹರ ಕೇಶಿರಾಜನು ತನ್ನ ಲಿಂಗವನ್ನು ಪೀಠದ ಮೇಲಿಟ್ಟು ಪೂಜಿಸುವುದನ್ನು ಪ್ರಸ್ತಾಪಿಸುತ್ತಾನೆ. ಅಂದರೆ, ಹರಿಹರನಿಗೆ ತನ್ನ ಪೂರ್ವದ ಕೇಶಿರಾಜನ ಕರಸ್ಥಲದ ಪೂಜಾವಿಧಾನ ಗೊತ್ತಿರಲಿಲ್ಲ ಎನ್ನಬೇಕೋ ಅಥವಾ (ಡಾ. ಮಲ್ಲಾಪೂರರು ಹೇಳುವಂತೆ) 'ಮಂತ್ರಮಹತ್ವದ ಕಂದ'ದ ಈ ಭಾಗವನ್ನು ಯಾರೋ ರಚಿಸಿ ಕೇಶಿರಾಜನ ತಲೆಗೆ ಕಟ್ಟಿದರು ಎನ್ನಬೇಕೊ? ಅಂತೂ, ಪೂಜೆಗೂ ಮೊದಲು ಮತ್ತು ಪೂಜೆಯ ನಂತರ ಪೂಜ್ಯ ಲಿಂಗವನ್ನು ಒಂದು ಪೆಟ್ಟಿಗೆಯಲ್ಲಿಡಲಾಗುತ್ತಿತ್ತು. ಈ ಪದ್ಧತಿಯನ್ನು ಅನುಸರಿಸುವ ಶೈವರನ್ನು ಮಾರ್ಗಶೈವರೆಂದು ಕರೆಯಲಾಗುತ್ತಿತ್ತು. ಆದರೆ ಕೇಶಿರಾಜನ ಕೃತಿಗಳಲ್ಲಾಗಲಿ, ಹರಿಹರನ ರಗಳೆಯಲ್ಲಾಗಲಿ ಲಿಂಗವನ್ನು ಸದಾ ಮೈ ಮೇಲೆ ಧರಿಸಬೇಕು ಎಂದು ಹೇಳಿಲ್ಲ.

೩. ಡಾ. ಪಿ. ಬಿ. ದೇಸಾಯಿಯವರು ತಮ್ಮ 'ಬಸವೇಶ್ವರ ಮತ್ತು ಅವನ ಕಾಲ' ಎಂಬ ಗ್ರಂಥದಲ್ಲಿ ಬಸವಣ್ಣ ಅನೇಕರು

ಈಗ ನಂಬಿರುವಂತೆ ೧೧೩೧ರಲ್ಲಿ ಹುಟ್ಟಿರದೆ ಸು. ೧೧೦೪/೫ ರಲ್ಲಿ ಹುಟ್ಟಿರುವ ಸಾಧ್ಯತೆ ಇದೆ ಎನ್ನುತ್ತಾರೆ. ಬಸವಣ್ಣನವರು ಕೇವಲ ಕೆಲವೇ ವರ್ಷಗಳ ಅವಧಿಯಲ್ಲಿ, ಅಂದರೆ, ಬಿಜ್ಜಳ ಕಲ್ಯಾಣಕ್ಕೆ ಬಂದಂದಿನಿಂದ ತಮ್ಮ ಮರಣದವರೆಗೆ (೧೧೬೮, ೧೧೬೭), ಲಿಂಗಾಯತ ಧರ್ಮವನ್ನು ಸ್ಥಾಪಿಸಿ, ಅದನ್ನು ಪ್ರಚುರಪಡಿಸಿ, ಮಹಾಮನೆ ಮತ್ತು ಅನುಭವಮಂಟಪವನ್ನು ಸ್ಥಾಪಿಸಿದರು ಎಂದು ನಂಬುವುದು ಕಷ್ಟವಾಗುತ್ತದೆ. ಅವರೆ ಚಿಕ್ಕವರಾಗಿದ್ದರು ಎಂದರೆ ಮಹಾಜ್ಞಾನಿ ಎಂಬ ಹೆಸರು ಪಡೆದಿದ್ದ ಚೆನ್ನಬಸವಣ್ಣ ಇನ್ನೂ ಚಿಕ್ಕವನಾಗಿದ್ದ ಎಂದೂ ನಂಬಬೇಕಾಗುತ್ತದೆ. ಪ್ರಾಯಶಃ ಬಸವಣ್ಣನವರು ಕಲ್ಯಾಣಕ್ಕೆ ಬರುವ ಮೊದಲು ಕನಿಷ್ಠ ೫೫ ವರ್ಷದವರಾಗಿರಬೇಕು. ಇದು ಸಾಧ್ಯವಾದರೆ, ಕೇಶಿರಾಜ ಮತ್ತು ಬಸವಣ್ಣ ಹೆಚ್ಚೂಕಡಿಮೆ ಸಮವಯಸ್ಕರಾಗಿದ್ದರು. ಆಗ ಕೇಶಿರಾಜನೇ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿದ್ದ ಎಂದೇಕೆ ಹೇಳಬಾರದು?

೪. 'ಮಂತ್ರಮಹತ್ವದ ಕಂದ'ದಲ್ಲಿ (ಕಂದ ೯೬) ಕೇಶಿರಾಜ ತನ್ನ ಧರ್ಮವನ್ನು ಶೈವವ್ರತ ಎಂದೇ ಕರೆದಿದ್ದಾನೆ. ಒಂದು ವೇಳೆ ಅವನ ಕಾಲದಲ್ಲಿ ಲಿಂಗಾಯತ/ವೀರಶೈವ ಎಂಬ ಹೆಸರಿನ ಒಂದು ಧರ್ಮವಿದ್ದಿದ್ದರೆ ಅದನ್ನು ಆ ಹೆಸರಿನಲ್ಲಿ ಕರೆಯದೆ ಶೈವವ್ರತ ಎಂದೇಕೆ ಕರೆದ?

೫. ಬಸವಣ್ಣ, ಚೆನ್ನಬಸವಣ್ಣ ಮುಂತಾದವರು ತಮ್ಮ ವಚನಗಳಲ್ಲಿ ವೇದವಿರೋಧ, ಆಗಮವಿರೋಧವನ್ನು ಸ್ಪಷ್ಟವಾಗಿ, ನಿರ್ದಾಕ್ಷಿಣ್ಯವಾಗಿ ವ್ಯಕ್ತಪಡಿಸಿದ್ದಾರೆ. ಆದರೆ ಕೇಶಿರಾಜನ ಯಾವ ಕೃತಿಯೂ ಈ ವಿರೋಧದ್ವಯವನ್ನು ವ್ಯಕ್ತಪಡಿಸುವುದಿಲ್ಲ. ಅಷ್ಟೇ ಅಲ್ಲ, ದೇವಸ್ಥಾನವನ್ನು ನಿರ್ಮಿಸಿದುದು, ಅದಕ್ಕೆ ದತ್ತಿ ಬಿಟ್ಟಿದುದು, ಯಜ್ಞಯಾಗಾದಿಗಳನ್ನು ಬೋಧಿಸುವವರಿಗೆ ಮಾಸಾಶನ ನೀಡುತ್ತಿದ್ದುದು ವೇದಾಗಮ ಪದ್ಧತಿಯನ್ನು ಪೋಷಿಸುವ ಅವನ ಪ್ರವೃತ್ತಿಯನ್ನು ತೋರಿಸುತ್ತದೆ.

ಒಂದು ವೇಳೆ ಕೇಶಿರಾಜನ ಎಲ್ಲ ಕೃತಿಗಳೂ ಅಪ್ಪಟವಾದುವು, ಅವನು ಬಸವಪೂರ್ವದವನು ಎಂಬುದನ್ನು ಊಹಿಸಿಕೊಂಡರೂ ಸಹ, ಅವನು ಕೆಲವು ಲಿಂಗಾಯತ ಪದಗಳನ್ನು ಬಳಸಿದ್ದಾನೆ ಎಂಬ ಮಾತ್ರಕ್ಕೆ ಅವನ ಕಾಲದಲ್ಲಿ ಲಿಂಗಾಯತ ಧರ್ಮ ಇತ್ತು ಎಂಬುದು ಖಚಿತವಾಗುವುದಿಲ್ಲ. ಇದಕ್ಕೆ ಸಮಾನವಾದ ಇನ್ನೊಂದು ಉದಾಹರಣೆಯನ್ನು ಪರಿಶೀಲಿಸಬಹುದು. ಕ್ರೈಸ್ತಧರ್ಮ ಹುಟ್ಟಿದ್ದು ಯೆಹೂದೀ ಧರ್ಮದ ಬೇರಿನಿಂದ. ಅದರ ಅನೇಕ ಸಿದ್ಧಾಂತಗಳು ಯೆಹೂದೀ ಧರ್ಮದಿಂದ ತೆಗೆದುಕೊಂಡ ಎರವಲು. ಪರಮಾತ್ಮ (ಯಾಹ್ವೆ ಅಥವಾ ಯೆಹೋವಾ) ವಿಶ್ವವನ್ನು ಆರು ದಿನಗಳಲ್ಲಿ ಸೃಷ್ಟಿ ಮಾಡಿ ಏಳನೆಯ ದಿನ ವಿಶ್ರಾಂತಿ ತೆಗೆದುಕೊಂಡ, ಭೂಮಿಯ ಸುತ್ತಲೂ ಸೂರ್ಯ, ಚಂದ್ರ, ನಕ್ಷತ್ರಗಳು ತಿರುಗುತ್ತವೆ, ಮೊದಲು ಮನುಷ್ಯ ಅನಂತರ ಇತರ ಪ್ರಾಣಿಗಳ ಸೃಷ್ಟಿಯಾಯಿತು, ಮುಂತಾದ ಸಿದ್ಧಾಂತಗಳನ್ನು ಕ್ರೈಸ್ತರು ಯೆಹೂದಿಗಳಿಂದ ಎರವಲು ಪಡೆದಿದ್ದಾರೆ. ಅಥವಾ ಇದನ್ನೆ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ: ಇವುಗಳನ್ನು ಬೋಧಿಸುವ ಹಳೆ ಒಡಂಬಡಿಕೆ ಕ್ರೈಸ್ತ ಮತ್ತು ಯೆಹೂದೀ ಧರ್ಮಗಳೆರಡಕ್ಕೂ ಮಾನ್ಯ (ಹೊಸ ಒಡಂಬಡಿಕೆ ಕ್ರೈಸ್ತರಿಗೆ ಮಾತ್ರ ಮಾನ್ಯ; ಯೇಸು ದೇವರ ಮಗ ಎಂಬ ಮಾತನ್ನು ಯೆಹೂದಿಗಳು ಒಪ್ಪುವುದಿಲ್ಲ). ಯೆಹೂದಿಗಳಲ್ಲಿ ಸಾಡುಸಿ, ಫಾರಿಸಿ, ಎಸ್ಸೆನೀಸ್ ಮುಂತಾದ ನಾಲ್ಕು ಪಂಗಡಗಳಿದ್ದುವು. ಇವುಗಳಿಗಿಂತ ಸ್ವಲ್ಪ ಭಿನ್ನವಾದ ಯೇಸುವಿನ ಅನುಯಾಯಿಗಳನ್ನು ಜನರು ಹೊಸ ಹೆಸರಿನಿಂದ ಕರೆಯದೆ, ಯೇಸು ದೈವಗತವಾಗಿ ಎಪ್ಪತ್ತು ವರ್ಷಗಳಾದರೂ ಕ್ರಿಶ್ಚಿಯನ್ ಯೆಹೂದೀ ಎಂದೇ ಕರೆಯುತ್ತಿದ್ದರು. ಅದೇ ರೀತಿ, ಬಸವಪೂರ್ವ ಶೈವಧರ್ಮದಲ್ಲಿ ಅನೇಕ ಲಿಂಗಾಯತ ಸಿದ್ಧಾಂತಗಳು ಇದ್ದಿರಬಹುದು. ಅವುಗಳಿಗೆ ಒಂದು ಸ್ಪಷ್ಟ ರೂಪ, ದಾರ್ಶನಿಕ ನೆಲೆಗಟ್ಟು, ಸ್ವತಂತ್ರ ಅಸ್ತಿತ್ವವನ್ನು ಕೊಟ್ಟವರು ಬಸವಣ್ಣನವರು. ಯಾವತ್ತು ಶರಣರು ತಮ್ಮ ಧರ್ಮವನ್ನು ವೇದಗಳಿಂದಲೂ ಆಗಮಗಳಿಂದಲೂ ಬಿಡಿಸಿಕೊಂಡರೋ ಅಂದೇ ಅದು ಒಂದು ಸ್ವತಂತ್ರ ಧರ್ಮವಾಯಿತು. ಈ ಸ್ವಾತಂತ್ರ್ಯದ ಕಹಳೆಯ ಧ್ವನಿ ಕೇಶಿರಾಜನಲ್ಲಾಗಲಿ ಇತರರಲ್ಲಾಗಲಿ ಕೇಳಿಸುವುದಿಲ್ಲ. ಆದುದರಿಂದ, ಬಸವಪೂರ್ವದಲ್ಲಿ ಕೆಲವು ಲಿಂಗಾಯತ ಸಿದ್ಧಾಂತಗಳು ಮೊದಲೇ ಇದ್ದವು ಎಂಬ ಮಾತೇ ಬೇರೆ, ಬಸವಪೂರ್ವದಲ್ಲಿ ಲಿಂಗಾಯತ ಎಂಬ ಸ್ವತಂತ್ರ ಧರ್ಮ ಇತ್ತು ಎಂಬ ಮಾತೇ ಬೇರೆ. ಇವುಗಳಲ್ಲಿರುವ ವ್ಯತ್ಯಾಸವನ್ನು ಗುರುತಿಸದಿದ್ದರೆ, ಅವುಗಳನ್ನು ಮಾನ್ಯ ಮಾಡದಿದ್ದರೆ, ನಾವು ಅನಾವಶ್ಯಕ ಗೊಂದಲ, ವಾದವಿವಾದಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ.

■■

# ಬಸವಣ್ಣನವರ ಕುರಿತು ಫ. ಗು. ಹಳಕಟ್ಟಿಯವರ ಪ್ರಕಟಣೆಗಳು ಒಂದು ವಿವೇಚನೆ

● ಮಲ್ಲಿಕಾರ್ಜುನ ಹುಲಗಬಾಳಿ

ಡಾ. ಫ. ಗು. ಹಳಕಟ್ಟಿಯವರು (೧೮೮೦–೧೯೬೪) ಕನ್ನಡ ಸಾಹಿತ್ಯದ ದಿಗ್ಗಜರು. ಜಂಗಮಮುಖಿ ಚಿಂತನೆಯ ಅವರ ಬರಹದ ಹರವು ವಿಸ್ತೃತವಾದುದು ವೈವಿಧ್ಯಮಯವಾದದು. ಸುತ್ತಲಿನ ಬದುಕಿನ ಆ ಕಾಲದ ಸಮಸ್ತ ಸಮಸ್ಯೆಗಳು ಅವರ ಸಾಹಿತ್ಯಕ್ಕೆ ಆಹಾರ ಮತ್ತು ಆಧಾರವಾಗಿವೆ. ಕರ್ನಾಟಕ ಏಕೀಕರಣ. ಭಾಷಾಭಿವೃದ್ಧಿ, ನಾಡಿನ ಆರ್ಥಿಕಾಭಿವೃದ್ಧಿ, ಶೈಕ್ಷಣಿಕ ಪ್ರಗತಿ, ಕೃಷಿ, ಗ್ರಾಮ ಸುಧಾರಣೆ ಹೀಗೆಲ್ಲ ಒಂದು ಕಾಲಘಟ್ಟದ, ಒಂದು ಸಮಾಜದ, ಒಂದು ಪ್ರದೇಶದ, ಸಾಮಾಜಿಕ–ಸಾಂಸ್ಕೃತಿಕ ಹಾಗೂ ಸಾಹಿತ್ಯಕ ದಾಖಲೆಗಳು ಅವರ ಬರೆಹದಲ್ಲಿವೆ.

ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು, ಹೂತು ಹೋಗಿದ್ದ ಕನ್ನಡ ಸಾರಸ್ವತ ಗುಪ್ತನಿಧಿಯನ್ನು ಮತ್ತೆ ಸಮಸ್ತ ಕನ್ನಡಿಗರ ಸುಪರ್ದಿಗೆ ಕೊಟ್ಟ ಅವರು ನಿಜ ಅರ್ಥದಲ್ಲಿ ಪ್ರಾತಃಸ್ಮರಣೀಯರು. ಸ್ವಹಿತ ಕಡೆಗಣಿಸಿ, ಸಮಾಜೋದ್ಧಾರಕ್ಕಾಗಿ ಸರ್ವಸ್ವವನ್ನು ಸಮರ್ಪಿಸಿಕೊಂಡ ಸಂತರು. 'ಉಪಮಿಸಬಾರದ, ಉಪಮಾತೀತರು, ಕಾಲಕರ್ಮರಹಿತರು, ಭವವಿರಹಿತರು'. ಶರಣತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಅರಗಿಸಿಕೊಂಡ ಮಹಾಂತರು.

ಕನ್ನಡಿಗರ ಅವಜ್ಞೆಯಿಂದಾಗಿ ವಿಸ್ಮೃತಿ ಸಾಗರದಲ್ಲಿ ಮುಳುಗಿ ಹೋಗಿದ್ದ ವಚನ ಸಾಹಿತ್ಯವೂ ಸೇರಿದಂತೆ ಇನ್ನಿತರ ಪ್ರಕಾರದ ಸಾಹಿತ್ಯ ಸಂಪತ್ತನ್ನು ಉತ್ಖನನಗೊಳಿಸಿದ ಹಿರಿಮೆ ಡಾ. ಹಳಕಟ್ಟಿ ಅವರಿಗೆ ಸಲ್ಲಬೇಕು. ವಚನ, ಶಾಸನ, ರಗಳೆ, ಪದ್ಯ, ಗದ್ಯ ಮೊದಲದ ಸಾಹಿತ್ಯ ಪ್ರಕಾರದ ಪ್ರಾಚೀನ–ಅರ್ವಾಚೀನ ಗದ್ಯ–ಪದ್ಯ ಗ್ರಂಥಗಳನ್ನು ಸಂಶೋಧಿಸಿ, ಪರಿಷ್ಕರಿಸಿ ಬೆಳಕಿಗೆ ತಂದರು. ತಮ್ಮ ಶಿವಾನುಭವ ಗ್ರಂಥಮಾಲೆಯ ಮೂಲಕ ಹಲವಾರು ಕೃತಿಗಳನ್ನು ರಚಿಸಿ, ಪ್ರಕಟಿಸಿದ್ದಾರೆ. ಶರಣರ ವಚನಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದವರಲ್ಲಿ ಈ ವಚನ ಪಿತಾಮಹರು ಪ್ರಪ್ರಥಮರು. ವಚನಶಾಸ್ತ್ರದ ತಳಹದಿಯ ಮೇಲೆ ಉದಾತ್ತವಾದ ಸಮಾಜ ನಿರ್ಮಾಣವಾಗಬೇಕೆಂಬ ಸಾತ್ವಿಕ ಹಂಬಲ ಅವರದು.

ಬಸವಣ್ಣನವರ ಕುರಿತಾಗಿ ಡಾ. ಫ ಗು ಹಳಕಟ್ಟಿಯವರು ಬರೆದಿರುವ, ಸಂಪಾದಿಸಿರುವ ಕೃತಿಗಳು ಇಂತಿವೆ:

೧. ಬಸವೇಶ್ವರನ ಚರಿತ್ರೆ ('ಶಿವಾನುಭವ' ಪತ್ರಿಕೆ ಸರಣಿ ಲೇಖನಗಳು (೧೯೪೧–೧೯೪೫))

೨. ಬಸವೇಶ್ವರನ ವಚನಗಳು (೧೯೨೬)

೩. ಹೊಸ ಪದ್ಧತಿಯ ಬಸವಣ್ಣನವರ ವಚನಗಳು (೧೯೪೨)

೪. ಸಟೀಕ ಬಸವೇಶ್ವರನ ವಚನಗಳು ('ಶಿವಾನುಭವ'ದಲ್ಲಿ ಪ್ರಕಟಿತ– ೧೯೫೩)

**ಶಾಸನ ಸಂಪಾದನೆ:**

೫. ಶ್ರೀ ಬಸವಣ್ಣನವರ ಬಗ್ಗೆ ಹೊಸದಾಗಿ ಸಿಕ್ಕ ಶಿಲಾಲೇಖವು ('ಶಿವಾನುಭವ'ದಲ್ಲಿ ಪ್ರಕಟಿತ– ೧೯೩೯)

**ಗದ್ಯ ಸಂಪಾದನೆ:**

೬. ಬಸವೇಶ್ವರ ಷಟಸ್ಥಲ ವಚನದ ಕಥಾಸಾರ (೧೯೩೪)

೭. ಶ್ರೀ ಬಸವೇಶ್ವರನ ತತ್ವಗಳು (೧೯೫೦)

೮. Vacanas of Sri Basaveswara: ಬಸವೇಶ್ವರನ ೧೩೯ ವಚನಗಳ ಇಂಗ್ಲಿಷಿಗೆ ಅನುವಾದ (೧೯೧೫) ನಂತರ ಅವುಗಳನ್ನು ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟಿಸಿದ್ದು (೧೯೨೨).

\#######

೧. **'ಬಸವೇಶ್ವರ ಚರಿತ್ರೆ':** ಆ ವರೆಗೆ ಬಂದಿದ್ದ ಬಸವಣ್ಣನವರ ಕುರಿತಾದ ಲೇಖನ ಮಾಲೆಗಳನ್ನು ೧೯೪೧ರಿಂದ ೧೯೫೫ವರೆಗೆ, ಅವರು ತಮ್ಮ ಶಿವಾನುಭವ' ಪತ್ರಿಕೆಯ ಸಂಪುಟ ೧೫, ೧೬, ೧೭ ಮತ್ತು ೧೮ರ

ಬಸವ ಸಂಪದ ಬನಹಟ್ಟಿ–೫೮೭೩೦೧ ಜಿ. ಬಾಗಲಕೋಟ ಮೊ: ೯೪೫೫೧೯೫೨೮

ಸಂಚಿಕೆಗಳ ೨೬ ಕಂತುಗಳಲ್ಲಿ ಬರೆದು ಪ್ರಕಟಿಸಿದ್ದಾರೆ. ಬಸವಣ್ಣನ ಬಗ್ಗೆ ಬಂದಿದ್ದ ಪೂರ್ವದ ಗ್ರಂಥಗಳಿಗಿಂತ ಇದು ಹೆಚ್ಚು ಮೌಲಿಕವಾದುದು. ಈ ಹಿಂದಿನ ಕೃತಿಕಾರರು ಪುರಾಣಾಂತರ್ಗತ ಪವಾಡ ಕತೆಗಳಿಗೆ, ದಂತಕತೆಗಳಿಗೆ ಆದ್ಯತೆ ನೀಡಿದ್ದುಂಟು. ಅವರ ವಿಸ್ತೃತ ಅಧ್ಯಯನ, ಘನ ಪಾಂಡಿತ್ಯ ಹಾಗೂ ಪರಿಶ್ರಮಗಳ ಮಹಾಫಲದಿಂದಾಗಿ ಈ ಕೃತಿ ರೂಪಗೊಂಡಿದೆ. ಇದು ಡಾ. ಹಳಕಟ್ಟಿ ಅವರ ಆಚಾರ್ಯ ಕೃತಿ ಎಂತಲೆ ಹೇಳಬಹುದು.

'ಬಸವೇಶ್ವರನ ಚರಿತ್ರೆ' ರಚಿಸುವಲ್ಲಿ ಇರಬಹುದಾದ ಸಮಸ್ಯೆಗಳ ಬಗ್ಗೆ ಡಾ. ಹಳಕಟ್ಟಿ ಹೀಗೆ ಹೇಳುತ್ತಾರೆ: 'ಬಸವೇಶ್ವರನ ಚರಿತ್ರೆ' ಬರೆಯುವದಕೋಸ್ಕರ ಬಹುಜನರು ಅನೇಕ ಸಾರೆ ನಮಗೆ ಸೂಚಿಸುತ್ತಾ ಇದ್ದಾರೆ. ಆದರೆ ಈ ಕಾರ್ಯವು ಬಹಳ ಬಿಕ್ಕಟ್ಟಿನದೆಂದು ನಮಗೆ ತೋರಿದ್ದರಿಂದ ಈ ಸಾಹಸವನ್ನು ನಾವು ಕೈಕೊಂಡಿರುವದಿಲ್ಲ. ಯಾಕಂದರೆ ಬಸವೇಶ್ವರನ ವಿಷಯವಾಗಿ ನಂಬಲರ್ಹವಾದ ಸಂಗತಿಗಳು ಸಾಕಷ್ಟು ಪ್ರಮಾಣದಿಂದ ದೊರೆಯುವದಿಲ್ಲ. ಅವನ ಚರಿತ್ರೆಗಳುಳ್ಳ ಗ್ರಂಥಗಳು ಅನೇಕವಿರುತ್ತವೆಂಬುದು ನಿಜವು. ಆದರೆ ಅವುಗಳಲ್ಲಿ ನಿರ್ದೇಶಿಸಲ್ಪಟ್ಟ ಸಂಗತಿಗಳು ಎಷ್ಟರಮಟ್ಟಿಗೆ ನಂಬಲರ್ಹವಾದವುಗಳೆಂಬುದನ್ನು ಕಂಡುಹಿಡಿಯುವದು ಬಹಳ ದುಸ್ತರವಿರುತ್ತದೆ.....'

ಹರಿಹರನ 'ಬಸವರಾಜನ ರಗಳೆ', ತೆಲುಗು ಭಾಷೆಯಲ್ಲಿ ಪಾಲ್ಕುರಿಕೆ ಸೋಮಾರಾಧ್ಯ ರಚಿಸಿದ್ದ ಬಸವೇಶ್ವರ ಚರಿತ್ರೆಯನ್ನು ಅನುಸರಿಸಿ ಕನ್ನಡದಲ್ಲಿ ಭೀಮಕವಿ ಬರೆದ 'ಬಸವ ಪುರಾಣ' ಅದಾಗಲೆ ಬಂದಿದ್ದವು. ನಂತರ ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಹೊರಬಂದ ಲಿಂಗಾಯತ ಗ್ರಂಥಗಳಲ್ಲೂ ಬಸವೇಶ್ವರನ ಕುರಿತಾಗಿ ಹಲವಾರು ಸಂಗತಿಗಳು ಪ್ರಸ್ತಾಪಿಸಲ್ಪಟ್ಟಿದ್ದವು. ಆದರೆ ಅವೆಲ್ಲವುಗಳಲ್ಲಿ ದಂತಕತೆಗಳೆ ಹೆಚ್ಚಾಗಿ ತುಂಬಿಕೊಂಡಿರುವದನ್ನು ಡಾ. ಹಳಕಟ್ಟಿ ಗಮನಿಸುತ್ತಾರೆ. 'ಬಸವೇಶ್ವರನ ಬಗ್ಗೆ ಈ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟ ವಿಷಯಗಳಲ್ಲಿ ಏಕ ವಾಕ್ಯತೆಯು ಇರುವದಿಲ್ಲ. ಲಿಂಗಾಯತ ಗ್ರಂಥಗಳ ಪರಿಸ್ಥಿತಿಯು ಹೀಗೆ ಇರುವುದು ಕಂಡುಬರುತ್ತಿದೆ. ಇದು ನಿಜವಾಗಿಯೂ ಅತ್ಯಂತ ಶೋಚನೀಯವಾಗಿರುತ್ತದೆ... ಈ ಮಹಾಪುರುಷನ ಬಗ್ಗೆ ದ್ವೇಷಬುದ್ಧಿಯಿಂದ, ಬರೆದವುಗಳಿದ್ದದ್ದು ಅವುಗಳನ್ನು ನೋಡಿದ ಕೂಡಲೇ ಗೊತ್ತಾಗುತ್ತದೆ. ನಂಬಲರ್ಹವಾದವುಗಳಲ್ಲದ ಅನೇಕ ಸಂಗತಿಗಳು ಅವುಗಳಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ಇದಲ್ಲದೆ ಅವುಗಳನ್ನು ಬರೆದವರಾರೂ ಬಸವೇಶ್ವರನ ಸಮಕಾಲೀನರಲ್ಲ' ಎಂದು ಅವರು ವಿಷಾದಿಸುತ್ತಾರೆ.

ಬಸವಣ್ಣನನ್ನು ದೇವಸ್ವರೂಪಿಯಾಗಿಯೂ, ಪವಾಡ ಪುರುಷನನ್ನಾಗಿಯೂ ವರ್ಣಿಸಿದ ಬಸವಾಭಿಮಾನಿಗಳು ಒಂದೆಡೆಯಾದರೆ, ಕುತ್ಸಿತ ಮತ್ತು ತುಚ್ಛಭಾವದ ಜನರು ಬಸವಣ್ಣನನ್ನು ದೂಷಿಸಿದ್ದುಂಟು ದ್ವೇಷಿಸಿದ್ದೂ ಉಂಟು. 'ದೇಶದಲ್ಲಿ ಒಂದು ಮಹತ್ವದ ಕ್ರಾಂತಿಯನ್ನುಂಟು ಮಾಡಲು ಸಮರ್ಥನಾದ ಇಂಥವನ ಪೂರ್ಣ ಚರಿತ್ರೆಯು ಗೊತ್ತಾಗದೆ ಇದ್ದದ್ದು ಲಿಂಗಾಯತರಿಗಷ್ಟೇ ಅಲ್ಲ, ಕರ್ನಾಟಕಕ್ಕೂ ಹಿಂದುಸ್ತಾನಕ್ಕೂ ದುರ್ದೈವದ ಸಂಗತಿ.....'ಎಂದು ವಿಷಾದಿಸಿದ ಡಾ. ಹಳಕಟ್ಟಿಯವರು, ಬಸವಣ್ಣನ ವ್ಯಕ್ತಿತ್ವದ ನಿಜರೂಪ ಪ್ರಚುರಪಡಿಸುವ ಅಗತ್ಯ ಮನಗಾಣುತ್ತಾರೆ.

'ಬಸವಣ್ಣನ ಚಳುವಳಿಯಿಂದ ಸಮಾಜದಲ್ಲಿ ಒಂದು ಕ್ಷೋಭೆಯು ಎದ್ದಿತು. ಅವನು ಧರ್ಮಬಾಹಿರನೆಂದು ಮೊದಲು ಎಣಿಸಲ್ಪಟ್ಟನು, ಹೀಗೆ ಎಣಿಸಲ್ಪಟ್ಟವನ ಚರಿತ್ರೆಯನ್ನು ಆಗಿನವರು ಬರೆಯುವರಾರು? ಆರಂಭ ಕಾಲದಲ್ಲಿ ಬಸವೇಶ್ವರನಿಗೆ ಸಹಾಯುವಾದವರು ಪ್ರಮುಖ ಸಮಾಜದವರಲ್ಲ. ಅವನಿಗೆ ಸಹಾಯವಾದವರು ಒಬ್ಬ ಅಗಸ, ಒಬ್ಬ ಕಿನ್ನರೀ ಬಾರಿಸುವವ, ಒಬ್ಬ ಮದ್ದಲಿಗ, ಒಬ್ಬ ವಡ್ಡರ ನಾಯಕ, ಒಬ್ಬನಾಪಿತ, ಹೊಲೆಯ, ಢೋರ, ಕಟ್ಟಿಗೆ ಮಾರಿ ಉಪಜೀವಿಸುವವನೊಬ್ಬ, ದೇಶತ್ಯಾಗ ಮಾಡಿದ ಒಬ್ಬ ಸ್ತ್ರೀಯಳು ಇಂಥವರೇ ಇದ್ದಾರೆ' ಅವನ ಚರಿತ್ರೆಯು ಉಪಲಬ್ದದವಾಗದಿರುವದಕ್ಕೆ ಕೆಲವು ಕಾರಣಗಳನ್ನು ಸರಿಯಾಗಿಯೇ ಗುರುತಿಸಿದ್ದಾರೆನ್ನಬಹುದು.

ಕುತ್ಸಿತ ಮನಸ್ಸುಗಳು, ಕುಹಕ-ಕುತರ್ಕಗಳಿಂದ ಬಸವಣ್ಣನ ಬಗ್ಗೆ ಬರೆದುದರಲ್ಲಿ ಒಳ್ಳೆಯ ಅಂಶಗಳು ಇರಲು ಹೇಗೆ ಸಾಧ್ಯ? 'ಈ ಸ್ಥಿತಿಯಲ್ಲಿ ಬಸವೇಶ್ವರನ ಚರಿತ್ರೆಯನ್ನು ಯಾವುದಾದರೂ ಒಂದು ಗ್ರಂಥವನ್ನು ಅವಲಂಬಿಸಿ ಬರೆಯಲಿಕ್ಕೆ ಬರಲಾರದು. ಅವನ ಬಗ್ಗೆ ಹೇಳಿದ ಪ್ರತಿಯೊಂದು ವಿಷಯವನ್ನು ನಾವು ಶೋಧಿಸಬೇಕಾಗಿದೆ...' ಎಂದು ಅವರು ಸತ್ಯಾನ್ವೇಷಣೆಗೆ ಮುಂದಾಗುತ್ತಾರೆ.

ಬಸವೇಶ್ವರನ ಚರಿತ್ರೆಗಳಲ್ಲಿನ ಆವ ಸಂಗತಿಗಳು ನಂಬಲು ಅರ್ಹವಾದುವು ಎಂಬುದನ್ನು ಕಂಡುಹಿಡಿಯುಲಿಕ್ಕೆ ಶಿಲಾಶಾಸನಗಳು, ವಚನ ಸಾಹಿತ್ಯ, ಹರಿಹರನ ರಗಳೆಗಳು ಮತ್ತು ಸ್ಥಾನಿಕ ಐತಿಹ್ಯ ಮತ್ತು ಕುರುಹುಗಳನ್ನು ಆಧಾರವಾಗಿ ಬಳಸಿದ್ದಾರೆ. ಬಸವಣ್ಣ ಕೇವಲ ಪುರಾಣಪುರುಷನಲ್ಲ,

ಅವನೊಬ್ಬ ಐತಿಹಾಸಿಕ ವ್ಯಕ್ತಿ ಎಂಬುದನ್ನು ಡಾ. ಹಳಕಟ್ಟಿ ಸಾಧಾರವಾಗಿ ಬರೆದಿದ್ದಾರೆ. ಆತನ ಕಾಲ, ಹುಟ್ಟಿದ ಊರು, ಮನೆತನ, ತಂದೆ–ತಾಯಿಗಳು, ಆತನ ಅಕ್ಕ–ಅಣ್ಣ, ಹೆಂಡದಿರು, ಬಸವನ ಗುರು, ರೇವಣಸಿದ್ಧ, ಬಸವಣ್ಣ ಮತ್ತು ಬ್ರಾಹ್ಮಣರು, ಬಸವಣ್ಣ ಮತ್ತು ಜಂಗಮರು, ಬಸವಣ್ಣ ಮತ್ತು ಜೈನರು, ಬಸವಣ್ಣ ಮತ್ತು ಬಣಜಿಗರು, ಬಸವಣ್ಣ ಮತ್ತು ಅಸ್ಪೃಶ್ಯರು, ಬಿಜ್ಜಳ ದೊರೆ, ಪ್ರಧಾನಿಯಾಗಿ ಬಸವಣ್ಣ, ಪುರಾಣಗಳಲ್ಲಿ ಬಸವಣ್ಣ, ಮುಂತಾದವರ ಬಗೆಗೆ ಖಚಿತವಾದ ಸಂಗತಿಗಳನ್ನು ಬರೆಯುತ್ತಾರೆ. ಜತೆಗೆ ಬಸವಣ್ಣನ ಬಗೆಗಿನ ದಂತಕತೆಗಳ ಸತ್ಯಾಸತ್ಯತೆಗಳ ವಿವರಗಳು ಇಲ್ಲಿವೆ.

ಇದರ ಜತೆಗೆ ಆ ಕಾಲದ ವೈದಿಕ ಮತಗಳು, ಶೈವ ಧರ್ಮಗಳು, ಶೈವಪ್ರಭೇದಗಳು, ಕುರುಬ ಜನಾಂಗದ ಸಿದ್ಧರು, ಪುರಾತನರ ಮಾರ್ಗ, ಶಿವಶರಣರ ಮಾರ್ಗ, ಬಾಗೇವಾಡಿಯ ಸಂಗಮೇಶ್ವರ ಗುಡಿಯ ಪೂರ್ವಕಾಲದ ಸ್ಥಿತಿ, ಶಿವಾನುಭವ ಮಂಟಪ ಮತ್ತು ಅದರ ವೈಶಿಷ್ಟ್ಯಗಳು ಇವುಗಳಲ್ಲದೆ, ಬಸವೇಶ್ವರನ ವಚನಗಳ ವಿಶ್ಲೇಷಣೆಯನ್ನು ಡಾ. ಹಳಕಟ್ಟಿ ಮಾಡುತ್ತಾರೆ. ಶಿವಾನುಭವ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಇದು, ಇತ್ತೀಚೆಗೆ ಗ್ರಂಥರೂಪದಲ್ಲಿ ಹೊರಬಂದಿದೆ. (ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ: ಸಂಪುಟ ೧೧: ಸಂಪಾದಕರು. ಡಾ. ಎಮ್. ಎಸ್. ಮದಭಾವಿ).

**೨. ಬಸವೇಶ್ವರನ ವಚನಗಳು:** ತಮ್ಮ ಶಿವಾನುಭವ ಗ್ರಂಥ ಮಾಲೆಯ ಮೂಲಕ ಡಾ. ಹಳಕಟ್ಟಿ ಅವರು ಪ್ರಕಟಿಸಿದ ಪ್ರಥಮ ಗ್ರಂಥವಿದು. ಈ ಗ್ರಂಥದ ಎರಡನೆಯ ಆವೃತ್ತಿಗೆ ಪ್ರಸ್ತಾವನೆ ಬರೆಯುತ್ತ ಡಾ. ಹಳಕಟ್ಟಿಯವರು, 'ಬಸವೇಶ್ವರನ ವಚನಗಳ ಎರಡನೆಯ ಆವೃತ್ತಿಯನ್ನು ನಾವು ಈಗ ವಾಚಕರೆದುರಿಗೆ ಇಡುವ ಪ್ರಸಂಗ ಬಂದದ್ದಕ್ಕೆ ನಾವು ದಯಾನ್ವಿತನಾದ ಪರಮಾತ್ಮನನ್ನು ಸಹೃದಯತೆಯಿಂದ ಸ್ಮರಿಸುತ್ತೇವೆ...'ಎಂದು ಸಹರ್ಷದಿಂದ ಹೇಳಿರುವದು ಗಮನಾರ್ಹ. ಯಾಕಂದರೆ ವಚನಗಳ ಓದುವತ್ತ ವಾಚಕರ ಆಸಕ್ತಿ ಬೆಳೆದದ್ದು ಡಾ. ಹಳಕಟ್ಟಿಯವರಿಗೆ ಇನ್ನಿಲ್ಲದ ಉತ್ಸಾಹ ತಂದಿರಬೇಕು. ಮುಂದೆ ಈ ಗ್ರಂಥ ಮೈಸೂರು ವಿಶ್ವವಿದ್ಯಾಲಯದ ಎಂ. ಎ. ವಿದ್ಯಾರ್ಥಿಗಳಿಗೆ ಪಠ್ಯವಾಯಿತು.

'ಮೂರು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಈ ಎರಡನೆಯ ಆವೃತ್ತಿ ಸಿದ್ಧಗೊಳಿಸಲ್ಪಟ್ಟಿರುವದರಿಂದ, ಈ ಪ್ರತಿಯು ಬಹುಮಟ್ಟಿಗೆ ಶುದ್ಧವಾಗಿದೆ ಎಂದು ಹೇಳಬಹುದಾಗಿದೆ. ಆದರೆ ಇದು ಸಂಪೂರ್ಣ ಶುದ್ಧವಾಗಿದೆಯೆಂದು ನಾವು ಇನ್ನೂ ಹೇಳಲು ಧೈರ್ಯಮಾಡಲಾರೆವು. ಯಾಕಂದರೆ ಅನೇಕ ವಚನಗಳು ವಿಶೇಷಾರ್ಥವುಳ್ಳವಾಗಿ ಬೆಡಗಿನಿಂದ ತುಂಬಿಕೊಂಡಿರುವದರಿಂದಲೂ ಅನೇಕ ಕಡೆಗೆ ಶಬ್ದರೂಪಗಳು ಈ ಕಾಲಕ್ಕೆ ಅಪರಿಚಿತವಾದವುಗಳಿರುವದರಿಂದಲೂ ಅವುಗಳ ನಿಜವಾದ ಪಾಠಗಳನ್ನು ಕಂಡುಹಿಡಿಯುವದು ಇನ್ನೂ ದುಸ್ತರವಾಗಿರುತ್ತದೆ. ಈ ಕಾರ್ಯವನ್ನು ಇನ್ನು ಮೇಲೆ ಕನ್ನಡ ಭಾಷಾಶಾಸ್ತ್ರಜ್ಞರೂ, ಶಿವಾನುಭವ ವಿದ್ಯಾಸಂಪನ್ನರೂ ಕೈಕೊಂಡು ಶುದ್ಧಪಾಠಗಳಾವವೆಂಬುದನ್ನು ನಮಗೆ ತಿಳಿಸಿದಲ್ಲಿ ನಾವು ಅವರಿಗೆ ಉಪಕೃತರಾಗುವೆವು. ಮತ್ತು ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಸೇರಿಸುವೆವು...

'ಪುರಾತನ ಗ್ರಂಥಸಂಶೋಧನ ಕಾರ್ಯವು ಇಂಥಲ್ಲಿಗೆ ಪೂರ್ಣವಾಯಿತೆಂದು ಹೇಳುವದು ದುಸ್ತರವು. ಅದು ಯಾವಾಗಲೂ ಅಪೂರ್ಣಸ್ಥಿತಿಯಲ್ಲಿರುವದು ಸಹಜವು...' ಎಂದು ಪ್ರಾಮಾಣಿಕವಾಗಿ ಡಾ. ಹಳಕಟ್ಟಿ ಬರೆಯುತ್ತಾರೆ.

ಇಲ್ಲಿ ಬಸವಣ್ಣವರ ಪರಿಷ್ಕೃತ ೬೬೦ ವಚನಗಳನ್ನು ಷಟಸ್ಥಲಕ್ಕನುಗುಣವಾಗಿ ವಿಂಗಡಿಸಲಾಗಿದೆ. ಈ ಗ್ರಂಥದ ಕೊನೆಗೆ ೩೨ ಪುಟಗಳ ಅನುಬಂಧವಿದ್ದು, ಗ್ರಂಥದ ಅಧ್ಯಯನಕ್ಕೆ ಸಹಾಯಕಾರಿಯಾಗಬಲ್ಲ ಪೂರಕ ಮಾಹಿತಿಯೂ, ಕೆಲ ವಚನಗಳ ವಿವರಣೆಯೂ ಹಾಗೂ ವಚನ ಶಬ್ದಕೋಶವೂ ಇಲ್ಲಿದೆ.

**೩. ಹೊಸ ಪದ್ಧತಿಯ ಬಸವಣ್ಣನವರ ವಚನಗಳು:** 'ಬಸವೇಶ್ವರನ ತತ್ವಗಳು ಸಣ್ಣವರಲ್ಲಿಯೂ, ದೊಡ್ಡವರಲ್ಲಿಯೂ, ಸ್ತ್ರೀಯರಲ್ಲಿಯೂ, ಪುರುಷರಲ್ಲಿಯೂ, ಪಾಠಶಾಲೆಗಳಲ್ಲಿಯೂ, ವಸತಿಗೃಹಗಳಲ್ಲಿಯೂ, ಮನೆಮನೆಗಳಲ್ಲಿಯೂ, ಎಲ್ಲ ಕಡೆಗೂ ಪ್ರಸಾರ ಹೊಂದಲೆಂಬ ಆಶಯದಿಂದಲೂ ಮತ್ತು ವೀರಶೈವೇತರರನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ೮೨೧ ಬಸವಣ್ಣನ ವಚನಗಳ ಸಂಗ್ರಹವಿದು. ವಚನಗಳ ಮಹತ್ವ, ಪರಮಾತ್ಮನ ಸ್ವರೂಪ, ಜಗತ್ತಿನ ಪೂರ್ವಸ್ಥಿತಿ, ಅದರ ಆವಿರ್ಭಾವಕ್ಕೆ ಸಂಬಂಧಿಸಿದ ವಚನಗಳಿವೆ. ಈ ಗ್ರಂಥದ ಕೊನೆಯಲಿ ಕ್ರಮಬದ್ಧವಾಗಿ ಅಷ್ಟಾವರಣ ವಿವರಿಸುವ ವಚನಗಳನ್ನು ಪರಿಚಯಿಸುವ ಒಂದು ವಿನೂತನ ಪ್ರಯೋಗವನ್ನು ಡಾ. ಹಳಕಟ್ಟಿ ಅವರು ಇಲ್ಲಿ ಮಾಡಿದ್ದಾರೆನ್ನಬಹುದು.

**೪. ಸಟೀಕ ಬಸವೇಶ್ವರನ ವಚನಗಳು:** ಬಸವಣ್ಣನವರ ೯೨ ವಚನಗಳ ಅರ್ಥ ವಿವರಿಸುವ (ಟೀಕೆಯೊಂದಿಗೆ)

ಪ್ರಯತ್ನವಿದು. ಪ್ರತಿಯೊಂದು ವಚನದ ಅಡಿಯಲ್ಲಿ ಬಸವಣ್ಣನವರ ತಾತ್ವಿಕ ವಿಚಾರಗಳನ್ನು ಸರಳವಾಗಿ ವಿವರಿಸಿದ್ದಾರೆ. ಕೆಲವು ಕಡೆ ವಚನಗಳು ತಮಗೆ ತಿಳಿಯದಿರುವದನ್ನು 'ಅರ್ಥ ಸ್ಪಷ್ಟವಾಗುವದಿಲ್ಲ' ಎಂದು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ. (ಉದಾ: ವಚನ ೩೪: 'ಕೊಡೆವಿಡಿಯ ಕುದುರೆಯ ದೃಢವುಳ್ಳರಾವುತನೇರೆ...'). ಏನಾದರೊಂದು ಅರ್ಥ ಹಚ್ಚಿ ಪಾಂಡಿತ್ಯ ಪ್ರದರ್ಶಿಸುವ ಜಾಯಮಾನ ಡಾ. ಹಳಕಟ್ಟಿ ಅವರದ್ದಾಗಿರಲಿಲ್ಲ.

**೫. ಶ್ರೀ ಬಸವಣ್ಣನವರ ಬಗ್ಗೆ ಹೊಸದಾಗಿ ಸಿಕ್ಕ ಶಿಲಾಲೇಖವು:** ಚಾರಿತ್ರಿಕ ಸಂಗತಿಗಳ ಖಚಿತತೆಯು ಶಿಲಾಶಾಸನಗಳ ಮೂಲಕ ಲಭ್ಯವಾಗುವಂಥದ್ದು. ಲಿಂಗಾಯತ ಧರ್ಮ, ಪರಂಪರೆ, ಆಗಿಹೋದ ಮಹಾನುಭಾವರ ಕುರಿತಾದ ಶಿಲಾ ಶಾಸನಗಳ ಸಂಪಾದನೆ ಮಾಡಿದ್ದು ಡಾ. ಹಳಕಟ್ಟಿ ಅವರ ಮತ್ತೊಂದು ಮಹತ್ತರ ಕೊಡುಗೆಯಾಗಿದೆ.

'ಶ್ರೀ ಬಸವಣ್ಣನವರ ಬಗ್ಗೆ ಹೊಸದಾಗಿ ಸಿಕ್ಕ ಶಿಲಾಲೇಖವು' (ಶಿವಾನುಭವ ಪತ್ರಿಕೆಯ ಸಂ–೩ ಸಂಚಿಕೆ ೯, ಪುಟ–೯೩–೧೧೩)ದಲ್ಲಿ ಹಾಲಬಸವೀದೇವನ ವರ್ಣನೆ ಇದೆ. ೧೨೬೦ರಲ್ಲಿ ಕೆತ್ತಲಾದ ಈ ಅರ್ಜುನವಾಡ ಶಾಸನದಿಂದ ಬಸವೇಶ್ವರ ಅಣ್ಣ ದೇವರಾಜನೆಂಬುದು ತಿಳಿದುಬರುತ್ತದೆ. ಆತನ ಮಗ ಕಲಿದೇವ. ಈ ಕಲಿದೇವನ ಮಗ ಈ ಹಾಲಬಸವೀದೇವನೆಂಬುದೂ ಈ ಶಾಸನದಿಂದ ಗೊತ್ತಾಗುತ್ತದೆ. ಹಾಗೆಯೇ, ಬಸವೇಶ್ವರನ ವಂಶಸ್ಥರು, ಜನ್ಮಸ್ಥಳ ಆತನ ವ್ಯಕ್ತಿತ್ವದ ಮೇಲೆ ಹೊಸ ಬೆಳಕು ಚೆಲ್ಲುತ್ತದೆ.

ಡಾ. ಹಳಕಟ್ಟಿ ಅವರು ೮೦ ಸಾಲುಗಳ ಈ ಶಾಸನವನ್ನು ಯಥಾವತ್ತಾಗಿ ಪ್ರಕಟಿಸಿದ್ದೂ ಅಲ್ಲದೆ, ಮೂಲ ಶಾಸನದಲ್ಲಿ ನಾಶವಾಗಿ ಹೋಗಿರುವ ಅಕ್ಷರಗಳನ್ನು ಸರಿಯಾಗಿ ತುಂಬಿದ್ದಾರೆ. ತಮಗೆ ಅರ್ಥವಾಗದ ಭಾಗವನ್ನು ಪ್ರಾಮಾಣಿಕ ಸಂಶೋಧಕರಂತೆ ಹಾಗೆಯೆ ಇಟ್ಟಿದ್ದಾರೆ. ಶಾಸನದ ೮೦ ಓಳಿಗಳನ್ನು ಪರಿಷ್ಕರಿಸಿ, ಮೂಲ ಶಾಸನದ ಸ್ಥೂಲ ಭಾಷಾಂತರವನ್ನು ಕೊಡುತ್ತಾರೆ. ಬಸವೇಶ್ವರನ ಬಗ್ಗೆ ಈ ಶಾಸನದಿಂದ ತಿಳಿದುಬರುವ ಸಂಗತಿಗಳನ್ನು ವಿವರಿಸುವದಷ್ಟೆ ಅಲ್ಲ, ಶಿಲಾಲೇಖದ ಅಳತೆ, ಶಾಸನದ ಮಹತ್ವದ ಬಗ್ಗೆಯೂ ವಿವರ ನೀಡುತ್ತಾರೆ.

**೬. ಬಸವೇಶ್ವರ ಷಟಸ್ಥಲ ವಚನದ ಕಥಾಸಾರ:** ಇದು ಶಿವಾನುಭವ ಗ್ರಂಥಮಾಲೆಯ ೪೧ ನೆಯ ಗ್ರಂಥವಾಗಿದು, ಬಸವೇಶ್ವರನ ವಚನಗಳ ಅಧ್ಯಯನಕ್ಕೆ ಸಹಾಯಕಾರಿಯಾಗಿದೆ. ಇದರ ಗ್ರಂಥಕರ್ತನಾರೆಂಬುದು ತಿಳಿದಿಲ್ಲ. ಲಭ್ಯವಾದ ಒಂದೇ ಒಂದು ಹಸ್ತಲಿಖಿತ ಪ್ರತಿಯ ಆಧಾರದ ಮೇಲಿಂದ, ಅದನ್ನು ಪರಿಷ್ಕರಿಸಿ ಪ್ರಕಟಿಸುತ್ತಿರುವದಾಗಿ ಡಾ. ಹಳಕಟ್ಟಿಯವರು ಪ್ರಸ್ತಾವನೆಯಲ್ಲಿ ಬರೆಯುತ್ತಾರೆ. 'ಅನೇಕ ಕಡೆಗೆ ಚರಿತ್ರೆಯ ಭಾಗಗಳು ಅಶುದ್ಧವಾಗಿ ಉಳಿದು ಅರ್ಥವಾಗುವದಿಲ್ಲ ಆದ್ದರಿಂದ ನಾವು ವಿಷಾದಿಸುತ್ತೇವೆ. ಅದಕ್ಕೋಸ್ಕರ ವಾಚಕರು ನಮ್ಮನ್ನು ಕ್ಷಮಿಸಬೇಕು.' ಎಂದು ವಿನೀತರಾಗಿ ಕೇಳಿಕೊಳ್ಳುವ ಹಳಕಟ್ಟಿಯವರು, ಬೇರೆ ಹಸ್ತಲಿಖಿತ (ಈ ಗ್ರಂಥಕ್ಕೆ ಸಂಬಂಧಿಸಿದಂತೆ) ದೊರೆತಲ್ಲಿ ಕಳಿಸಿಕೊಡುವಂತೆಯೂ, ಅವರಿಗೆ ತಾವು ಬಹಳ ಆಭಾರಿಯಾಗುವದಾಗಿಯೂ ಓದುಗರನ್ನು ಕೇಳಿಕೊಂಡಿರುವದು ಜ್ಞಾನದ ಬಗೆಗಿನ ಅವರ ಹಸಿತಕ್ಕೆ ಸಾಕ್ಷಿಯಾಗಿದೆ. ಈ ಮುಂಚೆ ತಾವು ಪ್ರಕಟಿಸಿದ್ದ 'ಬಸವೇಶ್ವರನ ವಚನಗಳು' ಗ್ರಂಥದಲ್ಲಿನ ಪುಟ ಹಾಗೂ ವಚನ ಸಂಖ್ಯೆಗಳನ್ನು ಈ ಗ್ರಂಥದ ಬರುವ ಪ್ರತಿ ಕಥಾ ಪ್ರಸಂಗದ ಶೀರ್ಷಿಕೆಯ ಮುಂದೆ ಕಾಣಿಸಿರುವದು, ವಚನಾಭ್ಯಾಸಿಗಳಿಗೆ ಸಹಾಯಕಾರಿ.

**೭. ಶ್ರೀ ಬಸವೇಶ್ವರನ ತತ್ವಗಳು:** ಬಸವೇಶ್ವರನ ಚರಿತ್ರೆ ಬರೆದ ಡಾ. ಹಳಕಟ್ಟಿಯವರಿಗೆ, ಬಸವೇಶ್ವರನ ತತ್ವಗಳನ್ನು ಜನರಿಗೆ ಪ್ರಚುರ ಪಡೆಸುವದರ ಅಗತ್ಯ ಕಂಡುಬಂದಿರಬೇಕು. 'ಬಸವೇಶ್ವರನ ತತ್ವಗಳನ್ನು ಅರಿಯಬೇಕೆಂಬ ಕುತೂಹಲವು ಜನರಲ್ಲಿ ಹೆಚ್ಚುತ್ತಾ ಇದೆ... ಮತ್ತು ಅವನು ಪ್ರಚಾರ ಪಡಿಸಿದ ತತ್ವಗಳಾವವೆಂಬುದನ್ನು ತಿಳಿಯುವದು ಅವಶ್ಯವೆಂದು ತೋರಿದ್ದರಿಂದ ನಾವು ಈ ಗ್ರಂಥವನ್ನು ಸಿದ್ಧಪಡಿಸಿದ್ದೇವೆ' ಎಂದು ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ.

ತಮ್ಮ ಸಮಕಾಲೀನ ವಿದ್ವಾಂಸರಿಂದ ಲೇಖನಗಳನ್ನು ಬರೆಯಿಸಿ, ಅದರ ಜತೆಗೆ ಸಂಪಾದಕರಾದ ತಾವೂ ಎರಡು ಲೇಖನಗಳನ್ನು ಬರೆದು ಈ ಗ್ರಂಥ ಪ್ರಕಟಿಸುತ್ತಾರೆ. ಸಿದ್ಧರಾಮಪ್ಪ ಪಾವಟೆ, ಬ್ಯಾಳಿ ಕಲ್ಯಾಣಪ್ಪ, ಸ ಹಾ ಶಿವಮೂರ್ತಿ, ಜೀರಗೆ ಬಸವಪ್ಪ, ಯಗಟಿ ವೀರಪ್ಪ, ಬಿಳೇ ಅಂಗಡಿ ವೀರಪ್ಪ ಅವರುಗಳ ಲೇಖನಗಳಿವೆ.

ಇಲ್ಲಿ ಬಸವೇಶ್ವರನ ತತ್ವಗಳು, ಕನ್ನಡ ಸಾಹಿತ್ಯಕ್ಕೆ ಆತನ ಕಾಣಿಕೆ, ಆತನ ನೈತಿಕ ವಿಚಾರಗಳು, ಭಕ್ತಿಯ ಪರಿ, ಷಟಸ್ಥಲದ ಪ್ರಕಾರ ಸ್ತ್ರೀಯರ ಹಕ್ಕುಗಳು, ಶಿವಾನುಭವ ಮಂಟಪವೂ ಹಾಗೂ ಅಲ್ಲಿ ಚರ್ಚಿತವಾಗುತ್ತಿದ್ದ ವಿಷಯಗಳು, ಬಸವನು ವೇದ ಬಾಹಿರನೆ? ಮುಂತಾದ ಒಂಬತ್ತು ಅಭ್ಯಾಸಪೂರ್ಣ ಲೇಖನಗಳ ಗುಚ್ಛವಿದು.

೮. **Vacanas of Sri Basaveswara:** ಬಸವೇಶ್ವರನ ೧೩೯ ವಚನಗಳ ಇಂಗ್ಲಿಷಿಗೆ ಅನುವಾದ: ರೆವರೆಂಡ್ ಜೆ. ಎನ್ ಫರ್ಕುಹಾರ್ ( Rev. J. N. Farquar) ಅವರ ಸಲಹೆಯ ಮೇರೆಗೆ ಡಾ. ಹಳಕಟ್ಟಿಯವರು ಬಸವಣ್ಣವರ ೧೩೯ ವಚನಗಳನ್ನು ಇಂಗ್ಲಿಷ ಭಾಷೆಗೆ ಅನುವಾದಿಸುತ್ತಾರೆ. 'ದಿ ಇಂಡಿಯನ್ ಆಂಟಿಕ್ವರಿಯಲ್ಲಿ ಅವು 'Vacanas Attributed to Basav' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಗೊಳ್ಳುತ್ತವೆ. ಬಸವಣ್ಣನವರ ವಚನಗಳನ್ನು ಮೊಟ್ಟಮೊದಲಿಗೆ ಇಂಗ್ಲಿಷಿಗೆ ಭಾಷಾಂತರಿಸಿದ ಕೀರ್ತಿ ಡಾ. ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಈ ವಚನಗಳನ್ನು ಭಕ್ತ (Devotion) ಮಹೇಶ (Divine Power) ಪ್ರಸಾದ (Grace) ಪ್ರಾಣಲಿಂಗ (Self Surrender) ಶರಣ ಮತ್ತು ಐಕ್ಯ (Oneness with Siva) ಎಂಬ ಆರು ಸ್ಥಲಗಳಿಗನುಗುಣವಾಗಿ ವಿಂಗಡಿಸಲಾಗಿದೆ. ಈ ಮೂಲಕ ಬಸವಣ್ಣನವರನ್ನು ಮತ್ತು ಅವರ ವಚನಗಳನ್ನು ವಿಶ್ವಸಮುದಾಯಕ್ಕೆ ಪರಿಚಯಿಸಿದ ಶ್ರೇಯಸ್ಸು ಇವರದಾಗಿದೆ' (ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ ೭ ಸಂಪಾದಕರು: ಜೆ. ಎಮ್. ನಾಗಯ್ಯ).

'ಬಸವ ಗೀತಾಂಜಲಿ', ಭಕ್ತಿ ಭಂಡಾರಿ ಬಸವಣ್ಣನವರು', ಬಸವೇಶ್ವರನ ವಚನಗಳು' ಮುಂತಾಗಿ ಬೇರೆಯವರು ಬರೆದ ಪುಸ್ತಕಗಳಿಗೆ ಮುನ್ನುಡಿ ಬರೆದಿರುವ ಡಾ. ಹಳಕಟ್ಟಿಯವರು, ಅಲ್ಲೆಲ್ಲ ಬಸವೇಶ್ವರನ ವಿಚಾರಗಳ ಕುರಿತು ಮರುಚಿಂತನೆ ಮಾಡಿದ್ದಾರೆ. ಮಿಕ್ಕುಳಿದ ತಮ್ಮ ಇನ್ನಿತರ ಗ್ರಂಥಗಳಲ್ಲಿ, ಲೇಖನಗಳಲ್ಲಿ ಪ್ರಾಸಂಗಿಕವಾಗಿ ಬಸವಣ್ಣನವರ ತತ್ವ ವಿವೇಚನೆ ಮಾಡಿದ್ದುಂಟು. 'ಬಸವೇಶ್ವರನು ಕನ್ನಡ ಸಾಹಿತ್ಯದ ಸೀಮಾಪುರುಷ' ಎಂದು ಸಾರಿದ ಡಾ. ಹಳಕಟ್ಟಿಯವರು, ಕನ್ನಡ ಸಂಸ್ಕೃತಿಗೂ ಭದ್ರ ಬುನಾದಿ ಹಾಕಿದವನೆ ಬಸವಣ್ಣ ಎಂದು ಹೊಗಳುವ ಮೂಲಕ ತಮ್ಮ ಬಸವಾಭಿಮಾನ ವ್ಯಕ್ತಗೊಳಿಸಿದ್ದಾರೆ.

■■

---

**ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು**
**ಅರಸರಿಯದ ಬಿಟ್ಟಿಯ ಮಾಡುವೆನು**
**ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲರಿಯದ**
**ಉಪಚಾರಿಯಾನು**
**ಸ್ಥಾವರ ಜಂಗಮವರಿಯದ ಪೂಜಕ ನಾನು**
**ಮತ್ತೆ ನಾಚದೆ, ಕೂಡಲಸಂಗಮದೇವಯ್ಯಾ**
**ಜಂಗಮವೆನ್ನ ಪ್ರಾಣಲಿಂಗವೆಂಬೆನು.**

**–ಬಸವಣ್ಣ**

ಸ್ಥಾವರ ಮತ್ತು ಜಂಗಮಗಳ ರಹಸ್ಯವನ್ನರಿಯದ, ಜಂಗಮಕ್ಕೆ ಅರ್ಪಿಸಲರಿಯದ ಲಿಂಗಪೂಜೆಯು ಅರ್ಥಹೀನ. ಜಲ ಭಸ್ಮ ಗಂಧಾದಿ ಎಂಟು ವಿಧಗಳಿಂದಾಗಲಿ, ಅರ್ಘ್ಯಪಾದ್ಯ ಆಚಮನಾದಿ ಹದಿನಾರು ರೀತಿಯ ಉಪಚಾರಗಳಿಂದಾಗಲಿ ಮಾಡುವ ಇಂಥ ಲಿಂಗ(ಸ್ಥಾವರ)ಪೂಜೆಯು ಕೂಲಿಯೂ ಇಲ್ಲದ ಅರಸನ ಗಮನಕ್ಕೂ ಬಾರದ ಬಿಟ್ಟಿ ಕೆಲಸದಂತಾಗುವುದು. ನಾನೂ ಕೂಡ ಸ್ಥಾವರ ಜಂಗಮಗಳ ರಹಸ್ಯವನ್ನರಿಯದೆ ಕೇವಲ ಔಪಚಾರಿಕವಾಗಿ ಪೂಜಿಸುತ್ತಿರುವೆನು. ಹೀಗಿದ್ದೂ ಮತ್ತೆ ನಾಚದೆ ಜಂಗಮವೇ ಎನ್ನ ಪ್ರಾಣವೆಂದು ಹೇಳುತ್ತಿರುವೆ ಎಂದು ಬಸವಣ್ಣನವರು ಆತ್ಮನಿರೀಕ್ಷಣೆ ಮಾಡಿಕೊಳ್ಳುವ ಮೂಲಕ ಭಕ್ತನಾದವನು ಜಂಗಮವನ್ನರಿತು, ಜಂಗಮಕ್ಕರ್ಪಿಸಿ ಲಿಂಗಪೂಜೆ ಮಾಡಬೇಕೆಂಬ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

# ವಚನ ಧರ್ಮ ಮತ್ತು ಅಕ್ಕನಾಗಮ್ಮ

● ಶ್ರೀಧರ ಗೌಡರ

ಇಂಗಳೇಶ್ವರದಲ್ಲಿ ಜನಿಸಿ, ಶಿವಯೋಗ ಸಾಧನೆ ಮಾಡಿ, ಕೂಡಲಸಂಗಮದಲ್ಲಿ ಅಧ್ಯಾತ್ಮ, ಧಾರ್ಮಿಕ ಶಿಕ್ಷಣ ಪಡೆದು, ಕಲ್ಯಾಣದ ಮಹಾಮನೆಯ ರೂವಾರಿಯಾಗಿ, ಕಲ್ಯಾಣ ಕ್ರಾಂತಿಯಲ್ಲಿ ಭಾಗವಹಿಸಿ, ಧರ್ಮರಕ್ಷಣೆಯ ಕರ್ತವ್ಯವನ್ನು ಜೀವನದ ಕೊನೆಯವರೆಗೆ ನಿರ್ವಹಿಸಿ ಬಯಲಲ್ಲಿ ಬಯಲಾದ ಮಹಾಚೇತನ ಅಕ್ಕನಾಗಮ್ಮ.

ಕೊನೆಯವರೆಗೂ ಧರ್ಮರಕ್ಷಣೆಯ ಪ್ರೇರಕ ಶಕ್ತಿಯಾಗಿ, ಪೋಷಕಳಾಗಿ ನಿಂತ ಅಕ್ಕನಾಗಮ್ಮ, ಬಸವಣ್ಣನ ಹಿರಿಯ ಸಹೋದರಿ, ಚನ್ನಬಸವಣ್ಣನ ತಾಯಿ. ವಚನ ಸಾಹಿತ್ಯ, ಧರ್ಮರಕ್ಷಣೆಯ ಉಳಿವಿಗಾಗಿ ಹೋರಾಡಿದ ವೀರಮಹಿಳೆ. ಶರಣ ಸಂಸ್ಕೃತಿ ಜಗತ್ತಿನಾದ್ಯಂತ ಬೆಳೆಸಲು ಅಕ್ಕನಾಗಮ್ಮನ ತ್ಯಾಗ, ಸಾಹಸಮಯ ಹೋರಾಟದ ಆದರ್ಶ ಬದುಕು ಇಂದಿನ ಯುವ ಜನಾಂಗಕ್ಕೆ ಮಾರ್ಗದರ್ಶಿಯಾಗಿದೆ.

ಚನ್ನಬಸವಣ್ಣನನ್ನು ಅಲ್ಲಮಪ್ರಭುವಿನ ನಂತರ ಶೂನ್ಯ ಪೀಠದ ಅಧ್ಯಕ್ಷನಾಗಿ ರೂಪಿಸಿದ ಕೀರ್ತಿ ನಾಗಮ್ಮನದಾಗಿದೆ. ಶರಣ ಸಂಕುಲ ಅಕ್ಕನಾಗಮ್ಮನನ್ನು ಅಕ್ಕನಾಗಲಾಂಬಿಕೆ, ನಾಗಲಾಂಬೆ, ಅಕ್ಕನಾಗಲಾಂಬೆ, ಅಕ್ಕನಾಗಾಯಿ, ಅಕ್ಕನಾಗಾಯಮ್ಮ, ನಾಗಾಯಿ,ನಾಗಲೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು ಎಂದು ಸಾಹಿತ್ಯ ಹಾಗೂ ಚರಿತ್ರೆಯಿಂದ ತಿಳಿದು ಬರುತ್ತದೆ.

ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಅಗ್ರಹಾರದ ಅಧಿಪತಿಗಳಾದ ಮಾದರಸ, ಮಾದಲಾಂಬಿಕೆಯ ದಂಪತಿಗಳಿಗೆ ಕ್ರಿ.ಶ ೧೧೧೯ರಲ್ಲಿ ಅಕ್ಕನಾಗಮ್ಮ ಜನಿಸಿದಳು. ನಾಗಮ್ಮನಿಗೆ ಹನ್ನೆರಡು ವರ್ಷವಿದ್ದಾಗ ಬಸವಣ್ಣನ ಜನನವಾಯಿತು. ಬಹಳ ಅಕ್ಕರೆಯಿಂದ ತಮ್ಮನ ಲಾಲನೆ ಪಾಲನೆ ಮಾಡಿ, ಹೆತ್ತ ತಾಯಿಯಂತೆ ತಮ್ಮನನ್ನು ಆಡಿಸಿದಳು.

ಗುರು ರೇವಣಸಿದ್ಧರ ಪ್ರಭಾವದಿಂದ ನಾಗಲಾಂಬಿಕೆಗೆ ಶಿವಭಕ್ತಿ, ಯೋಗಸಾಧನೆಯ ಕಡೆಗೆ ಅಧಿಕ ಒಲವು ಉಂಟಾಯಿತು. ಇಂಗಳೇಶ್ವರದಲ್ಲಿ ಆಕೆ ಶಿವಯೋಗಸಾಧನೆ ಮಾಡಿದ ಗುಹೆ ಇದೆ. ಬಸವಣ್ಣ ಎಂಟನೇ ವಯಸ್ಸಿನಲ್ಲಿ ಕರ್ಮಕಾಂಡವನ್ನು ಧಿಕ್ಕರಿಸಿ ಕೂಡಲಸಂಗಮಕ್ಕೆ ಹೊರಟು ನಿಂತಾಗ ತಮ್ಮನನ್ನು ಬಿಟ್ಟಿರಲಾಗದೆ ಅಕ್ಕನಾಗಮ್ಮನೂ ಸಂಗಮಕ್ಕೆ ಅವನೊಡನೆ ಹೋದಳು.

ಕೂಡಲಸಂಗಮದಲ್ಲಿ ಜಾತವೇದ ಮುನಿಗಳು ಸಂಗಮೇಶ್ವರನನ್ನು ಪೂಜಿಸುತ್ತಾ ಗುರುಕುಲವೊಂದನ್ನು ಸ್ಥಾಪಿಸಿದ್ದರು. ಗುರುಕುಲದಲ್ಲಿ ವಟುಗಳಿಗೆ ವೇದ, ಆಗಮ,ಪುರಾಣಗಳ ಅಧ್ಯಯನ ನಡೆಯುತ್ತಿತ್ತು. ದೇಶದ ವಿವಿಧ ಭಾಗಗಳಿಂದ ಅನೇಕ ಜ್ಞಾನಾರ್ಥಿಗಳು ಅಧ್ಯಯನ ಮಾಡಲು ಬರುತ್ತಿದ್ದರು.

ಕೃಷ್ಣ, ಮಲಪ್ರಭೆಯ ಸಂಗಮದ ಸುಂದರ ಪರಿಸರದಲ್ಲಿ ಬಸವಣ್ಣ ಸಕಲಾಗಮ ಶಾಸ್ತ್ರಗಳನ್ನು ಅಧ್ಯಯನ ಮಾಡಿದ. ಅಕ್ಕನಾಗಮ್ಮ ಬಸವಣ್ಣನಿಗೆ ನೆರಳಾಗಿ, ಮಾರ್ಗದರ್ಶಕಳಾಗಿ ಸುಮಾರು ಕ್ರಿ.ಶ ೧೧೪೦ ರಿಂದ ೧೧೫೬ರ ವರೆಗೆ ಕೂಡಲಸಂಗಮದಲ್ಲಿ ವಾಸವಾಗಿದ್ದಳು.

ತಂದೆ, ತಾಯಿಯ ಅಕ್ಕರೆಯ ಮಗಳಾಗಿ ಬೆಳೆದ ಅಕ್ಕನಾಗಮ್ಮಗೆ ಮಾದರಸ, ಮಾದಲಾಂಬಿಕೆ ಅಕ್ಕನಾಗಮ್ಮನ ಒಪ್ಪಿಗೆಯೊಂದಿಗೆ ತಮ್ಮ ಬಂಧುವೇ ಆದ ಕೂಡಲಸಂಗಮದ ಶಿವಸ್ವಾಮಿಯೊಂದಿಗೆ ಸಂಭ್ರಮ ಸಡಗರದಿಂದ ಮದುವೆಯನ್ನು ಮಾಡಿದರು. ಅಕ್ಕನಾಗಮ್ಮ, ಶಿವಸ್ವಾಮಿ ದಂಪತಿಗಳಿಗೆ ಕೂಡಲಸಂಗಮದಲ್ಲಿ ಇದ್ದಾಗಲೇ ಚನ್ನಬಸವಣ್ಣನೆಂಬ ಮಗು ಜನಿಸಿತು. ಬಾಲ್ಯದಲ್ಲಿಯೇ ನಾಗಮ್ಮ ಮಗನಿಗೆ ಆಧ್ಯಾತ್ಮಿಕ ಜ್ಞಾನಸಂಪತ್ತನ್ನು ತುಂಬಿದಳು. ಅದರ ಫಲವಾಗಿಯೇ ಚನ್ನಬಸವಣ್ಣ ಜ್ಞಾನನಿಧಿ, ಷಟ್ಸ್ಥಲ ಚಕ್ರವರ್ತಿ ಎಂದು ಖ್ಯಾತನಾದ.

ಕಲ್ಯಾಣದಲ್ಲಿ ಸೋದರಮಾವ ಬಲದೇವರಸರ ಮಗಳು ಗಂಗಾಂಬಿಕೆಯೊಡನೆ ಬಸವಣ್ಣನ ವಿವಾಹ ನೆರವೇರಿತು, ಆಗ ನಾಗಲಾಂಬಿಕೆ, ಪತಿ ಶಿವಸ್ವಾಮಿ, ಮಗ ಚನ್ನಬಸವಣ್ಣನೊಂದಿಗೆ ಕಲ್ಯಾಣಕ್ಕೆ ಹೋದರು. ಕಲ್ಯಾಣದಲ್ಲಿ ಬಸವಣ್ಣನ ಧರ್ಮ ಕಾರ್ಯಗಳಿಗೆ ಆಸರೆಯಾಗಿ ನಿಂತರು.

ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೂಡಲಸಂಗಮ –೫೮೭೧೧೫ ತಾ.ಹುನಗುಂದ ಜಿ.ಬಾಗಲಕೋಟ

೧೨ನೇ ಶತಮಾನದ ಧಾರ್ಮಿಕ ಜೀವನದಲ್ಲಿ ಮಹಿಳೆಯರಿಗೆ ಯಾವುದೇ ಸ್ವಾತಂತ್ರ್ಯ ಇರಲಿಲ್ಲ. ಮಹಿಳೆಗೂ ಧಾರ್ಮಿಕ ಜೀವನದಲ್ಲಿ ಸಮಪಾಲು ಸಿಗಬೇಕು ಎಂದು ಅನುಭವ ಮಂಟಪದ ಮೇಲ್ವಿಚಾರಣೆಯ ಜವಾಬ್ದಾರಿ ಪಡೆದ ಪರಿಣಾಮ ಮಹಿಳೆಯರ ಸ್ಥಾನಮಾನ ಹೆಚ್ಚಿತು. ಮಹಿಳೆಯರು ಧಾರ್ಮಿಕ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳುವಂತಾಯಿತು. ಮಹಾಮನೆಗೆ ಬರುವ ಅತಿಥಿಗಳ ಪ್ರಸಾದೋಪಚಾರ, ಅನುಭವ ಮಂಟಪದಲ್ಲಿ ನಡೆಯುವ ಶಿವಾನುಭವಗೋಷ್ಠಿಯ ವ್ಯವಸ್ಥೆಯನ್ನು ಅಕ್ಕನಾಗಮ್ಮ ನೋಡಿಕೊಳ್ಳುತ್ತಿದ್ದಳು. ಬಿಡುವಿನ ವೇಳೆಯಲ್ಲಿ ಗಂಗಾಂಬಿಕೆ, ನೀಲಾಂಬಿಕೆ, ಬಸವಣ್ಣ, ಚನ್ನಬಸವಣ್ಣನವರೊಂದಿಗೆ ಚರ್ಚೆ, ಚಿಂತನೆ ಮಾಡುತ್ತಿದ್ದಳು. ಕಲ್ಯಾಣದ ತ್ರಿಪುರಾಂತಕ ಕೆರೆಯ ಗವಿಯಲ್ಲಿ ದೇವರ ಧ್ಯಾನ ಮಾಡುತ್ತಿದ್ದಳು.

ಶರಣರೆಲ್ಲರೂ ಕಾಯಕದಲ್ಲಿ ನಿರತರಾಗಬೇಕು, ಕಾಯಕದಲ್ಲಿ ಉಚ್ಚ ನೀಚ ಭಾವನೆ ಬರಬಾರದು, ಗಳಿಸಿದ್ದನ್ನು ದಾಸೋಹದ ಮೂಲಕ ಸಮಾಜದ ಒಳಿತಿಗಾಗಿ ವಿನಿಯೋಗಿಸಬೇಕು, ಸತ್ಯ ಶುದ್ಧ ಕಾಯಕದಿಂದ ನಿರ್ಮಲ ಚಿತ್ತರಾಗಬೇಕು. ದಾಸೀ ಪುತ್ರನಾಗಲಿ ಮಹಾರಾಜನಾಗಲಿ ಲಿಂಗದೀಕ್ಷೆ ಪಡೆದ ನಂತರ ತಮ್ಮ ಪೂರ್ವಾಶ್ರಮ ಮರೆಯಬೇಕು ಎಂಬ ತತ್ವಗಳನ್ನು ಅಕ್ಕನಾಗಮ್ಮ ಜನರಿಗೆ ಬಿತ್ತರಿಸಿದಳು.

ಕಲ್ಯಾಣ ಕ್ರಾಂತಿಯಲ್ಲಿ ಚನ್ನಬಸವಣ್ಣನ ನೇತೃತ್ವದಲ್ಲಿ ಶರಣ ಶರಣೆಯರೆಲ್ಲ ಧರ್ಮ ರಕ್ಷಣೆಯ ಕಾರ್ಯಕ್ಕೆ ಸಿದ್ಧರಾದರು. ಅಕ್ಕನಾಗಮ್ಮ, ಗಂಗಾಂಬಿಕೆ ಶರಣರ ರಕ್ಷಣೆ ನಿರ್ವಹಿಸಲು ಮುಖಂಡತ್ವ ವಹಿಸಿದರು. ಅಕ್ಕನಾಗಮ್ಮ ತನ್ನೊಡನೆ ಸಮಗ್ರ ವಚನ ಸಾಹಿತ್ಯದ ಕಟ್ಟುಗಳನ್ನು ಕೊಂಡೊಯ್ದು ಸಂರಕ್ಷಿಸಿದಳು.

ಮುರಗೋಡ, ಸಂಪಗಾವಿಯ ಹತ್ತಿರ ಬಿಜ್ಜಳನ ಸೇನೆಯೊಡನೆ ಕಾಳಗ ನಡೆದವು, ಮಡಿವಾಳ ಮಾಚಯ್ಯನ ನೇತೃತ್ವದಲ್ಲಿ ಶರಣರು ಅತೀವ ಸಾಹಸ ತೋರಿಸಿದರು. ಸೇನೆ ಸೋತು ಹಿಮ್ಮೆಟ್ಟಿತು. ಮುಂದೆ ನಾಗಲಾಪುರದಲ್ಲಿ ಅಕ್ಕ ನಾಗಮ್ಮ ಕೆಲವು ಕಾಲ ವಾಸವಾಗಿದ್ದರಿಂದ ಆ ಊರಿಗೆ ನಾಗಲಾಪುರ ಎಂಬ ಹೆಸರು ಬಂದಿತಲ್ಲದೆ ಇಂದಿಗೂ ಆ ಊರಿನಲ್ಲಿ ಅಕ್ಕನಾಗಮ್ಮನ ಹೆಸರಿನ ದೇವಾಲಯವಿದೆ. ನಂತರ ಶರಣರೆಲ್ಲ ಉಳವಿ ತಲುಪಿದರು, ಅಲ್ಲಿ ಮತ್ತೆ ಘೋರ ಯುದ್ಧವಾಯಿತು. ಅನೇಕ ಶರಣರು ಯುದ್ಧದಲ್ಲಿ ಕಾದಾಡುತ್ತ ಬಯಲಾದರು. ಅಕ್ಕನಾಗಮ್ಮ, ನುಲಿಯ ಚಂದಯ್ಯ ಶರಣರೊಡನೆ ಮುಂದೆ ಸಾಗಿ ತರೀಕೆರೆ ಹತ್ತಿರ ಎಣ್ಣೆಹೊಳೆ ಪ್ರದೇಶದಲ್ಲಿ ನೆಲೆಸಿದಳು, ಧರ್ಮರಕ್ಷಣೆಯ ಕಾರ್ಯವನ್ನು ಮುಂದುವರಿಸಿಕೊಂಡು, ಶರಣ ಧರ್ಮದ ಪ್ರಚಾರ ಮಾಡುತ್ತ ಅಲ್ಲಿಯೇ ಅಕ್ಕನಾಗಮ್ಮ ಲಿಂಗದಲ್ಲಿ ಒಂದಾದಳು.

ಅಕ್ಕನಾಗಮ್ಮನ ೧೪ ವಚನಗಳು ಮಾತ್ರ ದೊರಕಿದ್ದು, ಬಸವಣ್ಣಪ್ರಿಯ ಚೆನ್ನಸಂಗಯ್ಯ ಎಂಬುದು ಅಂಕಿತವಾಗಿದೆ. ಬಸವಸ್ತುತಿ, ಶರಣಸ್ತುತಿ, ಅಧ್ಯಾತ್ಮರಂಗದಲ್ಲಿ ಆಕೆ ಸಾಧಿಸಿದ ನಿಲುವು, ಶ್ರದ್ಧೆ ಆಕೆಯ ವಚನಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ.

■■

---

**ನಾಗಲಾಂಬಿಕೆ**

ಬಸವಣ್ಣನವರ ಸಹೋದರಿಯಾದ ಅಕ್ಕನಾಗಮ್ಮ ಅವಿರಳಜ್ಞಾನಿ ಚೆನ್ನಬಸವಣ್ಣನವರ ತಾಯಿ. ಬಸವಣ್ಣ ಮತ್ತು ಚೆನ್ನಬಸವಣ್ಣನವರ ವ್ಯಕ್ತಿತ್ವವನ್ನು ರೂಪಿಸಿದ ಶಿಲ್ಪಿ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಜನ್ಮಸ್ಥಳ ಬಸವನಬಾಗೇವಾಡಿಯ ಇಂಗಳೇಶ್ವರ. ಕಾವ್ಯಗಳಲ್ಲಿ (ಸಿಂಗಿರಾಜ ಪುರಾಣ) ಪತಿಯ ಹೆಸರನ್ನು ಶಿವಸ್ವಾಮಿ ಎಂದು ಉಲ್ಲೇಖಿಸಲಾಗಿದೆ. ಲಭ್ಯವಿರುವ ವಚನಗಳ ಸಂಖ್ಯೆ ೧೪. ಇವಳ ವಚನಗಳಲ್ಲಿ ಶರಣಸತಿ ಲಿಂಗಪತಿ ಭಾವವು ಅಭಿವ್ಯಕ್ತವಾಗಿದೆ ಮತ್ತು ಬಸವಣ್ಣ ಮತ್ತಿತರ ಶರಣ-ಶರಣೆಯರನ್ನು ಸ್ತುತಿಸಲಾಗಿದೆ. 'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬುದು ಇವಳ ವಚನಾಂಕಿತ. ಬಿಜ್ಜಳನ ಸೈನಿಕರೊಂದಿಗೆ ಕೆಚ್ಚೆದೆಯಿಂದ ಸೆಣಸಿ ವಚನ ಸಾಹಿತ್ಯವನ್ನು ರಕ್ಷಿಸಿದ ಧೀರ ಶರಣೆ ಎನಿಸಿದ್ದಾಳೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಹತ್ತಿರದ ಎಣ್ಣೆಹೊಳೆ ಇವಳ ಐಕ್ಯಸ್ಥಾನವಾಗಿದೆ.

**ಪೂಜ್ಯಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**
ನಾಗನೂರು ಶ್ರೀ ರುದ್ರಾಕ್ಷಿಮಠ ಬೆಳಗಾವಿ, ಡಂಬಳ-ಗದಗ

# ಬಿಬ್ಬಿ ಬಾಚಯ್ಯನ ದಾಸೋಹದಲ್ಲಿ ಸಮಾನತೆ

● ವೆಂಕಟೇಶ ಕೆ. ಜನಾದ್ರಿ

ಹೋಳಿ ಹುಣ್ಣಿಮೆಯಂದು ಬಿಬ್ಬಿ ಬಾಚಯ್ಯನವರು ಪರಮಾತ್ಮನಿಂದ ಆತ್ಮಪಡೆದು ಶರೀರಧಾರಿ ಆಗುತ್ತಾರೆಂಬುದು ಒಂದು ನಂಬಿಕೆ. ಪ್ರತಿವರ್ಷ ಮಾರ್ಚ ಮಾಹೆಯಲ್ಲಿ ಹೋಳಿ ಹುಣ್ಣಿಮೆಯ ದಿವಸ ಸಮೀಪಿಸಿದಂತೆ ಬಿಬ್ಬಿ ಬಾಚಯ್ಯ ಶರಣರ ವಿಚಾರ ಮತ್ತು ಧೋರಣೆಗಳು ನನ್ನನ್ನು ಕಾಡಿಬಿಡುತ್ತವೆ. ಅವರ ಕುರಿತು ಬಹಳಷ್ಟು ಶೋಧ ಕಾರ್ಯ ಆಗಬೇಕಾಗಿದೆ. ಆದರೆ ನನ್ನ ಅರಿವಿನ ಮಿತಿಗೆ ತಿಳಿದಿರುವ ವಿವರಗಳನ್ನಾಧರಿಸಿ ಈ ವಿಚಾರಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸುವೆ. ಮಾರ್ಕ್ಸ ಹೇಳುವಂತೆ, "ನಮಿಸುವ ಕೈಗಳಿಗಿಂತ ದುಡಿಯುವ ಕೈಗಳು ದೊಡ್ಡವು" ಅಂತಹ ದುಡಿಯುವ ಕೈಗಳು ಮಾಡುವ ಕಾಯಕಕ್ಕೆ ಕೈಲಾಸದ ಸ್ಥಾನಮಾನವನ್ನು ನೀಡಿದಂತಹ ಬಸವಾದಿ ಪ್ರಮಥರಲ್ಲಿ ಬಿಬ್ಬಿ ಬಾಚಯ್ಯ ಶರಣರೂ ಸಹ ಒಬ್ಬ ವಿಶಿಷ್ಟ ರೀತಿಯ ಶರಣರಾಗಿದ್ದಾರೆ. ಅವರ ವಚನಗಳಲ್ಲಿ ಹೊಟ್ಟೆ ತುಂಬಿಸಲು ಯಾವ ಕಾಯಕವಾದರೇನು? ಎಂಬ ಭಾವ ಸಹಜವಾಗಿಯೇ ಧ್ವನಿಸುತ್ತದೆ.

ಈ ಮಹಾನ್ ಶರಣರ ಬಗೆಗೆ ಬಸವ ಪುರಾಣ, ಭೈರವೇಶ್ವರ ಕಥಾಮಣಿಸೂತ್ರ ರತ್ನಾಕರ, ಫಾಲ್ಕುರಿಕೆ ಸೋಮೇಶ್ವರ ಪುರಾಣ, ಚೆನ್ನಬಸವ ಪುರಾಣ, ಬಸವಲಿಂಗ ದೇವರ ಕಥಾಸಾಗರ, ಪ್ರಭುದೇವರ ಪುರಾಣ, ಭಕ್ತರಸನ ಸೋನೆ ಎಂಬ ಗ್ರಂಥಗಳಲ್ಲಿ ಪ್ರಸ್ತಾಪವಿರುತ್ತದೆ. ಬಿಜಾಪೂರ ಜಿಲ್ಲೆ ಸಿಂಧಗಿ ತಾಲ್ಲೂಕಿನ ಗೊಬ್ಬೂರಲ್ಲಿ ಜನನ ಒಂದು ವಾದದ ಪ್ರಕಾರ ಮೂಲತಃ ಬ್ರಾಹ್ಮಣರಾದರೂ ವಿಭಿನ್ನ ಧೋರಣೆಯನ್ನು ಹೊಂದಿದ್ದ ಇವರು ಒಂದು ವಿಶೇಷ ಪ್ರಸಂಗದಲ್ಲಿ ವಿಪ್ರರ ವಿರುದ್ಧವೇ ಬೊಬ್ಬಿರಿದ ಕಾರಣ ಇವರಿಗೆ ಬೊಬ್ಬಿರಿದ ಬಾಚಯ್ಯ ಎಂದು, ನಂತರದಲ್ಲಿ ಈ ಹೆಸರು ಪರಿವರ್ತನೆಯಾಗಿ ಬೊಬ್ಬಿ ಬಾಚಯ್ಯ ಆಗಿ, ಕಾಲಾಂತರದಲ್ಲಿ "ಬಿಬ್ಬಿ ಬಾಚಯ್ಯ" ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿರಬಹುದು. ಇವರಿಂದ ರಚಿಸಲ್ಪಟ್ಟ ವಚನಗಳಲ್ಲಿ "ಏಣಾಂಕಧರ ಸೋಮೇಶ್ವರ" ಎಂಬ ವಚನಾಂಕಿತದಿಂದ ಸುಮಾರು ೧೧೨ ವಚನಗಳು ಇಂದು ನಮಗೆ ಸಿಗುತ್ತಿವೆ.

ಇವರು ಮೂಲತಃ ಬ್ರಹ್ಮಣರಾಗಿದ್ದು, ಗೊಬ್ಬೂರಿನ ಸುತ್ತಮುತ್ತ ಸಂಚರಿಸುತ್ತಿರುವಾಗ ಅಲ್ಲಲ್ಲಿ ಗಣಪರ್ವಗಳು ನಡೆದಾದ ಬಳಿಕ ಶೇಷ ಪ್ರಸಾದವನ್ನು ಭಕ್ತಿಯಿಂದ ಪಡೆದು ಮತ್ತು ಕಂತಿಭಿಕ್ಷೆ ಮಾಡಿ ಸಂಗ್ರಹವಾದ ಆಹಾರವನ್ನು ದೇವರಿಗೆ ಅರ್ಪಿಸಿ ಪ್ರಸಾದವನ್ನಾಗಿಸಿದ ನಂತರ ದಾಸೋಹ ಮಾಡುವ ವಿಶಿಷ್ಟ ಕಾಯಕವನ್ನು ಕೈಕೊಂಡಿರುವವರು. ಇವರ ಬಗ್ಗೆ ಕೆಲ ಚಿಂತಕರು ಬ್ರಾಹ್ಮಣರು ಈ ಕಾಯಕ ಮಾಡುವುದು ಸಾಧ್ಯವಿಲ್ಲ. ಇವರು ಒಬ್ಬ ಶೆಟ್ಟಿ(ವೈಶ್ಯ ವರ್ತಕ)ರಾಗಿದ್ದು ವಿವಿಧ ಜನಾಂಗದಿಂದ ದವಸ ಧಾನ್ಯಗಳನ್ನು ಸಂಗ್ರಹಿಸಿ ದೇವರಿಗೆ ಅರ್ಪಿಸಿ ಪ್ರಸಾದವಾಗಿಸಿದ ನಂತರ ಇನ್ನೊಬ್ಬರಿಗೆ ಹಂಚುವ (ವ್ಯಾಪಾರದ ರೀತಿ) ದಾಸೋಹದ ಕಾಯಕ ಮಾಡುತ್ತಿರುವವರು ಎಂದು ಪರಿಗಣಿಸುವುದೂ ಉಂಟು. ಇಲ್ಲಿ ಸಂಶೋಧನೆ ಅವಶ್ಯಕವಿದೆ. ವಾಸ್ತವ ಅದೇನೆ ಇರಲಿ ಅವರು ಯಾವ ಜನಾಂಗದವರೇ ಆಗಿರಲಿ ಶರಣರ ಮೂಲ ಮತ್ತು ಜಾತಿಗಳು ನಮಗೆ ಮುಖ್ಯವಲ್ಲ. ಏಕೆಂದರೆ ಶರಣರು ಈ ಅಸಮಾನತೆಯನ್ನೆಲ್ಲಾ ಮೀರಿ ಬೆಳೆದ ಮೇರು ಪರ್ವತವಾಗಿದ್ದರು. ಹೀಗೆ ಬಿಬ್ಬಿ ಬಾಚಯ್ಯನವರು ಕೈಕೊಂಡ ಕಾಯಕ ಅವರ ವಿಚಾರ ಧೋರಣೆಗಳು ನಮಗೆ ಮೂಲಾಧಾರವಾಗಿರಲಿ ಆ ನಿಟ್ಟಿನಲ್ಲಿ ನನ್ನ ವಿಚಾರವನ್ನು ತಮ್ಮೊಂದಿಗೆ ಹಂಚಿಕೊಳ್ಳುವೆ.

ಬಿಬ್ಬಿ ಬಾಚಯ್ಯನವರು ಕೈಕೊಂಡಿರುವ ಒಟ್ಟು ಕಾಯಕದ ಪ್ರಕ್ರಿಯೆಯಲ್ಲಿ ಸರ್ವ ಜನಾಂಗದ ಮಧ್ಯೆ ಸಮಾನತೆಯನ್ನು ತಂದ ಸಮಾಜಮುಖಿ, ಕ್ರಾಂತಿಕಾರಕ ಪಥದಲ್ಲಿ ಕಾಲಿರಿಸಿದ ವಿಶಿಷ್ಟ ಬಗೆಯ ಚಿಂತಕರೆನ್ನಬಹುದು. ಇವರೊಬ್ಬ ವಿದ್ವಾಂಸ ಮತ್ತು ಜ್ಞಾನಿಯಷ್ಟೇ ಅಲ್ಲ ಒಬ್ಬ ಶ್ರೇಷ್ಠ ಶರಣ; ಅದಕ್ಕೂ ಹೆಚ್ಚಾಗಿ ಒಬ್ಬ ಶ್ರೇಷ್ಠ ಭಕ್ತ. ಇವರು ಕೈಕೊಂಡ ಕಾಯಕದ ಬಗೆಗೇ ಅಂದಿನ ವಿಪ್ರರು ವಿರೋಧಿಸುತ್ತಾರೆ. ಎಲ್ಲಾ ಜಾತಿಯ ಜನರ ಮನೆಯಿಂದ ಬೇಡಿ ತಂದ ಅನ್ನವನ್ನು ಎಂಜಲು ಎಂದು ವಿರೋಧಿಸಿ ನಿಂದಿಸುತ್ತಾರೆ. ಅಷ್ಟೇ ಅಲ್ಲ ಹೊಲೆಯರ ಮನೆಯ ಅನ್ನವನ್ನು ತಂದು ಜಾತಿ ದ್ರೋಹದ ನೀಚ ಕೆಲಸ ಮಾಡುತ್ತಿದ್ದೀಯಾ

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ–೫೮೫೧೦೨ ಮೊ: ೯೯೪೫೪೩೬೮೪೨

ನೀತಿ ನಿಯಮಗಳನ್ನು ಮೀರುತ್ತಿರುವ ನೀನು ಊರನ್ನು ಪ್ರವೇಶಿಸಬೇಡ ಎಂದು ಆತ ಸಂಗ್ರಹಿಸಿದ ಅನ್ನವನ್ನು ಲೂಟಿ ಮಾಡಿ ವಿರೋಧಿಸುತ್ತಾರೆ. ಆದರೆ ಬಾಚಯ್ಯನವರು ಹೀಗೆ ಸಂಗ್ರಹಿಸಿದ ಅನ್ನ, ಪದಾರ್ಥವನ್ನು ಮೊದಲು ಶಿವನಿಗೆ ಅರ್ಪಿಸಿ, ಪ್ರಸಾದವನ್ನಾಗಿಸಿ ನಂತರ ಭಕ್ತಿ ಶ್ರದ್ಧೆಯಿಂದ ದಾಸೋಹ ಮಾಡುತ್ತಿರುವ ಕಾರಣ ಇಲ್ಲಿ ಆ ಜಾತಿ, ಈ ಜಾತಿ ಎಂಬ ಭೇದವೆಣಿಸುವುದು ಸೂಕ್ತವಲ್ಲ.

ಇಂದಿನ ಸರ್ಕಾರದ ವ್ಯವಸ್ಥೆಯಲ್ಲಿಯೂ ಸಹ ಇದೇ ಶರಣನ ಕಾಯಕ ತತ್ವವನ್ನು ನಾವು ಕಾಣುವುದಿಲ್ಲವೇ? ದೇಶದ ಎಲ್ಲಾ ವರ್ಗ ಬಾಂಧವರಿಂದ ಸಂಗ್ರಹಿಸಿದ ತೆರಿಗೆ (ಇದು ಬಾಚಯ್ಯನ ಬೇಡಿ ತಂದ ಅನ್ನವೆನ್ನಬಹುದಲ್ಲವೇ?) ಯನ್ನು ಸರ್ಕಾರದ ಬೊಕ್ಕಸಕ್ಕೆ ತೆಗೆದುಕೊಂಡು ಸರ್ಕಾರದ ಹಣವೆಂದು ಪರಿಗಣಿಸಿ (ಇದು ಬಾಚಯ್ಯನವರು ದೇವರಿಗೆ ಅರ್ಪಿಸುವ ಮೂಲಕ ಪ್ರಸಾದ ಮಾಡಿದಂತೆ) ನಂತರ ವಿವಿಧ ಸರ್ಕಾರದ ಯೋಜನೆಗಳ ಮೂಲಕ ಜನಸಾಮಾನ್ಯರಿಗೆ ವಿನಿಯೋಗಿಸುವ (ಇದು ಬಾಚಯ್ಯನವರು ಕೈಕೊಳ್ಳುವ ದಾಸೋಹದ ಮೂಲಕ ಆಹಾರವನ್ನು ಹಂಚುವ) ವಿಧಾನಕ್ಕೂ ಬಿಬ್ಬಿ ಬಾಚಯ್ಯನ ಕಾಯಕದ ವಿಧಾನಕ್ಕೂ ಏನಿದೆ ವ್ಯತ್ಯಾಸ? ಹಾಗೆ ನೋಡಿದರೆ ಇಂದಿನ ಸರ್ಕಾರದ ವ್ಯವಸ್ಥೆಯನ್ನೂ ಸಹ ವರ್ಣಾಶ್ರಮದ ಮೇಲಿನ ವರ್ಗ ವಿರೋಧಿಸಬೇಕಿತ್ತಲ್ಲ? ವಿರೋಧಿಸದೇ ಎಲ್ಲರೂ ಅದರ ಲಾಭ ಪಡೆಯಲು ಮುಂದಾಗುತ್ತಾರಲ್ಲವೇ! ವಿಪ್ರರ ಈ ಧೋರಣೆಯನ್ನೇ ಅಂದಿನ ಬಾಚಯ್ಯನವರು ವಿರೋಧಿಸಿ ಅವರ ವಿರುದ್ಧ ಬೊಬ್ಬಿರಿದ ಕಾರಣ ಈ ಶರಣರಿಗೆ ಬೊಬ್ಬಿ ಬಾಚಯ್ಯನೆಂದು ಗುರುತಿಸಿ ಮುಂದೆ ಬಿಬ್ಬಿ ಬಾಚಯ್ಯ ನಾದರು.

**"**ಕುಂಬಾರನಿಂದ ತಯಾರಿಸಿದ ಪ್ರಣತಿಯಲ್ಲಿ ಗಾಣಿಗನ ಎಣ್ಣೆಯನ್ನು ಬಳಸಿ ಒಕ್ಕಲಿಗನ ಬತ್ತಿಗೆ ವರ್ತಕ(ವೈಶ್ಯ)ನಿಂದ ತಂದ ಬೆಂಕಿ ಕಡ್ಡಿಯಿಂದ ಅರ್ಚಕ(ವಿಪ್ರ)ನೊಬ್ಬ ಹಚ್ಚಿದ ದೀಪಕ್ಕೆ ಯಾವ ಜಾತಿ?**"** ಎಂಬಂತೆ ವರ್ಣಾಶ್ರಮದ ತುತ್ತ ತುದಿಯಲ್ಲಿರುವ ವಿಪ್ರನ ರಕ್ತವೂ ಕೆಂಪು, ಅಂತ್ಯಜನ ರಕ್ತವೂ ಕೆಂಪು, ಇವರುಗಳೆಲ್ಲಾ ಉಸಿರಾಡುವ ಗಾಳಿ, ಕುಡಿಯುವ ನೀರು, ಬಳಸುವ ಪ್ರಸಾದ, ಪಂಚಮಹಾಭೂತಗಳಿಂದ ತಯಾರಾದ ಶರೀರ ಹೀಗೆ ಎಲ್ಲದರಲ್ಲೂ ಒಂದೇ ಭಾವ, ವಸ್ತು, ಅಂಶಗಳಿರುವಾಗ ತಿಳಿಗೇಡಿಗಳು ಹುಟ್ಟುಹಾಕಿದ ಜಾತಿ ವ್ಯವಸ್ಥೆಗೆ ನೀರುಣಿಸಿ ಪೋಷಿಸುವುದೇಕೆಂಬುದು ನನಗಿನ್ನು ತಿಳಿಯದ ವಿಸ್ಮಯವಾಗಿದೆ.

ಬಿಬ್ಬಿ ಬಾಚಯ್ಯನವರ ಶರಣ ಬದುಕನ್ನು ಅವಲೋಕಿಸಿದರೆ ಅವ್ಯವಸ್ಥೆಯ ವಿರುದ್ಧ ಹೋರಾಟದ ಮನೋಭಾವವನ್ನು, ಧೀರತೆಯನ್ನು ತೋರ್ಪಡಿಸಿದ್ದು ಬಹಳಷ್ಟು ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಇವರಲ್ಲಿಯ ಅಪಾರ ಜ್ಞಾನದ ಹಿನ್ನೆಲೆ ಹೀಗಿರಬಹುದು, ಇವರು ಬ್ರಾಹ್ಮಣರ ಅಗ್ರಹಾರದಲ್ಲಿದ್ದಾಗ ಅಲ್ಲಿನ ಅನೇಕ ವಿದ್ವಾಂಸರ ಮಕ್ಕಳ ಸಲುವಾಗಿ ಆಗಾಗ ವಿದ್ವತ್ ಸಭೆಗಳು, ವಿಚಾರ ಗೋಷ್ಠಿಗಳು ನಡೆಯುತ್ತಿರುವ ಕಾರಣ ಬ್ರಾಹ್ಮಣ ಸಂಪ್ರದಾಯದಂತೆ ಅವರಿಗೂ ಅವೆಲ್ಲದರ ಪಾಠ ಮತ್ತು ಪುರಾಣ, ಉಪನಿಷತ್ತುಗಳ ಓದುವಿಕೆಯ ಅವಕಾಶ ದೊರೆತು ಜ್ಞಾನಿಗಳಾಗಿರಬಹುದು. ಅಲ್ಲದೇ ಇವರು ಅಷ್ಟೇ ಆಸಕ್ತಿಯಿಂದ ಶಿವಾನುಭವ ಶಾಸ್ತ್ರವನ್ನು ಅಭ್ಯಾಸ ಮಾಡಿದ ಕಾರಣ ಶಿವಾಚಾರ ಹೆಚ್ಚು ಆಕರ್ಷಿಸಿರಬಹುದಾದ ಕಾರಣ ಇವರು ಲಿಂಗಧಾರಣೆ ಮಾಡಿಕೊಂಡು ಶರಣ ಪರಂಪರೆಯ ಕಾಯಕ – ಪ್ರಸಾದ ದಾಸೋಹಗಳಿಗೆ ಮಹತ್ವ ನೀಡಿ ಇದೇ ಕಾಯಕದಿಂದ ಇವರು ಮಹಾ ದಾಸೋಹಿಯಾಗಿರಬಹುದು. ಹೀಗೆ ಎರಡೂ ರೀತಿಯ ಜ್ಞಾನವನ್ನು ಸಂಪಾದಿಸಿದ ಅಪಾರ ಜ್ಞಾನಿಗಳಾಗಿ ತಮ್ಮ ಸ್ವಯಂ ವಿವೇಚನೆಯಿಂದ ಅಂತಿಮವಾಗಿ ಶರಣ ತತ್ವ ಆಯ್ಕೆ ಮಾಡಿಕೊಂಡಿರಬೇಕಾದರೆ ಇವರ ಜ್ಞಾನದ ಆಳ ಮತ್ತು ಶರಣ ತತ್ವದ ಮಹತ್ವ ಎಷ್ಟಿರಬಹುದೆಂದು ಶರಣಾಭಿಮಾನಿಗಳು ಊಹಿಸಿಕೊಳ್ಳಬೇಕು.

ಅವರು ಅನುಭಾವಿಕ ನೆಲೆಯಲ್ಲಿ ರಚಿಸಿರುವ ಕೆಲವು ವಚನಗಳನ್ನು ನಾನು ಪಚನ ಮಾಡಿಕೊಂಡಿರುವ ಪರಿಯನ್ನು ತಮ್ಮೊಂದಿಗೆ ಹೀಗೆ ಹಂಚಿಕೊಳ್ಳಬಯಸುವೆ.

**ಓಂಕಾರ ಪ್ರಥಮದಲ್ಲಿ ದಿವ್ಯ ನಿರಾಲಂಬ ಮೂರ್ತಿ,**
**ಜಗಹಿತಾರ್ಥವಾಗಿ ತತ್ತಾದಲ್ಲಿ ಪಂಚಬ್ರಹ್ಮಸಾಕಾರ**
**ಮೂರ್ತಿ, ಲೀಲಾಸಂಭವವಾದಲ್ಲಿ ಅಣುವಿಂಗಣು,**
**ಮಹತ್ತಿಗೆ ಮಹತ್ತಾದಲ್ಲಿ ಅಂಗ ಕರಂಡ ಆತ್ಮಾನುಗಂಥ**
**ನೀನಾದೆಯಲ್ಲಾ ಏಣಾಂಕಧರ ಸೋಮೇಶ್ವರ ಲಿಂಗ.**

ಬಿಬ್ಬಿ ಬಾಚಯ್ಯನವರ ಹಲವಾರು ವಚನಗಳಲ್ಲಿ ನನಗೆ ಅತ್ಯಂತ ಮನಸೆಳೆದದ್ದು ಮತ್ತು ಬ್ರಹ್ಮಾಂಡ ಸೃಷ್ಠಿಯ ಬಗೆಗೆ ಅತ್ಯಂತ ವೈಜ್ಞಾನಿಕವಾಗಿ ಚಿಂತನೆಗೆ ಈಡಾಗಿಸಿದ್ದು ಮೇಲಿನ ವಚನವಾಗಿದೆ. ಈ ವಚನ ಪಚನ ಮಾಡಿಕೊಳ್ಳುವುದೇ ಒಂದು ಸವಾಲಿನ ಸಂಗತಿ. ಏನೂ ಇಲ್ಲದ ನಿರವಯ ಸ್ಥಿತಿಯಲ್ಲಿ ಓಂಕಾರ ಸ್ವರೂಪನಾದ ನಿರಾವಲಂಬಿ ದೇವನು ಪ್ರಪಂಚದ ಒಳಿತಿಗಾಗಿ ಸಾಕಾರಗೊಳ್ಳುವ ಅಂದರೆ ಅಣು ರೂಪದಲ್ಲಿದ್ದ ಆರಂಭದ ಸ್ಫೋಟದ ಪ್ರಕ್ರಿಯೆ ಇಲ್ಲಿ ಧ್ವನಿಸುತ್ತದೆ. ಆ ಸ್ಫೋಟದಿಂದಾದ ಅಣುಗಳು ಒಂದಕ್ಕೊಂದು ಕೂಡುತ್ತಾ ಮಹತ್ ಆಗಿ ವಿವಿಧ ಗ್ರಹ, ನಕ್ಷತ್ರಗಳಾಗುವ ಮೂಲಕ ಬ್ರಹ್ಮಾಂಡ ಸೃಷ್ಟಿಯ ಆ ದಿವ್ಯವಾದ ಶಕ್ತಿಯ ಆತ್ಮ ಪರಮಾತ್ಮದ ಬಗೆಗೆ ಇಡೀ ದೈವವನ್ನು ತಮ್ಮ ಸೊಬಗಿನ ಭಾಷೆಯ ಬೆಡಗಿನ ವಚನದ ಮೂಲಕ ವರ್ಣಿಸುತ್ತಾ ವೈಜ್ಞಾನಿಕ ಮತ್ತು

ಸೃಷ್ಟಿಯ ರಹಸ್ಯದ ಬಗೆಗೆ ವಿಷಯವನ್ನು ಬಯಲು ಮಾಡುವ ಅವರ ಜ್ಞಾನ ನಿಜಕ್ಕೂ ವಿಸ್ಮಯ ಮತ್ತು ಅಪಾರವಾದದ್ದು. ಅವರ ಇನ್ನೊಂದು ವಚನ ಹೀಗಿದೆ,

**ಅಗ್ನಿಲೋಹದಂತೆ ಫಲ ರಸದಂತೆ ಕಾಯ**
**ಜೀವದ ಪರಿಯಂತೆ ಅಂಗ ನೆಳಲಿನಂತೆ ಅಂಗ**
**ಲಿಂಗ ಸಂಬಂಧವಾಗಬೇಕು ಏಣಾಂಕಧರ**
**ಸೋಮೇಶ್ವರ ಲಿಂಗದಲ್ಲಿ.**

ಈ ವಚನದಲ್ಲಿ ನಾವು ಭೂಮಿಯಲ್ಲಿ ಯಾವ ಬೀಜವನ್ನು ಬಿತ್ತುತ್ತೇವೆ ಅದರ ಫಲವನ್ನೇ ಪಡೆಯುತ್ತೇವೆ. ಅದೇ ರೀತಿ ನಮ್ಮ ಶರೀರವು ತನ್ನ ಸಾಮರ್ಥ್ಯಕ್ಕನುಸಾರವಾಗಿ ಕಾಯಕ ಮಾಡುತ್ತದೆ. ಶರೀರಕ್ಕೆ ಲಿಂಗ ನೆರಳು ಇದ್ದಂತೆ ಶರೀರ ಮತ್ತು ಲಿಂಗಗಳ ಸಂಬಂಧವಿರಬೇಕೆಂದು ತಿಳಿಸಿದ್ದಾರೆ. ಮೇಲಿನ ವಚನ ನನಗೆ ಹೆಚ್ಚು ಇಷ್ಟವಾಗಿರುವುದಕ್ಕೆ ಕಾರಣ ನಾವೇ ಬಿತ್ತಿದ ಬೀಜದಂತೆ ನಾವು ಫಲವನ್ನು ಪಡೆಯಬೇಕಾಗುತ್ತದೆ ಎಂಬ ಮಾತು ನಿಜಕ್ಕೂ ನಾವು ಹೀಗೆಯೂ ಅರ್ಥೈಸಿಕೊಳ್ಳಬಹುದು. ನಾವು ಇತರರಿಗೆ ಏನು ಮಾಡುತ್ತೇವೆ ಮತ್ತು ಏನನ್ನು ಬಯಸುತ್ತೇವೆ ಆ ದೇವರೂ ನಮಗೆ ಅದನ್ನೇ ಮಾಡುತ್ತಾನೆ ಮತ್ತು ದಯಪಾಲಿಸುತ್ತಾನೆ ಎಂಬ ತತ್ವದಂತೆ ನಾವುಗಳೆಲ್ಲಾ ಸಮಾಜಮುಖಿಯಾಗಿ, ಜಂಗಮಮುಖಿಯಾಗಿ ಶರಣರ ಧ್ಯೇಯ ಮಂತ್ರವಾದ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದಲ್ಲಿ ನಮಗೆಲ್ಲಾ ಒಳ್ಳೆಯದೇ ಆಗುವುದು ಅಂತಹದ್ದೊಂದು ಧೋರಣೆಯಿಂದ ಎಲ್ಲರೂ ವರ್ತಿಸಿದಲ್ಲಿ ಇಡೀ ಜಗತ್ತು ಸರ್ವ ಜನಾಂಗದ ಶಾಂತಿಯ ತೋಟವಾಗುವುದರಲ್ಲಿ ಸಂದೇಹವಿಲ್ಲ.

**ಹುತ್ತದೊಳಗಣ ಹಾವ, ಮಡುವಿನೊಳಗಣ ಮತ್ಸ್ಯವ ಮಹಾಕಾನನದ ವಾನರವ ಹಿಡಿವ ಪರಿಯಿನ್ನೆಂತೋ? ಹುತ್ತವನಗಿದು, ಮಡುವ ಹೂಳಿ, ಕಾನನವ ತರಿದು ಇಂತಿವ ಹಿಡಿಯಬೇಕು ಸಕಲೇಂದ್ರಿಯದೊಳಗಿರ್ದು ವಸ್ತುವನರಿದೆನೆಂಬ ಮಿಟ್ಟೆಯ ಭಂಡರನೊಪ್ಪ ಏಣಾಂಕಧರ ಸೋಮೇಶ್ವರ ಲಿಂಗ.**

ಮೇಲ್ನೋಟಕ್ಕೆ ಈ ವಚನ ಸರಳವಾಗಿದ್ದರೂ ಮಾರ್ಮಿಕವಾಗಿದೆ. ಹುತ್ತದೊಳಗಿನ ಹಾವನ್ನು ಅಗೆದು ಹಿಡಿಯಬಹುದು, ಅದೇ ರೀತಿ ಸಂಗ್ರಹವಾದ ನೀರನ್ನು ಬತ್ತಿಸಿ ಮೀನಗಳನ್ನು ಹಿಡಿಯಬಹುದು, ಮರದಿಂದ ಮರಕ್ಕೆ ಹಾರುವ ಕೈಗೆ ಸಿಗದೇ ತಪ್ಪಿಸಿಕೊಳ್ಳುವ ಕೋತಿಯನ್ನು ಹಿಡಿಯಲು ಕಾಡನ್ನೂ ಸವರಿಯಾದರೂ ಪ್ರಯತ್ನಿಸಬಹುದು. ಕಣ್ಣಿಗೆ ಗೋಚರವಾಗುವ ಇವುಗಳನ್ನೇ ಹಿಡಿಯಲು ನಮಗೆ ಇಷ್ಟೊಂದು ಕಷ್ಟವಾಗಿರುವಾಗ ಸಕಲೇಂದ್ರಿಯಗಳ ಮಧ್ಯೆ ಗುಪ್ತವಾಗಿರುವ ಪರಮ ಸತ್ಯವನ್ನು ನಾನು ತಿಳಿದಿರುವೆನೆನ್ನುವುದು ಒಪ್ಪಲಾಗದು ಎನ್ನುತ್ತಾರೆ. ಇದೇ ರೀತಿ ನಮ್ಮ ಸಕಲ ಇಂದ್ರಿಯುಗಳಲ್ಲಿ ಸುಪ್ತವಾಗಿರುವ ಅರಿಷಡ್ವರ್ಗಗಳನ್ನೇ ನಿಯಂತ್ರಿಸಲಾಗದಿರುವಾಗ ನಾನು ಪರಮ ಸತ್ಯವನ್ನು ತಿಳಿದುಕೊಂಡಿರುವೆನೆಂಬುದು ಮೂರ್ಖತನವಷ್ಟೆ. ಹೀಗೆ ಬೆಡಗಿನ ವಚನಗಳಲ್ಲಿ ಹೋಲಿಕೆ ಮಾಡುವ ಮೂಲಕ ಅತ್ಯಂತ ಮಾರ್ಮಿಕ ವಿಚಾರಗಳ ಬಗೆಗೆ ನಮಗೆ ಚಿಂತನೆಗೆ ಹಚ್ಚುವ ಅವರ ಪರಿ ಮತ್ತು ಧೋರಣೆಗಳಿಂದ ನನಗೆ ನಿಜಕ್ಕೂ ಅವರೊಬ್ಬ ಅದ್ಭುತ ಮೇಧಾವಿಯಾಗಿದ್ದರೆನಿಸುತ್ತದೆ. ಬಸವಣ್ಣನವರ ಸಮಕಾಲಿನರಾದ ಇವರು ಕಾಯಕ ನಿಷ್ಠೆ, ಭಕ್ತಿ ಜೀವನದಲ್ಲಿ ಬದುಕಿ ಅನುಭಾವಿಕ ನೆಲೆಯಲ್ಲಿ ಹಲವಾರು ವಚನಗಳ ಮೂಲಕ ಸಮಾಜದ ಓರೆಕೋರೆಗಳನ್ನು ತಮ್ಮ ಮೊನಚಾದ ನುಡಿಗಳ ಮೂಲಕ ತಿದ್ದಿ ತೀಡಲು ಪ್ರಯತ್ನಿಸಿರುವುದು ಸ್ಪಷ್ಟವಾಗುತ್ತದೆ.

ಮುಂದೆ ಇವರು ಈಗಿನ ರಾಯಚೂರು ಜಿಲ್ಲೆಯ ಸುಗೂರೇಶ್ವರ ಕ್ಷೇತ್ರದಲ್ಲಿ ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ ಬಯಲಾದರೆಂದು ಅವರು ಅಂದು ಬಯಲಾದ ಸ್ಥಳವೇ ಇಂದಿನ ಸುಪ್ರಸಿದ್ಧ ಶ್ರೀ ಸೂಗೂರೇಶ್ವರ ಕ್ಷೇತ್ರವೆಂದು ಖಚಿತಪಡಿಸಿಕೊಂಡಿರುತ್ತಾರೆ. ಶರಣರ ಜನನ, ಬದುಕು, ಬಯಲಾಗಿರುವ ಸ್ಥಳ, ಜನಾಂಗ, ಪರಿಸರ, ಇತಿಹಾಸ ಕೆದಕುವುದು ಅಷ್ಟೊಂದು ಸರಳವಲ್ಲ. ಕೆದಕಿದಷ್ಟು ಗೋಜಲಾಗುವುದು, ಏಕೆಂದರೆ ನಮ್ಮ ಶರಣರೆಲ್ಲರೂ ಅತ್ಯಂತ ಸರಳ ಜೀವಿಗಳು ತಮ್ಮ ಸಾಧನೆ ಐತಿಹಾಸಿಕ ವಿವರಗಳನ್ನು ಎಲ್ಲಿಯೂ ದಾಖಲಿಸಲು ಪ್ರಯತ್ನಿಸಲಿಲ್ಲ. ಆ ಕುರಿತು ಯೋಚಿಸಲೂ ಇಲ್ಲದ ಕಾರಣ ಅವರ ಬದುಕಿನ ದಾಖಲೆಗಳಿಗಿಂತ ಅವರ ವಿಚಾರ ಮತ್ತು ಧೋರಣೆಗಳನ್ನು ಮಾತ್ರ ನಾವು ಪರಿಗಣಿಸಿ ನಮ್ಮ ಅರಿವಿನ ಹರುಹು ವಿಸ್ತರಿಸಿಕೊಳ್ಳುವುದು ಮುಖ್ಯ. ಆದರೂ ಈ ಮಹಾಶರಣನ ಬಗೆಗೆ ಇನ್ನಷ್ಟು ವೈಚಾರಿಕ, ಸಂಶೋಧನಾತ್ಮಕವಾಗಿ ಪರಿಶೋಧಿಸಬೇಕಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಅವರಂತೆ ನಡೆಯೊಳಗೆಯೇ ನುಡಿಯನ್ನೊಂದಾಗಿಸಿಕೊಂಡಿರುವ ಪರಿಯನ್ನೂ ನಮ್ಮದಾಗಿಸಿಕೊಳ್ಳಬೇಕಿದೆ.

■■